ಕಲಿತ ವಿದ್ಯಾಲಯಕೆ ಚಿರಋಣಿ ಎಂದೆಂದೂ!

✍: **ವರ್ಷಾ,** II PUC SEBA

# ಮಾತು

✍: ಸಾಕ್ಷಿ
9ನೇ ತರಗತಿ, ಕನ್ನಡ ಮಧ್ಯಮ

**"ಮಾ**ತಿನಿಂ ಸಕಲ ಸಂಪದವು ಲೋಕಕ್ಕೆ ಮಾತೇ ಮಾಣಿಕ್ಯ" ಎಂದು ಸರ್ವಜ್ಞನು ಹೇಳಿದ್ದಾರೆ. ಮಾತಿನಿಂದ ಮನೆ ಕಟ್ಟಬಹುದು. ಮಾತಿನಿಂದಲೇ ಮನೆ ಒಡೆಯಬಹುದು. ಕೇವಲ ಒಂದು ಮಾತಿನಿಂದ ಪ್ರಾಣ ಕಳೆದುಕೊಂಡವರೆಷ್ಟೋ. ಹಾಗೆಯೇ ಕೇವಲ ಒಂದು ಮಾತಿನಿಂದ ಇನ್ನೊಬ್ಬರ ಪ್ರಾಣವನ್ನು ಉಳಿಸಲು ಕೂಡ ಸಾಧ್ಯ. ಸರ್ವಜ್ಞ ಹೇಳಿದಂತೆ, 'ಮನುಷ್ಯನ ಬದುಕಿನಲ್ಲಿ ಮಾತು ಎಂಬುದು ಒಂದು ಸಂಪತ್ತೇ ಸರಿ.' ಆದ್ದರಿಂದ ಅದನ್ನು ವ್ಯರ್ಥ ಮಾಡದೆ ಬಹಳ ಎಚ್ಚರಿಕೆಯಿಂದ ಬಳಸಬೇಕಾದದ್ದು ಅಗತ್ಯ. ಮಾತನ್ನು ಪರಿಜ್ಞಾನದಿಂದ, ವಿವೇಕದಿಂದ ಬಳಸಿದಾಗ ಅದು ವ್ಯಕ್ತಿಗೆ ಘನತೆ, ಗೌರವವನ್ನು ತರುತ್ತದೆ. ವಿವೇಚನೆ ಇಲ್ಲದೆ ಮಾತಾಡಿದರೆ ವ್ಯಕ್ತಿಯ ಮೌಲ್ಯ ಕಡಿಮೆಯಾಗುತ್ತದೆ. ಕೆಲವು ಬಾರಿ ಮಾತು ಅಪಾರವಾದ ಹಾನಿಗೆ ಕಾರಣವಾಗಬಹುದು. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬುದು ಅಕ್ಷರಶಃ ನಿಜ. ನಮ್ಮ ಮನಸ್ಸಿನಲ್ಲಿ ಮೊದಲು ಮೂಡುವುದು ಒಂದು ಭಾವನೆ ಅಥವಾ ವಿಚಾರ. ಆ ಬಳಿಕ ಅದು ಮಾತಿನ ಮೂಲಕ ಪ್ರಕಟಗೊಳ್ಳಬಹುದು; ವಿಚಾರ ಸ್ವಂತದ್ದಿರಬಹುದು. ಓದಿ ಅಥವಾ ಕೇಳಿ ತಿಳಿದುದಾಗಿರಬಹುದು. ಆದರೂ ವಿಚಾರ ಮೊದಲು. ಅನಂತರ ಮಾತು. ಆದ್ದರಿಂದ ಮಾತಿಗೆ ವಿಚಾರ ಅಗತ್ಯ. ಈ ಶಕ್ತಿ ಅಥವಾ ಗುಣ ವ್ಯಕ್ತಿಗೆ ಎಲ್ಲಿಂದ ಬರುತ್ತದೆ? ಹೇಗೆ, ಈಜು ಕಲಿತಾಗಲೇ ಈಜು ಬರುತ್ತದೆಯೋ, ಹಾಗೆಯೇ ವಿಚಾರ ಮಾಡಿದಾಗಲೇ ವಿಚಾರಶಕ್ತಿ ಬೆಳೆಯುತ್ತದೆ. ಆದ್ದರಿಂದ ವಿಚಾರ ಮಾಡುವುದನ್ನು ಅಭ್ಯಾಸ ಮಾಡಿ ಹೇಳಬೇಕಾಗುತ್ತದೆ. ವಿಚಾರಶಕ್ತಿ ಹೆಚ್ಚಿದಂತೆ ವೈಜ್ಞಾನಿಕವಾಗಿ ಆಲೋಚಿಸಲು ಸಾಧ್ಯ. ರೂಢಿಗತವಾದ ಪೂರ್ವಗ್ರಹಗಳನ್ನು ತೊಡೆದು ಹಾಕಲು ಅನಾವಶ್ಯಕ ಲಕ್ಷ್ಮಣರೇಖೆಯಿಂದ ಹೊರಬರಲು ಸಾಧ್ಯವಾಗುತ್ತದೆ. 'ಸರ್ವರೊಳಗೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ' ಎಂದು ಸರ್ವಜ್ಞ ವಿನಯಪೂರ್ವಕವಾಗಿ ಹೇಳಿಕೊಂಡಿದ್ದಾನೆ. ಆದರೆ ಈ ಮಾತನ್ನು ಸರ್ವಜ್ಞ ಗರ್ವದಿಂದಿದ್ದಾನೆ ಎಂಬ ಮಾತಿನಿಂದ ಆರಂಭಿಸುತ್ತಾನೆ. ಇಲ್ಲಿ ಗರ್ವ ಎಂಬುದು ಅವನ ಸ್ವಂತಿಕೆ. ಅವನ ಆತ್ಮವಿಶ್ವಾಸ. ಇದೆಲ್ಲ ಲೋಕದಿಂದ ಬಂದದ್ದು ಎಂದು ಅವನು ಹೇಳಿದರೂ ಅವನು ಲೋಕದಿಂದ ಬಂದ ವಿಚಾರವನ್ನು ಹಾಗೆಯೇ ಸಾರುತ್ತಾ ಹೋಗಲಿಲ್ಲ. ಅವುಗಳನ್ನು ತನ್ನ ವಿಚಾರಶಕ್ತಿಯ ಮೂಸೆಯಲ್ಲಿ ಕರಗಿಸಿ, ತನ್ನ ಸ್ವಂತ ಮಾತಿನ ಮಂಟಪವನ್ನು ರಚಿಸಿದ್ದಾನೆ. ನಿಸರ್ಗದಲ್ಲಿರುವ ಅಸಂಖ್ಯಾತ ಮೃಗಪಕ್ಷಿಗಳೆಲ್ಲದಕ್ಕೂ ನಾಲಿಗೆಯಿದೆ. ಆದರೆ ಮಾತು ಇರುವುದು ಮನುಷ್ಯನ ಜಿಹ್ವೆಯಲ್ಲಿ ಮಾತ್ರ. ಮನುಷ್ಯರಿಗೆ ನೈಸರ್ಗಿಕವಾಗಿ ದೊರೆತಿರುವ ಈ ಗುಣ ಸಾಧಾರಣವಾದದ್ದಲ್ಲ. ಆದ್ದರಿಂದ ಅದನ್ನು ಬಳಸುವಾಗ ವಿವೇಚನೆಯಿಂದ ಬಳಸಬೇಕು. ಆಚಾರವಿಲ್ಲದ ನಾಲಗೆಯಾಗಬಾರದು.

***

# ಅಪ್ಪ

**ಕ**ತ್ತಲಲ್ಲಿ ನಡೆಯುತ್ತಿದ್ದಾಗ
ಬೆಳಕಿನೆಡೆಗೆ ಕರೆತಂದೆ
ನೋವೆಂಬ ಪ್ರವಾಹದಲ್ಲಿ ಮುಳುಗುತ್ತಿದಾಗ
ನಗುವೆಂಬ ಅಲೆಯಲ್ಲಿ ತೇಲಿಸಿದೆ.

ಕತ್ತಲಿಗೆ ಬೆಳಕಾಗಿ
ನೋವಿಗೆ ಸುಖವಾಗಿ
ಕಣ್ಣಿಗೆ ಕನಸಾಗಿ
ದೇವರಂತೆ ಬಂದೆ ನನ್ನ ಬದುಕಲ್ಲಿ

ದಿಕ್ಕು ತೋಚದೆ ನಿಂತಿದ್ದಾಗ
ಸರಿಯಾದ ದಾರಿಯಲ್ಲಿ ನಡೆಸಿದೆ
ನಾ ಸೋತು ಅತ್ತಾಗ
ಗೆಲುವೆಂಬ ಗುರಿ ತೋರಿಸಿದೆ.

ಅಪ್ಪಾ.....
ನಿನ್ನ ಋಣವ ನಾ ಹೇಗೆ ತೀರಿಸಲಿ
ಇನ್ನೊಂದು ಜನುಮವಿದ್ದರೆ
ನಾ ಹುಟ್ಟುವೆ ನಿನ್ನ ಮಗನಾಗಿ
ತೀರಿಸುವೆ ನಿನ್ನೀ ಋಣವ.

✍: ಸೃಜನ್
I PUC MEPS

# ಆ ಒಂದು ಕನಸು

✍: ಕಾರ್ತಿಕ್ ಎಸ್. ಹೆಗ್ಡೆ
I SEBA

**ಒಂ**ದು ಊರಿನಲ್ಲಿ ಒಬ್ಬ ಹುಡುಗ ಇದ್ದ. ಅವನು ಅವನ ತಂದೆ ಹೇಳಿದಂತೆ ಬದುಕ್ತಾ ಕಲಿಯುತ್ತಿದ್ದ. ಆದರೆ ಅವನಿಗೆ ತಾನು ಇಡೀ ದೇಶವನ್ನು ಸುತ್ತಬೇಕೆಂಬ ಆಸೆ ಇರುತ್ತದೆ. ಒಂದು ದಿನ ಅವನು ತನ್ನ ತಂದೆಯ ಬಳಿ ಹೋಗಿ ಸಂಚಾರಿ ಆಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದಾಗ, ಅವನ ತಂದೆ ಅವನ ಕನಸನನ್ನು ಒಪ್ಪಿ ಅವನಿಗೆ ಹಲವು ಕುರಿಗಳನ್ನು ಕೊಟ್ಟು ಕಳಿಸುತ್ತಾನೆ. ಆ ಹುಡುಗ ಹಲವಾರು ವರ್ಷಗಳ ಕಾಲ ಕುರಿಗಳನ್ನು ಮೇಯಿಸುತ್ತಾ ಹಲವು ಕಡೆ ತನ್ನ ದೇಶದಲ್ಲಿ ಸುತ್ತಿದ. ಹಾಗೆ ಒಂದು ದಿನ ಅವನ ಕನಸಿನಲ್ಲಿ ಅವನಿಗೆ ಈಜಿಪ್ಟಿನ ಗೋಪುರಗಳಲ್ಲಿ ನಿಧಿ ದೊರೆಯುವ ಕನಸು ಬಂದಿತು. ಅದು ತುಂಬಾ ಸಲ ಬಂತು. ಆಗ ಆ ಹುಡುಗ ಅದು ಸತ್ಯವೋ ಸುಳ್ಳೋ ಎಂದು ತಿಳಿಯದೇ ಒಬ್ಬ ಜ್ಯೋತಿಷಿ ಬಳಿ ಹೋಗಿ ಕೇಳಿದಾಗ ಅವನು, ಅದು ಸತ್ಯ. ನೀನು ನನಗೆ ಯಾವುದೇ ಹಣ ಕೊಡುವುದು ಬೇಡ. ಒಂದು ವೇಳೆ ನಿನಗೆ ನಿಧಿ ದೊರೆತರೆ ಅದರಲ್ಲಿ ಹತ್ತಷ್ಟು ಕೊಡಬೇಕು ಎಂದ.

ಆ ಹುಡುಗ ಈಗ ಏನು ಮಾಡುವುದು, ಅಲ್ಲಿಗೆ ಹೇಗೆ ಹೋಗುವುದು ಎಂದು ತಿಳಿಯದೆ ಇದ್ದಾಗ ಅವನಿಗೆ ಒಬ್ಬ ಮುದುಕ ಸಿಗವನು. ಆ ಮುದುಕ ಹುಡುಗನ ಬಳಿ ಅವನ ಕನಸಿನ ಬಗ್ಗೆ ಅವನಿಗೆ ಹೇಳಿದಾಗ ಆಶ್ಚರ್ಯದಿಂದ ನೋಡಿ, ಅವನು, ನಾನೊಬ್ಬ ಹಳೆಯ ರಾಜ. ನಿನಗೆ ಎರಡು ಹವಳಗಳನ್ನು ನೀಡುವೆ. ಅದು ನಿನಗೆ ಕಷ್ಟದ ಸಮಯದಲ್ಲಿ ಸಹಾಯ ಮಾಡುತ್ತದೆ. ಆದರೆ, ಅದರ ಬದಲಿಗೆ ನೀನು ನನಗೆ ನಿನ್ನ ಅರ್ಧದಷ್ಟು ಕುರಿಯ ಗುಂಪನ್ನು ನೀಡಬೇಕು ಎಂದ. ಆಗ ಆ ಹುಡುಗ ಆರು ಕುರಿಗಳನ್ನು ಕೊಟ್ಟು, ಹವಳಗಳನ್ನು ತೆಗೆದುಕೊಂಡು ಹೊರಟ. ಅದರ ನಂತರ ಅವನು ಆ ಮರಳುನಾಡಿಗೆ ಹೋಗುವ ಜಾಗಕ್ಕೆ ಹೋದ. ಆಗ ಏನು ಮಾಡುವುದು ಎಂದು ತಿಳಿಯದೆ ನಗರದ ಮಧ್ಯ ನಿಂತಿದ್ದ. ಆಗ ಅಲ್ಲಿಗೆ ಒಬ್ಬ ವ್ಯಾಪಾರಿ ಬಂದು ಅವನಿಗೆ ಸಹಾಯ ಮಾಡುತ್ತಾನೆ. ಅವನು ವ್ಯಾಪಾರಿಯ ಬಳಿ ಕೆಲಸಕ್ಕೆ ಸೇರುವನು. ಆ ಹುಡುಗ ಒಂದು ದಿನ ತನ್ನ ಕನಸಿನ ವಿಚಾರವನ್ನು ವ್ಯಾಪಾರಿಗೆ ಹೇಳಿ, ಆ ಮರುಳುಗಾಡಿಗೆ ಹೇಗೆ ಹೋಗುವುದೆಂದು ಕೇಳಿದ. ಆಗ ಆ ವ್ಯಾಪಾರಿಯು, ನೀನು ಮೊದಲು ಒಂದು ಒಂಟೆ ಖರೀದಿಸಬೇಕು ಎಂದು ಹೇಳಿದ. ಅದಕ್ಕೆ ಆ ಹುಡುಗನು, ನನ್ನ ಬಳಿ ಅಷ್ಟೊಂದು ಹಣವಿಲ್ಲ. ನಾನು ನಿಮ್ಮ ಬಳಿ ಕೆಲಸ ಮಾಡುವೆ, ನನಗೆ ಹಣ ಕೊಡಿ ಎಂದು ಕೇಳಿದಾಗ, ಆ ವ್ಯಾಪಾರಿಯು ಒಪ್ಪಿದನು.

ಹಲವು ವರ್ಷಗಳ ನಂತರ ಅವನ ಬಳಿ ತುಂಬಾ ಹಣ ಒಟ್ಟಾಯಿತು. ಆಗ ಅವನು ತಾನು ಈಗ ಮತ್ತೆ ಆ ಕನಸಿನ ನಿಧಿಗಾಗಿ ಹುಡುಕುವುದೋ ಅಥವಾ ಈಗ ಇರುವ ಹಣದಿಂದಲೇ ಜೀವನ ಸಾಗಿಸುವುದೋ ಎಂದು ಯೋಚಿಸಿದ. ಆಗ ಅವನಿಗೆ ಆ ಹವಳಗಳ ನೆನಪಾಯಿತು. ಆ ಎರಡು ಹವಳವನ್ನು ಕೈಯಲ್ಲಿ ಹಿಡಿದು ಮನಸ್ಸಿನಲ್ಲಿ ತನಗೆ ತಾನೇ ಏನು ಮಾಡುವುದೆಂದು ಯೋಚಿಸಿದ. ಆಗ ಅವನ ಬಲಗೈಯ ಹವಳ ಹೊಳೆಯಿತು (ಎಂದರೆ ಮುಂದೆ ಸಾಗು ಎಂದರ್ಥ) ಅದಾದನಂತರ ಅವನು ಒಂಟೆ ಖರೀದಿಸಿ ಒಂಟೆ ಚಾಲಕರ ಗುಂಪಿನಡೆಗೆ ಹೊರಟ.

ಆ ಪಯಣದಲ್ಲಿ ಅವನಿಗೆ ಒಬ್ಬ ಹುಡುಗ ಸಿಕ್ಕಿದ. ಅವನು ಅವನಿಗೆ ಹಲವು ವಿಷಯಗಳನ್ನು ತಿಳಿಸಿದ ಹಾಗೆ ಅವನ ಕನಸಿನ ಬಗ್ಗೆ ತಿಳಿಸಿದ. ಅವನು ಒಬ್ಬ ವಿಜ್ಞಾನಿಯನ್ನು ಹುಡುಕಿ ಹೋಗುತ್ತಿರುವಂತೆ ಹೇಳಿದ. ಆ ವಿಜ್ಞಾನಿಗೆ ಈಗ 200 ವರ್ಷವಾಗಿದೆ. ಅವನು ಒಬ್ಬ ಸೈನಿಕನ ತರ ಗಟ್ಟಿ ಇದ್ದಾನೆ. ಅವನಿಗೆ ದೇವರು ಶಕ್ತಿ ನೀಡಿದ್ದಾರೆ. ಅವನು ಯಾವಾಗ

ಬೇಕಾದರೂ ತನ್ನ ಇಚ್ಛೆಯಂತೆ ಸಾಯಬಹುದು ಎಂದ. ಅದನ್ನು ಕೇಳಿ ಹುಡುಗ ಆಶ್ಚರ್ಯ ಪಟ್ಟ. ಹಲವು ದಿನಗಳ ನಂತರ ಅವರು ಒಂದು ನಗರಕ್ಕೆ ಬಂದು ತಲುಪಿದರು. ಅಲ್ಲಿ ಆ ಹುಡುಗ ಒಂದು ಸುಂದರವಾದ ಹುಡುಗಿಯನ್ನು ನೋಡಿದ. ಹಾಗೆ ಅವನಿಗೆ ಅವಳ ಮೇಲೆ ಮನಸ್ಸಾಯಿತು. ಒಂದು ದಿನ ಅವನು ಅವಳಿಗೆ ತನ್ನ ಬಗ್ಗೆ ತಿಳಿಸಿ ಅವನ ಗುರಿಯನ್ನು ಹೇಳಿ ನಾನು ನನ್ನ ಕೆಲಸ ಮುಗಿಸಿ ನಿನ್ನನ್ನು ಮದುವೆಯಾಗುವೆ. ಅಲ್ಲಿಯವರೆಗೆ ಕಾಯುವೆಯಾ ಎಂದು ಕೇಳಿದಾಗ ಆ ಹುಡುಗಿ ಒಪ್ಪುತ್ತಾಳೆ. ಒಂದು ದಿನ ಒಬ್ಬ ಮನುಷ್ಯ ಒಂದು ಕುದುರೆ ಮೇಲೆ ಬಂದು ಆ ಹುಡುಗನನ್ನು ಕರೆದು ಅವನ ಬಗ್ಗೆ ತಿಳಿಸಿದ್ದ. ಅವನು ಅದೇ ವಿಜ್ಞಾನಿಯಾಗಿದ್ದ. ಆಗ ಹುಡುಗ ನಿನ್ನನ್ನು ಇನ್ನೊಬ್ಬ ಹುಡುಗ ಹುಡುಕಿ ಬಂದಿದ್ದಾನೆ. ನೀವು ಅವನನನ್ನು ಭೇಟಿಯಾಗಿ ಎಂದ. ಆಗ ವಿಜ್ಞಾನಿ ಅವನನ್ನು ಅವನ ಮನಸ್ಸನ್ನ ಸರಿಯಾಗಿ ಪಾಲಿಸುತ್ತಿಲ್ಲ. ಅವನ ಸಮಯ ಬಂದಾಗ ಅವನನ್ನು ಭೇಟಿಯಾಗುವೆ ಎಂದ. ಈಗ ನಡೆ ನಿನ್ನ ಒಂಟೆಯನ್ನು ಮಾರಿ ಒಂದು ಕುದುರೆ ತೆಗೋ ಎಂದ.

ಅವರಿಬ್ಬರು ಆ ಊರನ್ನು ಬಿಟ್ಟು ಹೊರಟರು. ತುಂಬಾ ದಿನಗಳ ಕಾಲ ಸಂಚರಿಸಿದ ನಂತರ ಒಂದು ಗೋಪುರದ ಬಳಿ ಬಂದರು. ಆಗ ಆ ವಿಜ್ಞಾನಿ ನನ್ನ ಕೆಲಸ ಇಲ್ಲಿಗೆ ಮುಗಿಯಿತು. ಮುಂದಿನ ದಾರಿಯನ್ನು ನೀನೇ ಹುಡುಕಿಕೊಳ್ಳಬೇಕು ಎಂದು ಹೇಳಿ ಅಲ್ಲಿಂದ ಹೊರಟ. ಆಗ ಒಂದು ವಿಷಯ ಆ ಹುಡುಗನಿಗೆ ತಿಳಿಯಿತು. ಅವನಿಗೆ ಮೊದಲಿನಿಂದ ಸಹಾಯ ಮಾಡಿದ ಎಲ್ಲಾ ವ್ಯಕ್ತಿಗಳು ಈ ವಿಜ್ಞಾನಿಯೇ ಎಂದು, ಒಮ್ಮೆ ರಾಜನಾಗಿ, ಇನ್ನೊಮ್ಮೆ ವ್ಯಾಪಾರಿಯಾಗಿ ಸಹಾಯ ಮಾಡಿದ್ದ. ಅವನಿಗೆ ಧನ್ಯವಾದ ಹೇಳಿ ಖುಷಿ ಪಟ್ಟ.

ಅವನಿಗೆ ಆ ಗೋಪುರದ ಮಧ್ಯದಲ್ಲಿ ಆ ನಿಧಿ ಎಂದು ತಿಳಿಯದೆ ಮಂಕಾಗಿ ನಿಂತಿದ್ದ. ಸ್ವಲ್ಪ ಸಮಯದ ನಂತರ ಅವನಿಗೆ ಆ ಹವಳಗಳ ನೆನಪಾಯಿತು. ಅವನು ಆ ಹವಳಗಳನ್ನು ಕೈಯಲ್ಲಿ ಹಿಡಿದು ಆ ನಿಧಿಯೆಲ್ಲಿದೆ ಎಂದು ಕೇಳಿದ. ಆಗ ಆ ಹವಳ ಅವನನ್ನು ಒಂದು ಜಾಗದ ಕಡೆ ಎಳೆಯಿತು. ಅವನು ಅಲ್ಲಿ ಅಗೆಯಲು ಶುರು ಮಾಡಿದ. ಸಂಜೆಯಾದರೂ ಏನೂ ಸಿಗಲಿಲ್ಲ. ಸುಸ್ತಾಗಿ ಅಲ್ಲೇ ಮಲಗಿದ್ದಾಗ ಅಲ್ಲಿಗೆ ಮೂರು ಜನ ಕಳ್ಳರು ಬಂದು ಅವನ ಚೀಲದಿಂದ ಅವನ ಹಣವನ್ನು ಕದ್ದು, ಆಮೇಲೆ ಅವನನ್ನು ಅಲ್ಲಿ ಏನು ಮಾಡುತ್ತಿರುವೆ ಎಂದು ಕೇಳಿದಾಗ ಅವನು ಹೇಳುವುದಿಲ್ಲ. ಆ ಕಳ್ಳರು ಅವನಿಗೆ ಹೊಡೆಯಲು ಆರಂಭಿಸಿದರು. ಸ್ವಲ್ಪ ಸಮಯದ ನಂತರ ನಾನು ನಿಧಿ ಹುಡುಕುತ್ತಿರುವೆ ಎಂದಾಗ ಆ ಕಳ್ಳರ ನಾಯಕ ನಕ್ಕು, ಹಲವು ವರ್ಷಗಳ ಹಿಂದೆ ನನಗೆ ಒಂದು ಹಸಿರು ನಾಡಿನಲ್ಲಿ ಒಂದು ಸಣ್ಣ ಮನೆಯ ಮುಂದೆ ಒಂದು ಆಲದ ಮರದ ಬುಡದಲ್ಲಿ ನಿಧಿ ಇದೆ ಎಂದು ಕನಸು ಬಿದ್ದಿತು ಆದರೆ ಅದನ್ನು ಹುಡುಕುವಷ್ಟು ಮೂರ್ಖ ನಾನಲ್ಲ ಎಂದು ಹೇಳಿ ಅಲ್ಲಿಂದ ಹೊರಟುಹೋದರು.

ಆಗ ಆ ಹುಡುಗನಿಗೆ ಎಲ್ಲಾ ತಿಳಿಯಿತು. ತಕ್ಷಣ ಆ ಮರುಳುಗಾಡಿನಿಂದ ಹೊರಟು ತನ್ನ ಮನೆಗೆ ಹೋದ. ಅಲ್ಲಿ ಆಲದ ಮರದ ಬುಡದಲ್ಲಿ ಅಗೆದಾಗ ಅವನಿಗೆ ಅಲ್ಲಿ ನಿಧಿ ಸಿಕ್ಕಿತು. ತುಂಬಾ ಸಂತೋಷದಿಂದ ಜ್ಯೋತಿಷಿಗೆ ಹತ್ತರಷ್ಟು ಭಾಗ ಕೊಟ್ಟು ಆ ವಿಜ್ಞಾನಿಗೆ ಮನಸ್ಸಿನಲ್ಲಿಯೇ ಧನ್ಯವಾದ ತಿಳಿಸಿ ಆ ಹುಡುಗಿಯೊಂದಿಗೆ ವಿವಾಹವಾಗಿ ಜೀವನವನ್ನು ತುಂಬಾ ಸಂತೋಷದಿಂದ ಸಾಗಿಸಿದ.

***

## ಕವನಗಳು

ನೀವು ನಡೆದರೆ
ಮರಳು ಇಳೆಯಾಗಿ
ಇಳೆಯು ಮಳೆಯಾಗಿ
ಮಳೆಯು ಬೆಳೆಯಾಗಿ
ಭೂಮಿಯು ಹಸಿರಾಗಿ
ಹಸಿರು ರಸವಾಗಿ
ಹಸಿವು ಇಂಗುವುದು........

ನೀವು ಕಲಿಸಿದರೆ
ಕಳೆಯು ಕಳೆಯುವುದು
ಕಲ್ಲು ಶಿಲೆಯಾಗುವುದು
ಶಿಲೆಯು ಕಲೆಯಾಗುವುದು
ಕಲೆಯು ಬೆಳಗುವುದು
ಬೆಳಗು ಬದುಕಾಗುವುದು
ಬದುಕು ಭಾವವಾಗುವುದು
ಭಾವ 'ಭಾರತ'ವಾಗುವುದು.

✍: **ಅಯಿಷಾ ರೀಲಾ**
I B1 SEBA

# ನನ್ನ ಜೀವನದ ಗುರಿ

✍: ಅವಿನಾಶ್
I PUC SEBA

**ಪ್ರ**ತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಒಂದಲ್ಲೊಂದು ಗುರಿ ಇಟ್ಟುಕೊಂಡಿರುತ್ತಾರೆ. ಗುರಿಯಿಲ್ಲದ ಬದುಕು ಬದುಕಲ್ಲ. ನಿರ್ದಿಷ್ಟವಾದ ಕೆಲಸವನ್ನು ಕೈಗೊಂಡಾಗ ಯಶಸ್ವಿಯಾಗಿ ಮುಂದೆ ನಡೆಯುವುದು ಗುರಿ. ಸಮುದ್ರದಲ್ಲಿ ತೇಲಿ ಬರುವ ಹಡಗು 'ಗುರಿ'ಇಲ್ಲದೆ ಹೊರಟರೆ ಗೊತ್ತಿದ್ದ ಸ್ಥಳವನ್ನು ತಲುಪದೇ ಎತ್ತಲೋ ಹೋಗುತ್ತದೆ. ಹಾಗೆಯೇ ನಮ್ಮ ಜೀವನವಾಗಿದೆ. ಆದ್ದರಿಂದ ನಾನು ನನ್ನ ಜೀವನದಲ್ಲಿ ಒಂದು ಗುರಿಯನ್ನಿಟ್ಟುಕೊಂಡಿದ್ದೇನೆ. ಅದೇ 'ಶಿಕ್ಷಕ ವೃತ್ತಿ.'

'ಶಿ' ಎಂದರೆ ಶಿವಸ್ವರೂಪಿಯಾಗಿ 'ಕ್ಷ' ಎಂದರೆ ಕ್ಷ ಕಿರಣವನ್ನು ಬೀರಿ 'ಕ' ಎಂದರೆ ಕರ್ಮಗಳನ್ನು ಉಂಟು ಮಾಡುವುದು. ಈ ಮೂರು ರುದ್ರಾಕ್ಷಿಯಂತೆ, ತ್ರಿಮೂರ್ತಿಯಂತೆ. ಗಾಯತ್ರಿ ಮಂತ್ರದ ಜೋಡಣೆಯಿಂದ ಒಂದಾಗಿವೆ. ಅಂದ ಮೇಲೆ ಈ ಪದಕ್ಕೆ ಸಂಸ್ಕಾರ ಬಲವಿದೆ, ಛಲವಿದೆ, ನೆಲೆ ಇದೆ ಎಂದಾಯಿತು.

ನಾನು ಶಿಕ್ಷಕನಾದರೆ ಈ ಪವಿತ್ರವಾದ ಶಿಕ್ಷಣ ಕ್ಷೇತ್ರದಲ್ಲಿ ಮಾಡತಕ್ಕ ಕೆಲಸ, ಹೊರತಕ್ಕ ಹೊಣೆ ಬಹಳ ಇದೆ. ಇಂದಿನ ಬಾಲಕರು ಮುಂದಿನ ನಾಗರಿಕರು. ಅವರನ್ನು ಸುನಾಗರಿಕರೂ ಮತ್ತು ನಾಡಧುರೀಣರನ್ನಾಗಿ ಮಾಡಿ ಆದರ್ಶವಾದ ರಾಷ್ಟ್ರ ಕಟ್ಟಿಸುವ ಹೊಣೆ ನನ್ನ ಮೇಲಿದೆ. ಇಂತಹ ಮಹತ್ವದ ಹೊಣೆ ನನ್ನ ಮೇಲಿರಲು ಹುಚ್ಚು ಜನ ಶಿಕ್ಷಕರ ಬಗ್ಗೆ ಏನೇನೋ ಅಪಹಾಸ್ಯ ಮಾಡಿ ನಗುತ್ತಾರೆ. ಶಿಕ್ಷಕನಾದವನಿಗೆ ವ್ಯವಹಾರ ಜ್ಞಾನವಿರುವುದಿಲ್ಲ, ಹಾಗೇ ಹೀಗೆ ಏನೇನೋ ಅಂದು ನಗುತ್ತಾರೆ. ಬಹುಜನ "ಹುಚ್ಚರಿಗೆ ಹುಚ್ಚನಲ್ಲದ ನರ ಹುಚ್ಚನಾಗಿ ತೋರುವ" ಎಂದು ಕುವೆಂಪುರವರು ಹೇಳಿದಂತೆ ಹುಚ್ಚರ ಬಳಗದಲ್ಲಿ ಸಿಕ್ಕ ಶಿಕ್ಷಕನು ಜನರ ಕಣ್ಣಿಗೆ ಹುಚ್ಚನಾಗಿ ತೋರುವುದು ಸಹಜ. ನನ್ನನ್ನು ಹುಚ್ಚನೆಂದರೂ ಚಿಂತೆಯಿಲ್ಲ, ನಾನು ಮತ್ತಷ್ಟು ಕೆಲಸ ಮಾಡುವೆನು.

ಮಮತೆಯ ತಾಯಿಯು ಎಳೆಗೂಸಿಗೆ ಮೊಲೆಹಾಲನ್ನು ಉಣಿಸಿ ಪೋಷಿಸುವಂತೆ ಮಮತೆಯ ಮುದ್ದುಮಕ್ಕಳಿಗೆ ವಿದ್ಯಾಭ್ಯಾಸ ನೀಡಿ ಪಾಂಡಿತ್ಯದಲ್ಲಿ ಬಲಿಷ್ಠರನ್ನಾಗಿ ಮಾಡುವೆ. ಮಕ್ಕಳೊಡನೆ ಮಮತೆಯಿಂದ ಗೆಳೆಯರಂತೆ ಆಟವಾಡುತ್ತಾ ಪಾಠ ಕಲಿಸುತ್ತೇನೆ. ಶಿಕ್ಷಕನೆಂದರೆ ಬಾಲಕರಿಗೆ ಭಯಾನಕ ವ್ಯಕ್ತಿಯಂತೆ ಕಾಣಿಸದೇ ಮಮತೆಯ ಮೂರ್ತಿಯಂತೆ ಕಾಣಬೇಕೆಂಬುದೇ ನನ್ನ ವಿಚಾರ.

ಬಾಲಕರ ಒಲವು–ನಿಲುವುಗಳನ್ನು ಅರಿತು ಸದಾ ಮಕ್ಕಳನ್ನು ಸಮಾಧಾನ ಪಡಿಸುತ್ತಾ ಅವರ ಜೀವನ ಲತೆಯು ಕೊನರಿ ಕುಡಿಬಿಟ್ಟು ಹಬ್ಬುವಂತೆ ಮಾಡುತ್ತೇನೆ.

ವಿದ್ಯಾರ್ಥಿಗಳಿಗೆ ಸಾಹಿತ್ಯದ ಸವಿಯೂಟ ಬಡಿಸಿ ಅವರಲ್ಲಿ ಕನ್ನಡ ಸಾಹಿತ್ಯ ಲಾಳಿಸಿ, ಬೆಳೆಸಿ ಕನ್ನಡ ನಾಡ ದೇವಿಯ ತೇಜಸ್ವಿ ಮಕ್ಕಳಾಗುವಂತೆ ತಯಾರಿಸುವೆ. ಅದ್ಭುತವಾದ ಅಗಮ್ಯವಾದ ಶಕ್ತಿಯಿಂದ ಜಗತ್ತನ್ನೇ ಬೆರಗು ಗೊಳಿಸುವ ವೈಜ್ಞಾನಿಕರನ್ನು ನೀಡುವೆ. ನನ್ನ ಜೀವನದ ಉಸಿರು ಕಾಯಕವೇ ಕೈಲಾಸ ಎಂದು ನಲಿಯುತ್ತಾ ದುಡಿಯುವೆ. ಮಕ್ಕಳ ನಗುಮೊಗದ ನೋಟದಲಿ ಮೈಮರೆಯುವೆ.

ನಾವು ಕಲಿಸಿದ ಮಕ್ಕಳು ದೊಡ್ಡವರಾಗಿ ನಮಗೆ ಭಕ್ತಿಯಿಂದ ನಮಿಸಿದಾಗ ಉಂಟಾಗುವ ಅಮಿತಾನಂದ ಜಗತ್ತಿನಲ್ಲಿ ಯಾವನಿಗೂ ದೊರೆಯಲಾರದು. ಅದು ಲಭಿಸುವುದು ಶಿಕ್ಷಕನೊಬ್ಬನಿಗೆ ಮಾತ್ರ. ಶಿಕ್ಷಕನು ಹಣದಿಂದ ಬಡವನಿದ್ದರೂ ವಿದ್ಯಾರ್ಥಿಪ್ರೇಮ ಸಂಪತ್ತಿನಿಂದ ಅವನು ಸಿರಿವಂತನೇ. ಇಂತಹ ಭಾಗ್ಯಶಾಲಿ ಶಿಕ್ಷಕನಾಗಿ ಸೇವೆ ಸಲ್ಲಿಸಬೇಕೆಂಬುದೇ ನನ್ನ ಬಾಳಿನ ಗುರಿ.

***

# ಕಾಲ ಬದಲಾಗಿದೆ

✍ : ಚೈತ್ರ ಆರ್. ಸುವರ್ಣ
II SEBA

**ನಾ**ನೇ ಶ್ರೇಷ್ಠ. ನಾನೇ ಸರ್ವಾಧಿಕಾರಿ. ಹಣವೊಂದಿದ್ದರೆ ಏನು ಬೇಕಾದರೂ ಮಾಡಬಹುದು. ಏನು ಬೇಕಾದರೂ ಸಾಧಿಸಬಹುದೆಂದು ಅಹಂಕಾರದಿಂದ ಮೆರೆಯುತ್ತಿದ್ದ ಮಾನವರ ಜೀವನವನ್ನು ಕಣ್ಣಿಗೆ ಕಾಣದ ಒಂದು ಸೂಕ್ಷ್ಮ ಜೀವಿಯು ಅಲ್ಲೋಲ ಕಲ್ಲೋಲವಾಗಿಸಿದೆ. ಹಣದ ಆಸೆಗಾಗಿ ಹಲವಾರು ರೀತಿಯಲ್ಲಿ ಪ್ರಕೃತಿಯನ್ನು ನಾಶ ಮಾಡುತ್ತಿದ್ದ ಮಾನವನಿಗೆ ಕೊರೊನಾ ಎಂಬ ಸೂಕ್ಷ್ಮ ಜೀವಿಯು ಏಟಿಗೆ ಎದುರೇಟು ಕೊಡು ಎಂಬುವ ಹಾಗೆ ಸರಿಯಾಗಿ ಪೆಟ್ಟು ಕೊಟ್ಟು ಪಾಠ ಕಲಿಸುತ್ತಿದೆ. ಅಣು ಬಾಂಬುಗಳನ್ನು ತಯಾರಿಸಿ ಇಡೀ ಭೂಕುಲವನ್ನೇ ನಾಶ ಮಾಡುವ ಸಾಮರ್ಥ್ಯವಿರುವ ಮಾನವನಿಗೆ ಇಂದು ಒಂದು ಸೂಕ್ಷ್ಮ ಜೀವಿಯು ಮಾನವನನ್ನೇ ನಾಶ ಮಾಡುವ ಪರಿಸ್ಥಿತಿ ಎದುರಾಗಿದೆ. ಮೊದಲು ಮನೆಯಿಂದಾಚೆಗೆ ಹೋಗಿ ಆಡಿ, ನಲಿಯುತ್ತಿದ್ದ ನಮಗೆ ಇಂದು ಮಾಸ್ಕ್ ಇಲ್ಲದೇ ಮನೆಯಿಂದ ಹೊರಗೆ ಬರುವುದೇ ಕಷ್ಟವಾಗಿದೆ. ಪ್ರಾಣಿ ಪಕ್ಷಿಗಳನ್ನು ಗೂಡಿನಲ್ಲಿ ಬಂಧಿಸಿ ಅವುಗಳನ್ನು ನೋಡಿ ನಲಿಯುತ್ತಿದ್ದ ನಮಗೆ ಕೊರೊನಾ ಇಂದು ನಮ್ಮನ್ನು ನಾವೇ ಬಂಧಿಸಿಕೊಳ್ಳುವ ಹಾಗೆ ಮಾಡಿತು. ಮೊದಲು ನಮ್ಮ ಸಂಬಂಧಿಕರನ್ನು ಅಥವಾ ನಮ್ಮ ಆಪ್ತರನ್ನು ಕಂಡಾಗ ಕೈ ಕುಲುಕಿ, ತಬ್ಬಿಕೊಳ್ಳುತ್ತಿದ್ದ ನಾವು ಈಗ ಯಾರನ್ನೂ ಸಹ ಹತ್ತಿರಕ್ಕೆ ಬರಲು ಬಿಡದ ಪರಿಸ್ಥಿತಿ ಎದುರಾಗಿದೆ. ಮೊದಲು ಯಾರಿಗಾದರೂ ಹುಷಾರಿಲ್ಲವೆಂದಾಗ ಅವಳ ಬಳಿ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ನಾವು, ಇಂದು ಯಾರಾದರೂ ಕೆಮ್ಮಿದರೂ ಸಾಕು, ಅವರಿಂದ ದೂರ ಹೋಗುವಂತಹ ಪರಿಸ್ಥಿತಿ ಎದುರಾಗಿದೆ. ಮೊದಲು ಮನೆಗೆ ಅತಿಥಿಗಳು ಬಂದಾಗ ಅವರನ್ನು ಪ್ರೀತಿಯಿಂದ ಸ್ವಾಗತಿಸಿ, ಅವರ ಯೋಗಕ್ಷೇಮವನ್ನು ವಿಚಾರಿಸಿ, ಅವರನ್ನು ಆತಿಥ್ಯದಿಂದ ನೋಡಿಕೊಳ್ಳುತ್ತಿದ್ದ ನಾವು ಇಂದು ಯಾರ ಮನೆಗೂ ಹೋಗದೇ, ಯಾರನ್ನೂ ಮನೆಗೆ ಸೇರಿಸದೇ ಇರುವ ಪರಿಸ್ಥಿತಿ ಬಂದಿದೆ. ಮಂದಿರ, ಮಸೀದಿ, ಚರ್ಚುಗಳು ಬಾಗಿಲು ಮುಚ್ಚಿದಾಗ ಆಸ್ಪತ್ರೆಯೇ ದೇಗುಲವಾಯಿತು. ವೈದ್ಯರು, ಪೋಲೀಸರು ಹಾಗೂ ಆಶಾಕಾರ್ಯಕರ್ತೆಯರೇ ದೇವರುಗಳಾದರು. ನಮ್ಮ ಮನೆಯೇ ನಮಗೆ ಮಂತ್ರಾಲಯವಾಯಿತು. ಆದರೆ ಈ ಕೊರೊನಾ ಎಂಬ ಹೆಮ್ಮಾರಿಯ ಅಟ್ಟಹಾಸ ಇನ್ನೂ ಸಹ ಮುಗಿದಿಲ್ಲ. ಇದು ಈಗಾಗಲೇ ಹಲವಾರು ಬಲಿಗಳನ್ನು ಪಡೆದುಬಿಟ್ಟಿದೆ. ಆದರೂ ಅದರ ಅಟ್ಟಹಾಸ ಇನ್ನೂ ಮುಂದುವರೆದಿದೆ. ನಾವು ಎದೆಗುಂದದೆ ಆರೋಗ್ಯವಾಗಿದ್ದು ಕೊರೊನಾದ ವಿರುದ್ಧ ಹೋರಾಡಬೇಕಾಗಿದೆ.




ಚಿತ್ರ : ಶ್ವೇತ. ಪೂಜಾರಿ

***

# ಶಿಕ್ಷಣ

✍: ಅಕ್ಷತಾ ಎಸ್.
II PUC SEBA

**ಇಂ**ದು ನಮ್ಮೆಲ್ಲರ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಿರುವುದು ಶಿಕ್ಷಣ. ಶಿಕ್ಷಣದ ಮುಖ್ಯ ಅಂಶವೇ ಪುಸ್ತಕ. ಪುಸ್ತಕಗಳು ನಮ್ಮ ಬದುಕನ್ನೇ ಬೆಳಗುತ್ತವೆ ಮಾತ್ರವಲ್ಲ ಅವುಗಳ ಮೂಲಕ ನಮ್ಮ ಜ್ಞಾನವೂ ಹೆಚ್ಚುತ್ತದೆ.

'ದೇಶ ಸುತ್ತು ಕೋಶ ಓದು' ಎಂಬ ಗಾದೆಮಾತಿನಂತೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವುದರ ಮೂಲಕ ನಾವು ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ವಿದ್ಯೆ ಇಲ್ಲದ ವ್ಯಕ್ತಿಯು ಸಮಾಜದಲ್ಲಿ ಬದುಕಲು ತುಂಬಾ ಕಷ್ಟಪಡುತ್ತಾನೆ. ಆದುದರಿಂದ ಇಂದಿನ ಜನತೆಗೆ 'ಶಿಕ್ಷಣ' ಎಂಬುದು ಬೇಕೇಬೇಕು.

ಇಂದಿನ ಶಿಕ್ಷಣ ಪದ್ಧತಿಯು ತುಂಬಾ ಬದಲಾವಣೆಯನ್ನು ಹೊಂದಿಕೊಂಡಿದೆ. 6–14ವರ್ಷ ವಯಸ್ಸಿನ ಮಕ್ಕಳಿಗೆ ಸರಕಾರವು ಕಡ್ಡಾಯ ಉಚಿತ ಶಿಕ್ಷಣವನ್ನು ಒದಗಿಸಿದೆ. ಮಾತ್ರವಲ್ಲ ಮಕ್ಕಳನ್ನು ಪ್ರೋತ್ಸಾಹ ಮಾಡುವಲ್ಲಿ ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ವಿದ್ಯಾಭ್ಯಾಸದ ಜೊತೆ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳನ್ನು ಕೂಡಾ ಅಳವಡಿಸಿಕೊಂಡಿದ್ದಾರೆ.

ಪುಸ್ತಕಗಳು ನಮಗೆ ಬದುಕುವುದನ್ನು, ವಿಚಾರ ಮಾಡುವುದನ್ನು ಮಾತ್ರವಲ್ಲ ಆಲೋಚಿಸುವುದನ್ನೂ ಕೂಡಾ ಕಲಿಸುತ್ತವೆ. ನಮ್ಮೆಲ್ಲರ ಮನೆಗಳು ಪುಸ್ತಕಗಳ ನೆಲೆಯಾಗಬೇಕು. ಅವು ನಮ್ಮ ದಿನನಿತ್ಯದ ಅಗತ್ಯ ವಸ್ತುಗಳಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲಬೇಕು. ಇವುಗಳ ಬಳಕೆಯಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ದೇಶ ಬೆಳಗುತ್ತದೆ.

***

# ಬದುಕೆಂಬ ನಾಲ್ಕು ದಿನ...

✍: ಪ್ರಮೋದ್ ವಿ. ನಾಯ್ಕ
II PUC PCMS

**ಬ**ದುಕೆಂಬ ಮೂರಕ್ಷರದ ಪದದಲ್ಲಿ ಅದೆಷ್ಟೋ ಸುಖ ದುಃಖ, ನೋವು ನಲಿವು, ಒಳ್ಳೆಯ ದಿನಗಳು...ಕೆಟ್ಟದಿನಗಳನ್ನು ಕಂಡಿರುತ್ತೇವೆ. ಎಷ್ಟೋ ಮಂದಿಗೆ ನಾವು ನೋವುಗಳನ್ನು ಅಥವಾ ನಗುವನ್ನು ಅವರ ಜೀವನದಲ್ಲಿ ನೀಡಿರುತ್ತೇವೆ. ಈ ಬದುಕಿನ ಕೆಲ ದಿನಗಳಲ್ಲಿ ನಾವು ದ್ವೇಷ, ಸೇಡು, ಒಬ್ಬರನ್ನು ಕೀಳಾಗಿ ನೋಡುವುದು, ಅವರ ಮೇಲೆ ಕೆಂಡಕಾರುವುದು, ಇತ್ಯಾದಿಗಳನ್ನು ಮಾಡುವುದರಿಂದ ಬದುಕೆಂಬ ಮೂರಕ್ಷರದ ಪದಕ್ಕೆ ಅರ್ಥವಿರುವುದಿಲ್ಲ.

ಬದುಕು ಭಗವಂತ ಸೃಷ್ಟಿಸುವ ಒಂದು ಸುಂದರ ಪ್ರಪಂಚ, ಆ ಪ್ರಪಂಚದಲ್ಲಿ ಆತನು ಬಯಸುವುದು ಪರಸ್ಪರ ಸ್ನೇಹ, ಪ್ರೀತಿ, ಹಿರಿಯರು ಹಾಗೂ ಕಿರಿಯರಿಗೆ ಗೌರವ ನೀಡುವುದು ಇತ್ಯಾದಿ. ಆದರೆ ಇವೆಲ್ಲವೂ ಈ ಸೃಷ್ಟಿಯಲ್ಲಿ ಕಾಣುತ್ತಿಲ್ಲ. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ. ರಾಜ್ಯ–ರಾಜ್ಯಗಳ ಮಧ್ಯೆ, ದೇಶ–ದೇಶಗಳ ಮಧ್ಯೆ ಪರಸ್ಪರ ಹೊಂದಾಣಿಕೆಗಳೇ ಇಲ್ಲ. ಎಲ್ಲಿ ನೋಡಿದರೂ ಹೋರಾಟಗಳು, ಯುದ್ಧಗಳು, ದ್ವೇಷಕಾಯುವುದು, ಮುಂತಾದವುಗಳನ್ನು ಕಾಣಬಹುದು.

ಈ ಭೂಮಂಡಲದಲ್ಲಿ ಸಾಮಾನ್ಯ ಮನುಜನು ಬಯಸುವುದು ಪರಸ್ಪರ ಸ್ನೇಹ ಮತ್ತು ಪ್ರೀತಿ. ಆದರೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವುದು ಏನೆಂದರೆ,

ಕಿಸೆಯಲಿ ಹಣವಿದೆ–ತಿರುಗಲು ಕಾರಿದೆ
ತಿಂಡಿತಿನಿಸುಗಳ ಸಾಲು
ಪೆನ್ನಿದೆ ಗನ್ನಿದೆ ಶಿಸ್ತಿನ ಸ್ಕೂಲಿದೆ
ಎಲ್ಲಿದೆ ಪ್ರೀತಿಯ ನೆರಳು? (ಸುಬ್ರಾಯ ಚೊಕ್ಕಾಡಿ)

ನಮ್ಮ ಬಳಿ ಎಲ್ಲಾ ಇದ್ದರೂ ಮೇಲಿನ ಲಕ್ಷಣಗಳಿಲ್ಲದೇ ಹೋದರೆ ಬದುಕಿಗೆ ಅರ್ಥವಿರುವುದಿಲ್ಲ.

***

## ಕೂಡಿ ಹಾಕಬೇಡಿ ನನ್ನನ್ನು

**ಕೂ**ಡಿ ಹಾಕಬೇಡಿ
ನನ್ನನ್ನು ಕತ್ತಲಲ್ಲಿ
ಹುಬ್ಬಚ್ಚೆಯ ಉಸಿರುಗಟ್ಟಿಸುವ
ವಾಸನೆಯ ಮೂಲೆಯಲ್ಲಿ
ಜೇಡರ ಬಲೆಗಳಲ್ಲಿ
ನೇತಾಡುವ ಗಂಡಸು
ಮಾತ್ರ ಮನ ಮಕ್ಕಳು ಕಾಣಿಸುತ್ತಾರೆ
ನಾನು ಕೈ ಚಾಚುವುದಿಲ್ಲ
ಅವರನ್ನು ಮುಟ್ಟುವ ಭಯ
ರಸ್ತೆಗಳಲ್ಲಿ ಅಲೆದಾಡಲು ಬಿಡಿ ನನ್ನನ್ನು
ರೈರಿಂದ ಗಲ್ಲಿಗಳಲ್ಲಿ ಕಳೆದುಹೋಗುತ್ತೇನೆ
ರಸ್ತೆ ಹುಡುಕುತ್ತೇನೆ ನಾನು
ನೆರಳುಗಳು ಧಾವಿಸುವಲ್ಲಿ
ಒಂದೊಂದು ಒಂಟಿ ಹುಡುಕಾಟದಲ್ಲಿ
ಕೂಡಿ ಹಾಕಬೇಡಿ ನನ್ನನ್ನು
ನಾನೊಂದು ಜೀವ
ಬರಿ ಆತ್ಮವಲ್ಲ

***

✍: ಡೆನ್ಸಿಲ್ ಡಿ. ಮೇಬೆನ್
I B2

## ತಾಯಿಯ ಮಡಿಲು

**ನಾ**ನು ಬಯಸಿದ ಪ್ರೀತಿಯ ಸಾಗರ
ಕಳೆಯುವುದೆಲ್ಲ ಬೇಸರ...
ಕಂದನ ಮೊದಲ ಅಳುವಿನಲ್ಲಿ ...
ನಗು ಕಾಣುವ ಒಡಲು
ತನ್ನೆಲ್ಲ ಕಷ್ಟಗಳನ್ನು ಕಂದನ ನಗುವಿನ ಮುಂದೆ
ಬಚ್ಚಿಡುವ ಮಡಿಲು...
ಕಂದನಿಗೋಸ್ಕರ ಬದುಕುವಳು
ನವಮಾಸದ ನೋವ ಹೊತ್ತು
ಆ ಮಗುವಿನ ಪಾಲಿಗೆ ಅವಳೇ ಬಂದು ಜಗತ್ತು
ತನ್ನೆಲ್ಲ ಖುಷಿಯ ಜೊತೆಗೆ ನೀಡುವಳು
ಎದೆಹಾಲಿನ ಅಮೃತ...
ಕಂದನಿಗೋಸ್ಕರ ಬದುಕು ಸಾಗಿದುತಿಹಳು
ತನ್ನ ಜೀವವನ್ನೇ ಪಣಕ್ಕಿಡುತ.

***

## ಸೂರ್ಯ

**ಸೂ**ರ್ಯ, ಇಂದು ಉದಯಿಸದಿರು
ಹೊರಡು, ನಿನ್ನ ಬೆಳಕನೆತ್ತಿಕೊಂಡು
ಹಗಲು, ಪಾಪದ ಶತ್ರು
ಈ ಕ್ಷಣದಲ್ಲಿ
ಪಾಪವೇ
ನನ್ನ ಬಯಕೆ
ಎಂದೋ ಮಾಯವಾಗಿರುವ
ಆ ದಾರಿಗಳಲ್ಲಿ ನಾನು
ಕಣ್ಣು ಮುಚ್ಚಿ
ನಡೆಯಬೇಕಿದೆ
ಕಾಲ ಅಳಿಸಲಾರದೆ
ಆ ಮುಖಗಳನ್ನು
ಸ್ಮರಿಸಬೇಕಿದೆ
ಕೇಳಬೇಕು ಅವನನ್ನು
ಅವನು ಹೇಳಬೇಕು
ಕಲ್ಲಾಗಿರುವವರು ಯಾರೋ
ಹಳೆಯ ಅರಳಿ ಮರ ಯಾರೋ
ನಿಧಿ ಕಾಯುವ ನಾಗ ಯಾರೋ
ಜೊತೆಗೆ ಇಳಿ ವಯಸ್ಸಿನಲ್ಲಿ
ನನ್ನ ಜೊತೆ ನಡೆಯುವವರು ಯಾರೋ

***

# ನಾಡಿಗೆ ಗುಡ್ ಬೈ ಹೇಳಿದ ಪ್ರಾಣಿಗಳು

✍: ಅನೀಶ್ ಬಿ., I PUC

**ಅ**ದೊಂದು ದಟ್ಟ ಕಾಡು. ಆ ಕಾಡಿನಲ್ಲಿ ಬಗೆಬಗೆಯ ಗಿಡ–ಮರ ಪ್ರಾಣಿ ಪಕ್ಷಿಗಳಿದ್ದವು. ಪಕ್ಷಿಗಳು ಸ್ವಚ್ಛಂದವಾಗಿ ವಿಹರಿಸುತ್ತಾ ಬದುಕನ್ನು ಸವಿಯುತ್ತಿದ್ದರೆ, ಪ್ರಾಣಿಗಳು ತಮ್ಮಿಷ್ಟದಂತೆ ಒಂದಕ್ಕೊಂದು ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದವು. ಆ ಸುಂದರವಾದ ಕಾಡಿನಲ್ಲಿ ಜಂಬೂ ಆನೆ, ಪಿಂಕಿ ಮೊಲ, ಕಿಟ್ಟು ಜಿರಾಫೆ ಮತ್ತು ಚಂಪಾ ಎಂಬ ಜಿಂಕೆ, ಈ ನಾಲ್ವರೂ ಆಪ್ತ ಸ್ನೇಹಿತರಾಗಿದ್ದರು. ಇವರ ಸ್ನೇಹ ಇಡೀ ಕಾಡಿನಲ್ಲಿ ಪ್ರಖ್ಯಾತವಾಗಿತ್ತು. ಈ ಸ್ನೇಹಿತರಿಗೆ "ನಾಡು ಹೇಗಿರುತ್ತದೆ?" ಎಂದು ತಿಳಿಯುವ ಕುತೂಹಲ ಬಹಳ ಇದ್ದಿತು.

ಒಂದು ದಿನ ಜಂಬೂ ಆನೆ ತನ್ನ ಸ್ನೇಹಿತರೊಂದಿಗೆ ಕಾಡಿನಲ್ಲಿ ವಿಹರಿಸುತ್ತಿದ್ದಾಗ, ಕಿಟ್ಟು ಜಿರಾಫೆ, "ಹೇ...ಅಲ್ಲಿ ನೋಡಿ, ದೂರದಲ್ಲಿ ಯಾರೋ ಒಬ್ಬ ಮನುಷ್ಯ ಕೊಡಲಿಯನ್ನು ಹಿಡಿದುಕೊಂಡು ಬರುತ್ತಿರುವ ಹಾಗಿದೆ. ನಾವೆಲ್ಲರೂ ಅವನ ಬಳಿಗೆ ಹೋಗಿ 'ನಾಡು ಹೇಗಿರುತ್ತದೆ?' ಎಂದು ಕೇಳೋಣವೇ ಎಂದಿತು. ಕಿಟ್ಟುವಿನ ಮಾತಿಗೆ ಎಲ್ಲರೂ ಒಪ್ಪಿ, ಆ ಕೊಡಲಿ ಹಿಡಿದವನ ಬಳಿಗೆ ಹೋದರು. ಜಂಬೂ ಆನೆ "ನಾಡು ಹೇಗಿರುತ್ತದೆ?" ಎಂದು ಅವನ ಬಳಿ ಕೇಳುವಷ್ಟರಲ್ಲಿಯೇ ಆತ, ತನ್ನ ಕೈಲಿದ್ದ ಕೊಡಲಿಯನ್ನು ಅಲ್ಲೇ ಬಿಟ್ಟು, ಚಿರತೆಯ ವೇಗದಲ್ಲಿ ತನ್ನ ಮನೆಯನ್ನು ತಲುಪಿದ.

ಆಗ ಕಿಟ್ಟು ಜಿರಾಫೆ, "ಛೆ!...ಅವನು ಓಡಿಯೇ ಹೋದನಲ್ಲ! ಇವರನ್ನೆಲ್ಲಾ ಕೇಳುವ ಬದಲು, ನಾನೇ ನಾಡಿಗೆ ಹೋದರೆ ಹೇಗೆ?" ಎಂದಿತು. ಮೂವರಿಗೂ ಕಿಟ್ಟುವಿನ ಮಾತು ಸರಿ ಎನಿಸಿತು. ಚಂಪಾ ಜಂಬೂವಿನ ಮೇಲೆ, ಪಿಂಕಿ ಕಿಟ್ಟುವಿನ ಮೇಲೆ ಕುಳಿತು ನಾಡಿನತ್ತ ಹೊರಟವು. ಬಿಸಿಲ ಬೇಗೆಯಲ್ಲಿ ನಡೆದು ನಡೆದು ಸುಸ್ತಾಗಿ, ಕೊನೆಗೂ ಕಾಂಕ್ರೀಟ್ ಕಾಡನ್ನು ತಲುಪಿಯೇ ಬಿಟ್ಟವು.




ಅವು ನಾಡಿಗೆ ಬಂದದ್ದೇ ತಡ, ಅಲ್ಲಿದ್ದ ಜನರು ಕಂಗಲಾಗಿ, ಕೈಗೆ ಸಿಕ್ಕ ಕಲ್ಲು, ಕೋಲುಗಳನ್ನು ಕೈಗೆತ್ತಿಕೊಂಡು ಅವುಗಳಿಗೆ ಹೊಡೆಯಲು ಆರಂಭಿಸಿದರು. ಜಂಬೂ, ಕಿಟ್ಟು, ಚಂಪಾ ಮತ್ತು ಪಿಂಕಿಗೆ ಎಲ್ಲಿ ಹೋಗಬೇಕೆಂದೇ ತೋಚಲಿಲ್ಲ. ಸುತ್ತ ಎಲ್ಲಿ ನೋಡಿದರಲ್ಲಿ ಬರೀ ಕಟ್ಟಡಗಳೇ ಕಂಡವು. ನಾಲ್ಕು ಪ್ರಾಣಿಗಳು ಎಲ್ಲಿಲ್ಲದ ರಭಸದಲ್ಲಿ ಕ್ರೂರ ಮನುಜರಿಂದ ತಪ್ಪಿಸಿಕೊಂಡು, ಕಾಡಿನತ್ತ ಕಾಲ್ಕಿತ್ತವು.

ನಾಲ್ವರೂ, "ಅಬ್ಬಾ! ನಮ್ಮ ಜೀವ ಉಳಿಯಿತಲ್ಲ" ಎಂದು ನಿರಾಳರಾದರು. ಆಗ ಪಿಂಕಿ, "ಛೆ...ಮನುಷ್ಯರು ಕಾಡಿಗೆ ಬಂದು ನಮ್ಮ

ಆಹಾರವನ್ನೆಲ್ಲಾ ಕಿತ್ತುಕೊಂಡರೂ ಕೂಡ ನಾವು ಸುಮ್ಮನಿರಬೇಕು. ಆದರೆ ನಾವು ನಾಡಿಗೆ ಹೋಗಿ, ಯಾರಿಗೂ ಏನನ್ನೂ ಮಾಡದೇ ಇದ್ದರೂ ಕೂಡ ನಮಗೆ ಕೋಲು, ಕಲ್ಲುಗಳಿಂದ ಹೊಡೆದು ನಮ್ಮನ್ನು ಅಲ್ಲಿಂದ ಓಡಿಸುತ್ತಾರೆ. ಛೇ! ಎಂತಹ ಅನ್ಯಾಯವಿದು" ಎಂದಿತು. ಆಗ ನಾಲ್ಕೂ ಪ್ರಾಣಿಗಳು ಒಕ್ಕೊರಲಿನಿಂದ, "ನಾವೆಂದೂ ನಾಡಿಗೆ ಹೋಗುವುದು ಬೇಡ. ಅಲ್ಲಿ ಶುದ್ಧ ಗಾಳಿ ಇಲ್ಲ, ಅಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ. ಎಲ್ಲದಕ್ಕೂ ಮಿಗಿಲಾಗಿ ಅಲ್ಲಿ ಶುದ್ಧ ಮನಸ್ಸು ಮತ್ತು ಮನುಷ್ಯತ್ವವಿರುವ ಮನುಷ್ಯರಿಲ್ಲ. ಹಾಗಾಗಿ ನಾವು ಅಲ್ಲಿ ಹೋಗುವ ಬದಲು ಈ ಕಾಡಿನಲ್ಲಿ ಆರಾಮವಾಗಿ ಖುಷಿಯಿಂದ ಆಟವಾಡುತ್ತಾ ಇರೋಣ" ಎಂದವು. ತದನಂತರ ಅವು, ನಾಡಿಗೆ ಗುಡ್ ಬೈ ಹೇಳಿ, ಕಾಡಿನಲ್ಲಿಯೇ ಖುಷಿಯಿಂದಿದ್ದವು.

***

## ಕವನ

✍ : ರಕ್ಷಿತಾ
I PUC Arts

**ದೇ**ಹಕ್ಕೆ ಉಸಿರನಿತ್ತವಳು ಹೆತ್ತವಳು
ಅವಳುಸಿರು ಕಾಯುವಳೆ ಹಸಿರವ್ವ
ಧರಿಸುವ ಧರಣಿಗೆ ಬೇಕು ಮಳೆಯ ತಂಪು
ಅದು ಇಳೆಗಿಳಿಯುವಿ ಬೇಕು ವನಸಿರಿ

ಆಧುನಿಕತೆಯ ನೆರಳಲಿ ನರಳುತಿದೆ
ಹಸಿರಸಿರಿ ಹಾಯ್ದು ಅಡಿಗೆ ಕೊಡಲಿ
ಕಾವಲಿ ನೆಲಕುರುಳಿದರೆ ಮರವೊಂದು
ಕಡಿದುಕೊಂಡಂತೆ ನಿನ್ನ ಆಯುಷ್ಯದಲಿ
ಅಮೂಲ್ಯವಾದ ವರುಷ ಒಂದು ನೀ ತಿಳಿ

ಅದೆಷ್ಟು ಎತ್ತರ ನೀ ಬೆಳೆದರು ಸರಿ
ನೀಡಲಾದೀತೇ ನಿನಗೆ ಪ್ರಾಣವಾಯು
ಪರಿಸರದ ಪರಿಚಯವ ಮೊದಲು
ನೀನರಿ ಸುತ್ತಮುತ್ತ ಗಿಡನೆಟ್ಟುವ ಆ
ಹಸಿರೆ ಉಸಿರೆಂಬುದು ಮರೆಯದಿರಿ

ನಮ್ಮ ಮುಂದಿನ ಪೀಳಿಗೆಗೆ ನೆರಳು
ನೀರು ಸಿಗದೆ ಪರದಾಡುವಂತೆ
ಮಾಡಿದರೆ ಎಷ್ಟು ಸರಿ ಅದಕ್ಕೆ ಎಂದಿಗೂ
ನೀನೇ ತಾನೇ ಹೊಣೆ ಗಳಿಸಿಟ್ಟರೇನು
ನೀ ಗಂಟವರಿಗೆ ಲೆಕ್ಕವಿರದಷ್ಟು ಹನಿ
ನೀರುಗಾಳಿಗೆ ಬರ ತಂದಿಟ್ಟ ಮೇಲೆ



ಹಸಿರು ಹಾಸಲಿ ಭೂರಮೆಯ ಒಡಲು
ನಗಲಿ ಎಲ್ಲೆಡೆ ವನಸಿರಿಯ ಕಾಡು
ನಾಳೆ ನಾಳೆ ಎನ್ನದೆ ಇಂದಾಗು ನಡೆ
ನೀ ಮುಂದಡಿ ಇಡು ರಕ್ಷಣೆಗೆ ಪರಿಸರ
ಅದು ರಕ್ಷಿಸುವುದು ಮುಂದೆ ನಿನ್ನ ಕುಲ.

***

# ಕನ್ನಡವನ್ನು ಉಳಿಸುವುದು ಹೇಗೆ

✍: ಅಕ್ಷತಾ ಎಸ್.
II PUC SEBA

**ಸು**ಮಾರು 2000 ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಇಂದು ಮೆಲ್ಲನೆ ನಶಿಸುತ್ತಾ ಇದೆ. ಕನ್ನಡವನ್ನು ಉಳಿಸುವುದು ಹೇಗೆ ಎಂಬುದೀಗ ಪ್ರಶ್ನೆಯಾಗಿ ಉಳಿದಿದೆ, ಸವಾಲಾಗಿದೆ. ನನ್ನಲ್ಲಿ ಯಾರಾದರೂ ಕನ್ನಡವನ್ನು ಉಳಿಸುವುದರ ಬಗ್ಗೆ ಅಭಿಪ್ರಾಯ ಕೇಳಿದರೆ ನನ್ನ ಅಭಿಪ್ರಾಯವಿಷ್ಟೇ, ನನ್ನ ಪ್ರಕಾರ ಎಲ್ಲಾ ಕನ್ನಡಿಗರು ಎರಡು ವಿಷಯಗಳನ್ನು ಮನದಟ್ಟಣೆ ಮಾಡಿಕೊಳ್ಳಬೇಕು. ಮೊದಲನೆಯದು, ನಾವೆಲ್ಲಾ ಕನ್ನಡವನ್ನು ಉಳಿಸಲು ಏನೆಲ್ಲಾ ಯೋಜನೆಗಳನ್ನು ಮಾಡುತ್ತೇವೋ ಆ ಯೋಜನೆಗಳನ್ನು ಸರಿಯಾಗಿ ಜಾರಿಗೆ ತರಬೇಕು. 'ಭಾರತೀಯರು ಯೋಜನೆ ಮಾಡುವುದರಲ್ಲಿ ನಿಸ್ಸೀಮರು ಆದರೆ ಅದನ್ನು ಸರಿಯಾಗಿ ಜಾರಿಗೆ ತರಲು ವಿಫಲರಾಗುತ್ತಾರೆ' ಎಂದು ವಿದೇಶೀಯರು ಹೇಳುತ್ತಾರೆ. ಈ ಮಾತು ಒಂದು ದೃಷ್ಟಿಯಿಂದ ಸತ್ಯವೆನಿಸುತ್ತದೆ. ಬೇರೆಲ್ಲೂ ಬೇಡ, ನಾವೇ ಎಷ್ಟೋ ಬಾರಿ 2 ಗಂಟೆಗಳ ಕಾಲ ಕುಳಿತು ಇಷ್ಟು ಓದಿ ಮುಗಿಸಲೇಬೇಕು ಎಂದು ಕೂತಾಗ, 2 ಗಂಟೆ ಮುಗಿಯುವಷ್ಟರಲ್ಲಿ ನಿದ್ರೆಗೆ ಜಾರಿರುತ್ತೇವೆ. ಆದರೆ, ಈ ತಪ್ಪನ್ನು ನಾವು ಕನ್ನಡವನ್ನು ಉಳಿಸುವ ಕಾರ್ಯದಲ್ಲಿ ಮಾಡಬಾರದು. ನೆತ್ತರಿನ ಕಣಕಣದಲ್ಲಿ ಕನ್ನಡಾಕ್ಷರಗಳೇ ತುಂಬಿರುವಾಗ ಕನ್ನಡಿಗರೇಕೆ ಈ ದಿವ್ಯಭಾಷೆಯನ್ನು ಮಾತನಾಡಲು ಹಿಂಜರಿಯಬೇಕು?

ಎರಡನೆಯದು, ಕನ್ನಡದ ಮೇಲಿನ ಆಸಕ್ತಿ ಹೆಚ್ಚಾಗಬೇಕು. ಕನ್ನಡ ರಾಜ್ಯೋತ್ಸವ ಎಂದು ಆಚರಣೆ ಮಾಡುತ್ತೇವೆ ಎಂದು ಗೊತ್ತಾದರೆ ಸಾಲದು, ಏತಕ್ಕಾಗಿ ಆಚರಿಸುತ್ತೇವೆ ಎಂಬುದನ್ನು ಕೂಡ ಅರಿಯಬೇಕು. ಕರ್ನಾಟಕ ಏಕೀಕರಣ ಏಕೆ ಆಯಿತು? ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಹೋರಾಡಿದ ಕನ್ನಡಿಗರು ಯಾರು? ಕರ್ನಾಟಕ ಏಕೀಕರಣ ಹೇಗಾಯಿತು? ಎಂದು ತಿಳಿದುಕೊಳ್ಳಲು ಕನ್ನಡಿಗರೇ ಹಿಂಜರಿದರೆ ಇನ್ನು ಬೇರೆ ಭಾಷಿಗರಿಗೆ ಕನ್ನಡ ಕಲಿಯಿರಿ ಎಂದು ಹೇಳಲು ನಾವು ಶಕ್ತರೇ? ಹೀಗೆ ಆದರೆ ಮುಂದೊಂದು ದಿನ ಕನ್ನಡ ಭಾಷೆಯೂ ಕ್ಷೀಣಿಸಿದರೆ ಸೋಜಿಗವೆನಿಸದು. ಕನ್ನಡಭಾಷೆಯನ್ನು ಕನ್ನಡ ಸಂಸ್ಕೃತಿಯನ್ನು ಉಳಿಸುವುದು ನಮ್ಮ ಕೈಗಳಲ್ಲೇ ಇದೆ. ಕನ್ನಡವನ್ನು ಉಳಿಸಿಕೊಳ್ಳುವ ಆಶಾಭಾವನೆ ಕನ್ನಡಿಗರ ಚಿತ್ತದಲ್ಲಿ ಮೊಳಕೆಯೊಡೆದು ಚಿಗುರಬೇಕಷ್ಟೇ.

***

## ಬದುಕು

**ಸ**ಮಾಜದಲ್ಲಿ ಬದುಕಲೇಬೇಕು
ಎಲ್ಲರೊಂದಿಗೆ.....

ನಗಿಸುವವರು ಹಲವರು.....
ಅಳಿಸುವವರು ಹಲವರು.......
ಹರಸುವವರು ಹಲವರು.........
ಪಾಠ ಕಲಿಸುವವರು ಕೆಲವರು.......

ಆದರೂ ಎಲ್ಲರನ್ನೂ
ಎಲ್ಲವನ್ನೂ ಸಮಾಧಾನಿಯಾಗಿ........
ಸ್ವೀಕರಿಸುವವರು ನಾವುಗಳು.......

ಬದುಕೇನೆಂದು
ಅರ್ಥೈಸುವನು
ಮಾತ್ರ
ಭಗವಂತನು.....

✍: ಪ್ರಖ್ಯಾತ್
I B1 SEBA

# ಅಪ್ಪನ ಜೀವನ ಪಾಠ

✍ : ದೀನ್ಯಾ
I PUC BASCs

ನವಿಲೂರಿನಲ್ಲಿ ಸಾಗರ್ ಎಂಬ ಪುಟ್ಟ ಹುಡುಗನಿದ್ದ. ಅವನು ಚಿಕ್ಕವನಿದ್ದಾಗಲೇ ಅವನ ತಾಯಿ ತೀರಿಹೋಗಿದ್ದರು. ತಂದೆ ಹನುಮನಿಗೆ ಮಗನನ್ನು ಸಾಕಲು ಕಷ್ಟವಾದರೂ ಆತನಿಗೆ ಏನೂ ತೊಂದರೆ ಆಗದ ಹಾಗೆ ನೋಡಿಕೊಳ್ಳುತ್ತಿದ್ದರು. ಇರುವ ಒಬ್ಬ ಮಗನನ್ನು ಚೆನ್ನಾಗಿ ಓದಿಸಬೇಕೆಂಬ ಆಸೆಯಿಂದ ಪಟ್ಟಣಕ್ಕೆ ಬಂದು ಒಂದು ಖಾಸಗಿ ಶಾಲೆಗೆ ಸೇರಿಸಿದರು.

ಒಮ್ಮೆ ಸಾಗರ್‌ನ ತಂದೆಗೆ ಇದ್ದಕ್ಕಿದ್ದ ಹಾಗೆ ಹುಷಾರು ತಪ್ಪಿತು. ಅದಕ್ಕಾಗಿ ಆತ ಅಪ್ಪನನ್ನು ನೋಡಿಕೊಳ್ಳಲು ಶಾಲೆಗೆ ಮೂರು ದಿನ ರಜೆ ಹಾಕಿದ. ಅದೇ ಸಮಯದಲ್ಲಿ ಅವನಿಗೆ ಪರೀಕ್ಷೆಗಳು ಹತ್ತಿರದಲ್ಲಿದ್ದವು. ಅವನಿಗೆ ಯಾರು ಸಹ ಹಿಂದಿನ ತರಗತಿಯಲ್ಲಿ ನಡೆದ ಪಾಠಗಳ ನೋಟ್ಸ್ ಪುಸ್ತಕ ಕೊಡಲಿಲ್ಲ. ಅವನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಸುಮ್ಮನಿದ್ದ. ಇದರಿಂದಾಗಿ ಅವನಿಗೆ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂತು.

ಸಾಗರ್ ಇದಕ್ಕೆ ಬೇಸರ ಮಾಡಿಕೊಳ್ಳದೆ ಮಾರ್ಕ್ಸ್ ಕಾರ್ಡನ್ನು ಅಪ್ಪನಿಗೆ ತೋರಿಸಿದಾಗ ಅಪ್ಪ, "ಯಾಕಿಷ್ಟು ಕಡಿಮೆ ಅಂಕ ಬಂದಿದೆ? ನೀನು ನೂರುಕ್ಕೆ ನೂರು ಅಂಕ ತೆಗೆದುಕೊ ಎಂದು ನಾನು ಹೇಳುವುದಿಲ್ಲ. ಆದರೆ ನೀನು ಶ್ರಮ ಹಾಕಿದಷ್ಟು ಅಂಕ ಬರುತ್ತದೆಯಲ್ಲವೇ?" ಎಂದರು. ಅದಕ್ಕೆ, "ನಿಮಗೆ ಹುಷಾರಿಲ್ಲದ ಸಮಯದಲ್ಲಿ ನಾನು ರಜೆ ಹಾಕಿದೆನಲ್ಲ. ಅಂದು ನಡೆದ ಪಾಠದ ನೋಟ್ ಪುಸ್ತಕವನ್ನು ನನಗೆ ಯಾರೂ ನೀಡಲಿಲ್ಲ. ನಾನೇನು ಮಾಡ್ಲಿ?" ಎಂದ. ಅದಕ್ಕೆ ಅಪ್ಪ, "ಅವರು ಯಾರೂ ಪುಸ್ತಕ ಕೊಡಲಿಲ್ಲವೆಂದು ನೀನು ನೆಪ ಹೇಳಬಾರದು. ನಿಮ್ಮ ಟೀಚರ್‌ಗೆ ಹೇಳಿ ಅವರಿಂದ ಹೇಳಿಸಿ ಪಡೆಯಬಹುದಿತ್ತಲ್ವ? ಟೀಚರ್‌ಗೆ ಕೇಳಲು ಭಯವಾದರೆ ನನ್ನನ್ನು ಕೇಳಬಹುದಿತ್ತು. ನಾನು ಬಂದು ನಿಮ್ಮ ಶಿಕ್ಷಕರಿಗೆ ಹೇಳುತ್ತಿದ್ದೆ" ಎಂದರು.

ಅದಕ್ಕೆ ಸಾಗರ್ "ಹೌದಪ್ಪ. ನನಗಿದು ಹೊಳೆಯಲೇ ಇಲ್ಲ" ಎಂದ. ಅದಕ್ಕೆ ತಂದೆ, "ಇದು ಕೇವಲ ಓದಿಗೆ ಮಾತ್ರ ಸೀಮಿತವಾಗಬಾರದು. ಜೀವನದಲ್ಲೂ ಅಷ್ಟೇ. ಯಾರು ಕೂಡ ನೀನು ಮುಂದುವರೆಯಲು ಆಸರೆ ಮತ್ತು ಸಹಾಯ ಮಾಡುವುದಿಲ್ಲ. ನಾವೇ ಬುದ್ಧಿ ಉಪಯೋಗಿಸಿ ಪರಿಹಾರ ಕಂಡುಕೊಳ್ಳಬೇಕು. ಈ ಮಾತನ್ನು ಯಾವಾಗಲೂ ನೆನಪಿಟ್ಟುಕೋ" ಎಂದರು. ಸಾಗರ್ ಅಂದಿನಿಂದ ನೆಪ ಹೇಳಿ ತಪ್ಪಿಸಿಕೊಳ್ಳುವುದು ಬಿಟ್ಟು ಜಾಣ ವಿದ್ಯಾರ್ಥಿಯಾದ.

***

## ಗೆಳತಿಯ ನೆನಪು

ಓ ನನ್ನ ಜೀವದ ಗೆಳತಿ
ನೀನು ನನ್ನ ಯಾಕೆ ಮರೆತಿ
ನಿನಗೆ ಬೇಡವೇ ನನ್ನ ಪ್ರೀತಿ

ನಮ್ಮ ಬಾಲ್ಯದ ಆ ನೆನಪು
ಇನ್ನು ನಮಗೆ ಸವಿಗನಸು
ನಾವು ಆಟವಾಡಿದ ಆ ನೆನಪು
ಇನ್ನು ನಮಗೆ ಮರೆಯದ ಹೊಂಗನಸು

ನಾವು ಜೊತೆಗೂಡಿ ಬೆರೆತ ಶಾಲೆ
ನಮ್ಮನ್ನು ಎತ್ತರಕ್ಕೇರಿಸಿದ ಕೀರ್ತಿಯ ಕಳೆ
ನಮಗೆ ಕಲಿಸಿಕೊಟ್ಟ ಗುರುಗಳ ನೆನಪಿನ ಸುರಿಮಳೆ
ಇನ್ನು ನಮ್ಮಲ್ಲಿ ಮರೆಯಲಾಗದ ಪಾಠಶಾಲೆ

ಎಂದೆಂದಿಗೂ ನಿನ್ನ ಮರೆಯದ ನನ್ನ ಮನ
ನಿನ್ನ ನೆನಪು ನನ್ನಲ್ಲಿ ಉಳಿದಿದೆ ಎಲ್ಲಾ ದಿನ
ನಿನ್ನ ನೋಡಲು ಕಾಯುತಿದೆ ಆ ಕಾತರದ ಕ್ಷಣ
ಬರಲಿ ಇನ್ನು ನನ್ನ ನಿನ್ನ ಭೇಟಿಯ ದಿನ!

✍ : ಸಂಚಿತಾ
9ನೇ ತರಗತಿ, ಕನ್ನಡ ಮಾಧ್ಯಮ

# ಮರೆಯಲಾಗದ ನೆನಪು

ಸಂಗ್ರಹ: ರಶೀನಾ
I HEBA

1904 ಇಪ್ಪತ್ತೊಂಬತ್ತನೇ ಡಿಸೆಂಬರ್
ತೀರ್ಥಹಳ್ಳಿಯ ಕುಪ್ಪಳ್ಳೀ ಅವರ ತವರೂರು
ಮಲೆನಾಡ ಅಪ್ಪಟ ಕನ್ನಡಿಗರು
ತಾಯಿ ಸೀತಮ್ಮ ತಂದೆ ವೆಂಕಟಗೌಡರು
ಇವರಲ್ಲಿ ಮೂಡಿದವರೇ ಕುವೆಂಪುರವರು.

ವಿದ್ಯಾರ್ಥಿಯಾಗಿಯೇ ಆಂತರಿಕ ಚಿಂತನೆ
ಪದವೀಧರನಾಗಿ ಲೌಕಿಕ ಆಲೋಚನೆ
ಅಧ್ಯಾಪಕನಾಗಿ ಪಠ್ಯ ಬೋಧನೆ
ಪ್ರಾಂಶುಪಾಲರಾಗಿ ಸಕಲ ವಿದ್ಯಾರ್ಜನೆ
ಕುಲಪತಿಗಳಾಗಿ ತಮ್ಮ ಸೇವೆಯಲ್ಲಿ ಸಾಧನೆ
ಮಾಡಲಸಾಧ್ಯ ಕುವೆಂಪುರವರ ಕಾರ್ಯವರ್ಣನೆ.

ನಿಸರ್ಗದ ಸೊಬಗು ತುಂಬಿದ ಪ್ರಕೃತಿ ಗೀತೆಗಳಲಿ
ಹೃದಯ ಭಾವನೆ ತುಂಬಿದೆ ಪ್ರೇಮ-ಪ್ರಣಯ ಗೀತೆಗಳಲಿ
ಈ ನೆಲದ ಕೆಂಪು ತುಂಬಿದ ನಾಡು ನುಡಿ ದೇಶ ಗೀತೆಗಳಲಿ
ಸಮಾಜದ ಕಳಕಳಿ ತುಂಬಿದ ಚಿಂತನಾತ್ಮಕ ಗೀತೆಗಳಲಿ
ಎಲ್ಲವೂ ರಚಿತವಾಗಿದೆ ಅವರ ಆಂತರ್ಯದ ಭಾವನೆಗಳಲಿ.

ಹೊಸ ಚಿಂತನೆಗಳು ಮೂಡಿಸಿದ ಚಿಂತನೆಕಾರ
ಮಾನವ ಪ್ರೀತಿಯನ್ನು ತೋರಿಸಿದ ನಾಟಕಕಾರ
ಸೃಜನ ಶೀಲತೆಯನು ಕಲಿಸಿದ ಕಾದಂಬರಿಕಾರ
ನಿಸರ್ಗ ಪ್ರೀತಿಯನು ಸೃಷ್ಟಿಸಿದ ಕವಿಗಾರ
ವಿಶ್ವಮಾನವತೆಯನು ಸಾರಿದ ಕತೆಗಾರ
ಆಧುನಿಕ ಕನ್ನಡ ಸಾಹಿತ್ಯ ಕಂಡ ಶ್ರೇಷ್ಠ ಕೃತಿಗಾರ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1955ರಲ್ಲಿ
ಪದ್ಮಭೂಷಣ ಪ್ರಶಸ್ತಿ 1958ರಲ್ಲಿ
ರಾಷ್ಟ್ರಕವಿ ಪ್ರಶಸ್ತಿ 1964ರಲ್ಲಿ ಜ್ಞಾನಪೀಠ ಪ್ರಶಸ್ತಿ 1938ರಲ್ಲಿ
ಪಂಪ ಪ್ರಶಸ್ತಿ 1988ರಲ್ಲಿ ಕರ್ನಟಕರತ್ನ ಪ್ರಶಸ್ತಿ 1992ರಲ್ಲಿ
ನಿಮ್ಮ ಸಾಧನೆ ಅಮರ ವಿಶ್ವಮಟ್ಟದಲ್ಲಿ.

***

# ನರಿಯ ಮೋಸಗಾರಿಕೆ

✍: ವರ್ಷ
9ನೇ ತರಗತಿ, ಕನ್ನಡ ಮಧ್ಯಮ

**ಒಂ**ದು ಊರಿನಲ್ಲಿ ನರಿ ಮತ್ತು ಒಂಟೆ ವಾಸಿಸುತ್ತಿದ್ದವು. ಇಬ್ಬರೂ ಗೆಳೆಯರಾಗಿದ್ದರು. ದಿನಾಲೂ ಕಬ್ಬಿನ ತೋಟಕ್ಕೆ ಹೋಗುತ್ತಿದ್ದರು. ಆ ಕಬ್ಬಿನ ತೋಟಕ್ಕೆ ಹೋಗುವ ದಾರಿಯಲ್ಲಿ ಒಂದು ಕೊಳವನ್ನು ದಾಟಿ ಹೋಗಬೇಕಿತ್ತು. ದಿನಾಲೂ ನರಿಯನ್ನು ತನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ಒಂಟೆ ಆ ಕೊಳವನ್ನು ದಾಟಿಸುತ್ತಿತ್ತು. ಒಂದು ದಿನ ತೋಟದಲ್ಲಿ ಕಬ್ಬು ತಿನ್ನುವ ದೃಶ್ಯವನ್ನು ಮಾಲೀಕನು ನೋಡಿದನು. ಮಾಲೀಕನನ್ನು ನೋಡಿ ನರಿ ಒಂಟೆಗೆ ಹೇಳದೇ ಓಡಿ ಹೋಯಿತು. ಆಗ ಮಾಲೀಕನು ಒಂಟೆಗೆ ತುಂಬಾ ಹೊಡೆದನು. ಆಗ ಪಾಪ ಒಂಟೆಯು ಕೂಗಿ ಕೂಗಿ ಓಡಿತು. ಆ ಒಂಟೆಯು ನರಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕೆಂದು ಒಂದು ಉಪಾಯ ಮಾಡಿತು. ಈ ಒಂಟೆಯು ಕೊಳದ ಹತ್ತಿರ ಹೋಗುವಾಗ ಒಂದು ಕಡೆ ನರಿಯು ನಿಂತಿತ್ತು. ಒಂಟೆಯು ನರಿಯನ್ನು ಕೊಳದ ಹತ್ತಿರ ಕರೆದುಕೊಂಡು ಹೋಯಿತು. ಒಂಟೆಯು ನರಿಯನ್ನು ಕರೆದು, "ಬಾ, ನಾನು ನಿನಗೆ ಕೊಳವನ್ನು ದಾಟಿಸುತ್ತೇನೆ" ಎಂದು ಹೇಳಿತು. ಆಗ ನರಿಯು ಬಂದಿತು. ಕೊಳದ ಮಧ್ಯೆ ನರಿಯನ್ನು ಒಂಟೆ ಒಮ್ಮೆಲೆ ದೂಡಿಬಿಟ್ಟಿತು. ನರಿಯು ಸತ್ತು ಹೋಯಿತು.

***ಈ ಕಥೆಯ ಆಶಯವೇನೆಂದರೆ: ನಾವು ಮೋಸ ಮಾಡಬಾರದು. ಮಾಡಿದರೆ, ಅದು ನಮಗೆ ಸಂಕಟವನ್ನು ತರುತ್ತದೆ.***

❋❋❋

# ಬೆಕ್ಕಿನ ಸೊಕ್ಕು

✍: ಚೈತ್ರ
8ನೇ ತರಗತಿ, ಕನ್ನಡ ಮಧ್ಯಮ

**ರೈ**ತನೊಬ್ಬ ಬೆಕ್ಕೊಂದನ್ನು ಸಾಕಿದ್ದ. ಅದನ್ನು ತುಂಬಾ ಚೆನ್ನಾಗಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ. ಹಾಗೆಯೇ, ಆತನಲ್ಲಿ ಕಪ್ಪು ಬಣ್ಣದ ಹಸುವೊಂದಿತ್ತು. ಆ ಹಸುವಿನನ ಹಾಲು ಕುಡಿದು ಬೆಕ್ಕು ತುಂಬಾ ಸೊಕ್ಕಿನಿಂದ ಬೆಳೆದಿತ್ತು. ಅಲ್ಲದೆ ಅದಕ್ಕೆ ಕೊಬ್ಬು ಕೂಡಾ ಬಂದಿತ್ತು. ಹೀಗಾಗಿ ಆ ಬೆಕ್ಕು ರೈತನ ದವಸ ಧಾನ್ಯಗಳನ್ನು ತಿಂದು ಹಾಳು ಮಾಡುತ್ತಿದ್ದ ಇಲಿ ಹೆಗ್ಗಣಗಳನ್ನು ಕಂಡರೂ ಅವುಗಳನ್ನು ಬೇಟೆಯಾಡದೇ ಸದಾ ಕೊಬ್ಬಿನಿಂದ ಮಲಗಿಕೊಂಡೇ ಇರುತ್ತಿತ್ತು. ಇದನ್ನು ಗಮನಿಸಿದ ಹಸು, "ಬೆಕ್ಕೇ....ಬೆಕ್ಕೇ! ಹೀಗೆ ಸೋಮಾರಿಯಾಗಿ ಬಾಳೋದು ಸರೀನಾ? ಯಜಮಾನನ ದವಸಗಳನ್ನು ಹಾಳು ಮಾಡುತ್ತಿರುವ ಇಲಿಗಳನ್ನೇಕೆ ಬೇಡೆಯಾಡುತ್ತಿಲ್ಲ? ಮಾಲೀಕನಿಗೆ ಅನ್ಯಾಯ ಮಾಡುವುದು ನ್ಯಾಯವಾ?" ಎಂದಿತು. ಬೆಕ್ಕು ಕಣ್ಣು ಕೆಂಪಗೆ ಮಾಡಿಕೊಂಡು, ಮೈಕೈ ಕುಣಿಸುತ್ತಾ, "ಎಲಾ ಹಸುವೇ, ನೀನು ನಂಗೆ ಬುದ್ಧಿ ಹೇಳ್ತೀಯಾ? ನಿಂಗ್ಯಾಕೆ ಉಸಾಬರಿ?" ಎಂದು ಮೂದಲಿಸಿತು. ಹಸು ಬೆಕ್ಕಿಗೆ ಬುದ್ಧಿ ಕಲಿಸುವ ಹುನ್ನಾರ ಮಾಡಿ ಹಾಲು ಕೊಡುವುದನ್ನೇ ನಿಲ್ಲಿಸಿತು. ಆಗ ಬೆಕ್ಕಿಗೆ ಹಾಲು ಸಿಗದೇ ಉಪವಾಸ ಮಲಗಬೇಕಾಯಿತು. ಹೀಗೆ ಕೆಲವು ದಿನಗಳ ವರೆಗೆ ಹಸು ಹಾಲು ಕೊಡುವುದನ್ನು ನಿಲ್ಲಿಸಿತು.

ಹಾಲು–ಮೊಸರು ದೊರಕದೇ ಬೆಕ್ಕು ಉಪವಾಸದಿಂದ ಪರದಾಡುವಂತಾಯಿತು. ಆಗ ಬೆಕ್ಕಿಗೆ ತನ್ನ ತಪ್ಪಿನ ಅರಿವಾಯಿತು. ಅಕ್ಕರೆಯಿಂದ ಸಾಕಿ–ಸಲಹಿದ ಮಾಲೀಕನ ದುಡಿಮೆಯ ಫಲವನ್ನು ಹಾಳು ಮಾಡುವ ಇಲಿ–ಹೆಗ್ಗಣಗಳನ್ನು ಬೇಟೆಯಾಡುವುದಕ್ಕೆ ಶುರು ಮಾಡಿತು. ಇದರಿಂದ ಹರುಷಗೊಂಡ ಹಸು ಮತ್ತೆ ಹಾಲನ್ನು ಕೊಡತೊಡಗಿತು.

**ನೀತಿ: ಗರ್ವದಿಂದ ಸುಖವಿಲ್ಲ.**

❋❋❋

# ತಂದೆ ತಾಯಿಯ ಪ್ರೀತಿ

✍ : ವಿಶಾಲ್
I PUC

**ತಂ**ದೆ ತಾಯಿ ಎಂಬುದು ಎಲ್ಲ ಮಕ್ಕಳಿಗೂ ದೇವರು ಕೊಟ್ಟ ಒಂದು ಅಮೂಲ್ಯವಾದ ಉಡುಗೊರೆ. ತಂದೆ ತಾಯಿಗಳು ದೇವರಿಗೆ ಸಮ. ಈ ಜಗತ್ತಿನಲ್ಲಿ ನಮಗೆ ಕಾಣುವಂತಹ ದೇವರು ಎಂದರೆ ನಮ್ಮ ತಂದೆತಾಯಿ. ಈ ಸ್ವಾರ್ಥ ತುಂಬಿದ ಜಗತ್ತಿನಲ್ಲಿ ತಂದೆ ತಾಯಿಗಳು ಯಾವುದೇ ಆಸೆ ತಮ್ಮಲ್ಲಿ ಇಲ್ಲದೆ ತಮ್ಮ ಮಕ್ಕಳಿಗಾಗಿ ತಮ್ಮ ಜೀವನವನ್ನು ಕೊಟ್ಟು ಮಕ್ಕಳು ಕಾಣುವಂತಹ ಸಂತೋಷದಲ್ಲಿ ತಮ್ಮ ಜೀವನವನ್ನು ಕಾಣುತ್ತಾರೆ.

ತಂದೆತಾಯಿಗಳು ನಮಗೋಸ್ಕರ ಏನೆಲ್ಲಾ ಮಾಡುತ್ತಾರೆ. ನಾವು ಸುಖವಾಗಿ ಇರಬೇಕು ಎಂದು ಸ್ವತಃ ಅನೇಕ ಕಷ್ಟಗಳನ್ನು ಅನುಭವಿಸುತ್ತಾರೆ. ಈ ಋಣವನ್ನು ಮಕ್ಕಳು ತೀರಿಸುವುದು ಅಸಾಧ್ಯ. ಕನಿಷ್ಠಪಕ್ಷ ನಾವು ನಮ್ಮ ತಂದೆ ತಾಯಿಯ ಮುಖದಲ್ಲಿ ಸಂತೋಷವನ್ನು ಕಾಣಲು ಪ್ರಯತ್ನ ಪಡಬೇಕು.

ತಾಯಿ ತನ್ನ ಮಗುವನ್ನು 9 ತಿಂಗಳು ತನ್ನ ಗರ್ಭದಲ್ಲಿ ಕಾಪಾಡಿಕೊಳ್ಳುತ್ತಾ ಆ ಮಗು ಈ ಜಗತ್ತಿಗೆ ಬಂದಾಗ ತಂದೆ ತಾಯಿ ಆ ಮಗುವಿನ ಮುಖದಲ್ಲಿ ಸಂತೋಷವನ್ನು ಕಾಣುತ್ತಾ ತಮ್ಮ ಜೀವನವನ್ನು ನಡೆಸುತ್ತಾರೆ. ತಾಯಿ ಹೇಗೆ ತನ್ನ ಮಗುವನ್ನು ನೋಡಿಕೊಳ್ಳುತ್ತಾ ತನ್ನ ಜೀವನವನ್ನು ನಡೆಸುತ್ತಾರೆ ಹಾಗೆ ತಂದೆ ತನ್ನ ಮಗು ಮತ್ತು ತನ್ನ ಹೆಂಡತಿಯನ್ನು ನೋಡಿಕೊಳ್ಳುತ್ತ ತನ್ನ ಜೀವನವನ್ನು ನಡೆಸುತ್ತಾರೆ.




ಈ ಜಗತ್ತಿನ ಮೇಲೆ ನಾವಿಂದು ಇರಬೇಕಾದರೆ ಇದಕ್ಕೆ ತಮ್ಮ ತಂದೆತಾಯಿಯರೇ ಕಾರಣ. ಹುಟ್ಟಿದ ದಿನದಿಂದ ಪಾಲನೆ ಮಾಡಿ ತಮಗೆ ಶಿಕ್ಷಣವಿಲ್ಲದಿದ್ದರೂ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಿ ಸಮಾಜದಲ್ಲಿ ಗಣ್ಯವ್ಯಕ್ತಿಯ ದರ್ಜೆ ಪಡೆಯಲು ನೆರವಾಗಿದ್ದಾರೆ.

ಈ ಜಗತ್ತಿನಲ್ಲಿ ತಂದೆ ತಾಯಿಯ ಪ್ರೀತಿಗಿಂತ ಮಿಗಿಲಾದ ಪ್ರೀತಿ ಬೇರೆ ಇಲ್ಲ. ತಂದೆ ತಾಯಿ ತನ್ನ ಮಗುವಿನ ಇಷ್ಟಗಳು ಮತ್ತು ಇಷ್ಟ ಪಡದಿರುವಿಕೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಮಗುವಿಗೆ ಸರಿ ಮತ್ತು ತಪ್ಪುಗಳನ್ನು ಪ್ರತ್ಯೇಕಿಸಲು ಕಲಿಸುತ್ತಾರೆ.

ಜೀವಕ್ಕೆ ಅತ್ಯಂತ ನೆಮ್ಮದಿ ಕೊಡುವ ಜಾಗ ಅಂದ್ರೆ
"ಅಪ್ಪನ ಹೆಗಲು" "ಅಮ್ಮನ ಮಡಿಲು"
ಇವೆರಡೂ ಸ್ವರ್ಗಕ್ಕಿಂತ ಮಿಗಿಲು.

❋❋❋

# ಆಯುರ್ವೇದ

✍ : ಅನನ್ಯ ಜೆ., I B1

**ಫಿಟ್** ಆಗಿರಬೇಕೆಂದರೆ, ಆರೋಗ್ಯಕರ ಜೀವನ ನಡೆಸಬೇಕೆಂದರೆ, ನಮ್ಮ ಜೀವನದಲ್ಲಿ ಹೊಸ ಬದಲಾವಣೆಗಳನ್ನು ತರಬೇಕೆಂದರೆ, ಹೊಸ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಮಾತ್ರವಲ್ಲ, ನಮ್ಮ ದೈನಂದಿನ ದಿನಚರಿಯ ಬಗ್ಗೆ ಗಮನ ಹರಿಸಬೇಕು. ಆಯುರ್ವೇದದ ಪ್ರಕಾರ, ದಿನನಿತ್ಯ ಕೆಲವು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಕರ ಜೀವನ ನಡೆಸಬಹುದು.

ಆಯುರ್ವೇದ ತಜ್ಞರ ಪ್ರಕಾರ, ಆಯುರ್ವೇದ ನಮ್ಮ ಜೀವನದ ಒಂದು ವಿಧಾನ, ಈ ವಿಧಾನ ಅನುಸರಿಸುವ ಮೂಲಕ ಆರೋಗ್ಯಕರ ಜೀವನಶೈಲಿ ಮತ್ತು ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಆಯುರ್ವೇದವು ನಮ್ಮ ದೇಹ,, ಮನಸ್ಸಿನ ನಡುವಿನ ಸಮತೋಲನವನ್ನು ಕಂಡುಕೊಳ್ಳಲು ಪ್ರೋತ್ಸಾಹಿಸುತ್ತದೆ. ಏಕೆಂದರೆ, ಈ ಎರಡು ಒಂದಕ್ಕೊಂದು ಸಂಪರ್ಕ ಹೊಂದಿವೆ. ಆರೋಗ್ಯಕರ ಜೀವನಕ್ಕಾಗಿ ಅಳವಡಿಸಿಕೊಳ್ಳಬಹುದಾದ ಕೆಲವು ಪ್ರಮುಖ ಆಯುರ್ವೇದ ಪದ್ಧತಿಗಳನ್ನು ಇಲ್ಲಿ ಕೊಡಲಾಗಿದೆ ನೋಡಿ.

ಪ್ರಸಿದ್ಧ ಲೇಖಕ ಬೆನ್ ಫ್ರಾಂಕ್ಲಿನ್, ಬೇಗನೆ ಮಲಗಿ ಬೇಗನೆ ಏಳುವುದರಿಂದ ಮನುಷ್ಯನನ್ನು ಆರೋಗ್ಯವಂತ, ಶ್ರೀಮಂತ ಮತ್ತು ಬುದ್ಧಿವಂತನನ್ನಾಗಿ ಮಾಡುತ್ತದೆ ಎಂದು ಹೇಳಿದ್ದಾರೆ. ಆಯುರ್ವೇದ ಕೂಡಾ ಅದೇ ಹೇಳುತ್ತದೆ. ಸೂರ್ಯೋದಯಕ್ಕೆ ಕನಿಷ್ಠ ಒಂದು ಗಂಟೆಯಾದರೂ ಮುಂಚಿತವಾಗಿ ಬೇಗನೆ ಎದ್ದೇಳಬೇಕು.

ಬ್ರಹ್ಮಜ್ಞಾ (ಧ್ಯಾನ ಮತ್ತು ಸ್ವಯಂ ವಿಶ್ಲೇಷಣೆ) ಸರ್ವೋಚ್ಚ ಜ್ಞಾನ ಮತ್ತು ಶಾಶ್ವತ ಸಂತೋಷವನ್ನು ಪಡೆಯಲು ಈ ಸಮಯವನ್ನು ಅತ್ಯುತ್ತಮವೆಂದು ಪರಿಗಣಿಸಲಾಗಿದೆ. ಈ ಸಮಯದಲ್ಲಿ ಪರಿಸರವು ಶುದ್ಧ, ಶಾಂತ ಮತ್ತು ಹಿತವಾಗಿದ್ದು, ನಿದ್ದೆಯ ನಂತರ ಮನಸ್ಸು ತಾಜಾವಾಗಿರುತ್ತದೆ. ಬೆಳಗ್ಗೆ ಬೇಗನೆ ಏಳಲು ರಾತ್ರಿ ಸಮಯದಲ್ಲಿ ವಿಶ್ರಾಂತಿ ಅತ್ಯಗತ್ಯ. ಕನಿಷ್ಠ ಏಳರಿಂದ ಎಂಟು ಗಂಟೆಗಳ ಕಾಲ ನಿದ್ದೆ ಮಾಡಬೇಕು.

ಮುಂಜಾನೆ ವ್ಯಾಯಾಮ ಮಾಡುವುದರಿಂದ ದೇಹದಲ್ಲಿನ ಜಡತ್ವವನ್ನು ತೆಗೆದುಹಾಕಬಹುದು, ರೀಚಾರ್ಜ್ ಹಾಗೂ ಪುನರ್ಯೌವನಗೊಳಿಸಲು ಸಹಾಯ ಮಾಡಬಹುದು. ಬೆಳಗ್ಗೆ ತಾಲೀಮು ಮಾಡಿದ ನಂತರ, ನಿಮಗೆ ಚೆನ್ನಾಗಿ ಹಸಿವಾಗುತ್ತದೆ ಮತ್ತು ದಿನವಿಡೀ ಸಕ್ರಿಯವಾಗಿರುತ್ತೀರಿ.

**ಮೂಗಿಗೆ ಎಣ್ಣೆ ಹಾಕುವುದು**

ನಸ್ಯವು ಮೂಗಿನ ಸನಾತನ ಚಿಕಿತ್ಸೆಯಾಗಿದೆ. ಎರಡು ಹನಿ ಎಳ್ಳಿನ ಎಣ್ಣೆ/ಸಾಸಿವೆ ಎಣ್ಣೆ/ತುಪ್ಪ ಹಾಕಿ. ಇದು ಅಕಾಲಿಕ ಕೂದಲು ಉದುರುವುದನ್ನು, ಬೋಳಾಗುವುದನ್ನು ನಿಲ್ಲಿಸುತ್ತದೆ ಮತ್ತು ಉತ್ತಮ ನಿದ್ದೆ ಬರಲು ಸಹಾಯ ಮಾಡುತ್ತದೆ.

ಬೇವು ಜನಪ್ರಿಯ ಗಿಡ ಮೂಲಿಕೆಯಾಗಿದ್ದು, ಇದನ್ನು ವಿವಿಧ ಉದ್ದೇಶಗಳಿಗಾಗಿ ವ್ಯಾಪಕವಾಗಿ ಬಳಸಲಾಗುತ್ತದೆ. ಹಲ್ಲುಜ್ಜುವ ಬ್ರಶ್‌ಗಳು, ಅಸ್ತಿತ್ವಕ್ಕೆ ಬರುವ ಮೊದಲೇ ಬೇವಿನ ಕಡ್ಡಿಯನ್ನು ಮೌಖಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಸಾಂಪ್ರದಾಯಿಕವಾಗಿ ಬಳಸಲಾಗುತ್ತಿತ್ತು. ಬೇವಿನ ತಾಜಾ ಕಡ್ಡಿಯನ್ನು (ಅಜದಿ ರಕ್ತಾ ಇಂಡಿಕಾ), ಖಾದಿರ್ (ಅಕೇಶಿಯಾ ಕ್ಯಾಟೆಚು) ಇತ್ಯಾದಿಗಳನ್ನು ಬಳಸುವುದರಿಂದ ಹಲ್ಲುಗಳನ್ನು ಸ್ವಚ್ಛಗೊಳಿಸಬಹುದು. ಇದರಿಂದ ಬಾಯಿಯ ದುರ್ವಾಸನೆ ಮಾಯವಾಗುತ್ತದೆ.

ವ್ಯಾಯಾಮ ಮಾಡಿ ಅರ್ಧದಿಂದ ಒಂದು ಗಂಟೆಯ ನಂತರ ಸ್ನಾನ ಮಾಡಿ. ತಾಲೀಮು ಮುಗಿದ ತಕ್ಷಣ ಸ್ನಾನಕ್ಕೆ ತೆರಳುವುದರಿಂದ ಅನೇಕ ಪ್ರಯೋಜನಗಳಿವೆ. ವಿಶೇಷವಾಗಿ ಜಿಮ್ ಅಥವಾ ಇತರ ವ್ಯಾಯಾಮಗಳನ್ನು ಮಾಡಿ ಬಂದ ನಂತರ ನಿಮ್ಮ ಚರ್ಮದ ಮೇಲಿರುವ ಬೆವರು ಬ್ಯಾಕ್ಟೀರಿಯಾಗಳು ಸಂತಾನೋತ್ಪತ್ತಿ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದರೆ ವ್ಯಾಯಾಮ ಮಾಡಿ ಬಂದ ನಂತರ, ನೀವು ಸಾಬೂನಿನಿಂದ ಸ್ನಾನ ಮಾಡಿದರೆ ನಿಮ್ಮ ಬೆವರು ತೊಳೆದು ಹೋಗುತ್ತದೆ.

**ಮಸಾಲೆಯುಕ್ತ ಆಹಾರ**

ಮಸಾಲೆಗಳು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತವೆ. ಹೃದಯವನ್ನು ರಕ್ಷಿಸುತ್ತವೆ ಮತ್ತು ಉರಿಯೂತದ ವಿರುದ್ಧ ಹೋರಾಡುತ್ತವೆ. ಆದ್ದರಿಂದ ಜೀರಿಗೆ, ಕೊತ್ತೊಂಬರಿ, ಶುಂಠಿ ಮತ್ತು ಅರಶಿನ ಸೇವಿಸುವುದನ್ನು ಮರೆಯಬೇಡಿ.

ಆಯುರ್ವೇದವು ರಾತ್ರಿ 8 ಗಂಟೆಯ ಮೊದಲು ಲಘು ಆಹಾರ ಸೇವಿಸಲು ಶಿಫಾರಸ್ಸು ಮಾಡುತ್ತದೆ. ಇದು ಚಯಾಪಚಯ ಕ್ರಿಯೆ ಹೆಚ್ಚಿಸಲು ಸಹಾಯ ಮಾಡುತ್ತದೆ. ರಾತ್ರಿ ಸ್ವಲ್ಪ ವಿಶ್ರಾಂತಿ ಪಡೆಯಲು ಅನುವು ಮಾಡಿಕೊಡುತ್ತದೆ.

**ಸರಿಯಾದ ನಿದ್ದೆ**

ಪರಿಸರವನ್ನು ಸ್ವಚ್ಛವಾಗಿ ಮತ್ತು ಆಹ್ಲಾದಕರವಾಗಿರಿಸಿಕೊಳ್ಳಿ. ಹಗಲು ಮಲಗುವುದನ್ನು ತಪ್ಪಿಸಿ. ಸರಿಯಾದ ನಿದ್ದೆ, ಆರೋಗ್ಯ ಮತ್ತು ದೀರ್ಘಾಯುಷ್ಯ ನೀಡುತ್ತದೆ. ಆಯುರ್ವೇದವು ನಿಮ್ಮ ದೇಹ, ಮನಸ್ಸು ಮತ್ತು ಚೈತನ್ಯದ ನಡುವೆ ಸಮತೋಲನವನ್ನು ಕಂಡುಕೊಳ್ಳಲು ಪ್ರೋತ್ಸಾಹಿಸುತ್ತದೆ. ಏಕೆಂದರೆ, ಈ ಎರಡೂ ಒಂದಕ್ಕೊಂದು ಸಂಪರ್ಕ ಹೊಂದಿವೆ ಎಂದು ತಜ್ಞರು ತಿಳಿಸಿದ್ದಾರೆ.

❋❋❋

## ಜೀವನ

✍: ವೈಷ್ಣವಿ, I B1

**ವಿ**ದ್ಯಾರ್ಥಿ ಜೀವನ ಬಹುಸುಂದರ
ಕುಣಿದು ಕುಪ್ಪಳಿಸುವ ರಂಗಮಂದಿರ
ಹಾಳು ಮಾಡದಿರಿ ಏ ಮನುಜರೇ.......

ನಮಗೆ ಬದುಕು ಕಲಿಸುವ ಪಾಠಗಳನ್ನು ಯಾವ ವಿದ್ಯಾಲಯದಲ್ಲೂ
ಯಾವ ಶಿಕ್ಷಕರೂ ಕಲಿಸಲಾರರು ಆದರೆ, ಬದುಕುವ ವಿಧಾನವನ್ನು
ಪ್ರತಿಯೊಂದು ವಿದ್ಯಾಲಯದ, ಪ್ರತಿಯೊಬ್ಬ ಶಿಕ್ಷಕನೂ ಕಲಿಸಿಕೊಡುತ್ತಾನೆ.....

ಜೀವನ ಎಂಬುದು ಸಮುದ್ರದಂತೆ
ಯಾವಾಗ ಜೋರಾದ ಅಲೆ ಬರುತ್ತದೆ, ಯಾವಾಗ ಸುನಾಮಿ ಬರುತ್ತದೆ
ಅಂತ ಯಾರಿಗೂ ಗೊತ್ತಾಗೋದಿಲ್ಲ
ಹಾಗಾಗಿ ನಾವುಗಳು ಎಲ್ಲದಕ್ಕೂ ತಯಾರಾಗಿರಬೇಕು.

ಜೀವನ ಎಂಬ ಸುಂದರ ಪಯಣ
ಕನಸುಗಳ ಹೊತ್ತ ಮನಸ್ಸಿನ ಪಯಣ
ಬೇವುಬೆಲ್ಲಗಳ ಸವಿಯಾದ ಮಿಶ್ರಣ
ಇವು ನಮ್ಮ ಬಾಳಿನ ಸುಂದರ ಕ್ಷಣ.....

ಚಲಿಸುವ ಮೋಡಗಳ ಮರೆಯಲ್ಲಿ ನಾನು ನಿಮ್ಮನ್ನು ಕಂಡೆ,
ಹೊಳೆಯುವ ನಿಮ್ಮನ್ನು ಕಂಡು ಬೆಳ್ಳಿ ಬಟ್ಟಲೆಂದುಕೊಂಡೆ,
ನಿಮ್ಮ ತುಟಿಯಲ್ಲಿ ಮಿನುಗುವ ಸುಂದರವಾದ ಮಿಂಚು ಕಂಡೆ
ನಿಮ್ಮ ಮುಗ್ಧ ನಗುವಲ್ಲಡಗಿದ ಮಾಯಾಶಕ್ತಿಯ ಕಂಡೆ
ಆ ನಗು ಎಲ್ಲರನ್ನೂ ಆಕರ್ಷಿಸುವ ರೀತಿ ಕಂಡೆ
ನಿಮ್ಮನ್ನು ಪೂರ್ಣ ಚಂದಿರ ಎಂದುಕೊಂಡೆ
ಆ ಚಂದಿರನಲ್ಲಿ ಅಮಾವಾಸ್ಯೆಯ ಕಲೆಯ ಕಂಡೆ,
ಆದರೆ ನಿಮ್ಮಲ್ಲಿ ನಾನು ನಿಷ್ಕಲ್ಮಷ ಪ್ರೀತಿಯ ಕಂಡೆ.

❋❋❋

# ಕಳ್ಳತನ ಬಿಟ್ಟ ವೀರಪ್ಪ

✍: ಅನೀಶ್ ಬಿ., I PUC

ವೀರಪ್ಪ ಎಂಬ ಕುಖ್ಯಾತ ಕಳ್ಳನೊಬ್ಬ ಅಂದು ರಾತ್ರಿ ಒಂದು ವಠಾರದಲ್ಲಿನ ಮಧ್ಯಮವರ್ಗದ ಮನೆಯೊಂದಕ್ಕೆ ನುಗ್ಗಲು ಸಂಚು ರೂಪಿಸಿದ್ದ. ಮೊದಲೇ ಯೋಚಿಸಿದಂತೆ ಕಾರ್ಗತ್ತಲ ಇರುಳಿನಲ್ಲಿ ಆ ಮನೆಯ ಹಿಂದಿನ ಬಾಗಿಲನ್ನು ಒಡೆದು ಮನೆಯೊಳಗೆ ನುಗ್ಗಿದ. ಮನೆಯಲ್ಲಿ ಹಿರಿಯ ವಯಸ್ಸಿನ ಮುದುಕಿಯೊಬ್ಬಳು ಇರುವುದನ್ನು ಖಾತ್ರಿಪಡಿಸಿಕೊಂಡ. ಇನ್ನೇನು ಕಳ್ಳತನದ ಕೆಲಸಕ್ಕೆ ಸರಾಗವಾಯಿತೆಂದು ಆ ಮನೆಯ ಕಪಾಟಿರುವ ಕೋಣೆಯೊಳಗೆ ನುಗ್ಗಿದ.

ಅಷ್ಟರಲ್ಲಿಯೇ ಅದೇ ಕೋಣೆಯೊಳಗೆ ಮಲಗಿದ್ದ ಮುದುಕಿ ಎಚ್ಚರಗೊಂಡು, "ಯಾರು...? ಯಾರು...?" ಎಂದು ಜೋರಾಗಿ ಕೂಗಿಕೊಂಡಳು. ಅದಾಗಲೇ ಕಳ್ಳ ವೀರಪ್ಪ, ಮುದುಕಿಯ ಬಾಯಿಗೆ ಬಟ್ಟೆಯನ್ನು ತುರುಕಲು ಮುಂದಾದ. ಆ ಮುದುಕಿ ತಪ್ಪಿಸಿಕೊಳ್ಳಲು ಯತ್ನಿಸುತ್ತಾ, "ದಯವಿಟ್ಟು ನನ್ನನ್ನು ಕೊಲ್ಲಬೇಡ. ನನ್ನ ಮಗಳು ಮತ್ತು ಅಳಿಯ ಅವರ ಪುಟ್ಟ ಮಗುವಿನ ಚಿಕಿತ್ಸೆಗಾಗಿ ದೂರದ ಊರಿಗೆ ಹೋಗಿದ್ದಾರೆ. ಇಂತಹ ಪರಿಸ್ಥಿಯಲ್ಲಿ ನನ್ನನ್ನು ಕೊಲ್ಲಬೇಡ" ಎಂದು ಅಳುತ್ತಾ ನಿವೇದಿಸಿಕೊಂಡಳು.

ಕಳ್ಳ ವೀರಪ್ಪನಿಗೆ ಆಕೆಯ ಸ್ಪರ್ಶದಿಂದ ಮತ್ತು ಧ್ವನಿಯಿಂದ 'ಇದು ನನ್ನ ಹೆತ್ತವ್ವನೇ' ಎಂದು ಭಾಸವಾಯಿತು. ಬಾಯಿ ತೆರೆದು ಏನನ್ನೂ ಹೇಳಲಾರದೇ ಅದೇ ಹಿಂದಿನ ಬಾಗಿಲಿನಿಂದ ಯಾರ ಕಣ್ಣಿಗೂ ಕಾಣದಂತೆ ತಪ್ಪಿಸಿಕೊಂಡು ತನ್ನ ಗೌಪ್ಯದ ಜಾಗವನ್ನು ಸೇರಿಕೊಂಡನು. ಬೆಳಕು ಹರಿಯುವವರೆಗೂ ಕುಳಿತು, ತನ್ನ ಹಳೆಯ ನೆನಪಿನ ಬುತ್ತಿಯನ್ನು ತೆರೆದನು. ಹೆತ್ತ ತಾಯಿಯನ್ನು ನೋಡಿಕೊಳ್ಳುತ್ತಿರುವ ನನ್ನ ಸ್ವಂತ ತಂಗಿಯ ಮನೆಗೇ ನಾನು ಕಳ್ಳತನ ಮಾಡುವುದಕ್ಕೆ ಹೋಗಿದ್ದು ಎಂದು ಅವನ ಮನದ ಪುಟದಲ್ಲಿ ಹಾದುಹೋಯಿತು.

ತಾನು 5ನೇ ತರಗತಿಯಲ್ಲಿದ್ದಾಗ ಅಮ್ಮನೊಂದಿಗೆ ಜಾತ್ರೆಗೆ ಹೋಗಿದ್ದು, ಆ ಜನಜಂಗುಳಿಯಲ್ಲಿ ಅಮ್ಮನಿಂದ ಕಣ್ತಪ್ಪಿಹೋಗಿ ಎಷ್ಟೇ ಪ್ರಯತ್ನಪಟ್ಟರೂ ಮರಳಿ ಅಮ್ಮನನ್ನು ಸೇರಲಾಗದ್ದು, ವಿಧಿಯಾಟ ಎಂಬಂತೆ, ಕಳ್ಳರ ಕೈಗೆ ತಾನು ಸೇರಿದ್ದು, ಎಲ್ಲವೂ ನೆನಪಿನಂಗಳದಲ್ಲಿ ಹಾದುಹೋದವು. ಕಳ್ಳರೊಂದಿಗೆ ಬದುಕಬೇಕಾದ ಅನಿವಾರ್ಯತೆ ಸೃಷ್ಟಿಗೊಂಡಿದ್ದು, ಅವನಿಗೆ ತನ್ನ ಬಗ್ಗೆ ತನಗೇ ಅಸಹ್ಯವೆನಿಸತೊಡಗಿತು.

ಆ ಕ್ಷಣವೇ 'ಇದು ನನ್ನ ಜೀವನದ ಬದಲಾವಣೆಯ ಪರ್ವವಾಗಬೇಕು' ಎಂದು ಕಳ್ಳತನವನ್ನು ನಿಲ್ಲಿಸಿ, ತನ್ನೊಂದಿಗಿನ ಕಳ್ಳ ನಂಟರನ್ನು ಬಿಟ್ಟು, ಒಳ್ಳೆಯ ವ್ಯಕ್ತಿಯಾಗಿ ಬಾಳಲು ದೃಢ ಸಂಕಲ್ಪ ತೊಟ್ಟನು. ಅಂತೆಯೇ ಮುಂದೆ ಸಜ್ಜನ ನಾಗರಿಕನಾಗಿ ಬದುಕತೊಡಗಿದ. ಕೆಲ ವರ್ಷಗಳ ಬಳಿಕ, ಮತ್ತೆ ತಾಯಿ ಇದ್ದ ಮನೆಗೆ ಹೋಗಿ, ತಾಯಿಯ ಮಡಿಲಲ್ಲಿ ಮಗುವಾಗಿ ಮಲಗಿ, ಬದುಕಿನ ಪಾಠ ಕಲಿಸಿದ ತಾಯಿಯೊಂದಿಗೆ ತನ್ನ ಜೀವನವನ್ನು ಹೊಸ ದಿಕ್ಕಿನತ್ತ ಮುಖಮಾಡಿ ಬಾಳಿದ.

***

# ಬಡತನವನ್ನೂ ಕಿತ್ತು ತಿನ್ನುವ ಹಸಿವನ್ನು ನೀಗಲು ಮದ್ದುಂಟೆ?

✍ : ಭಾವನಾ ಸಾಲ್ಯಾನ್
I PUC SEBA

**ಮೊ**ನ್ನೆ ತಾನೇ ಒಂದು ಕಿರುಚಿತ್ರ ನೋಡುತ್ತಾ ಇದ್ದೆ. ನೋಡಿದ ಮೇಲೆ ಮನಸ್ಸೇಕೋ ಮತ್ತೆ ಈ ಹಸಿವಿನ ಯಾತನೆಯನ್ನು ತೋರಿಸಿ ಕಂಗೆಡಿಸಿತು. ಒಂದು ಪುಟ್ಟ ಹುಡುಗಿಯ ಬಡತನ ಹಸಿವಿನ ಜೊತೆ ಸಾಗುವ ಆ ಕಥೆ ಎಂಥವರ ಮನಸ್ಸನ್ನೂ ಕಲಕಿ ಹಾಕುತ್ತದೆ. ಅದರಲ್ಲಿರುವ ಒಂದು ಸನ್ನಿವೇಶ ನನಗೆ ಅತಿಯಾದ ಆನಂದವನ್ನು ಕೊಟ್ಟಿತು.

ಅದೊಂದು ಮನೆಯಲ್ಲಿ ಊಟದ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಸಾಮಾನ್ಯವಾಗಿ ಎಲ್ಲಾ ತಾಯಂದಿರ ಒಂದು ಸಮಸ್ಯೆ ತನ್ನ ಮಗು ಸರಿಯಾಗಿ ತಿನ್ನುವುದಿಲ್ಲ ಎನ್ನುವುದು. ಹೀಗಿರುವಾಗ ಆ ಕಾರ್ಯಕ್ರಮಕ್ಕೆ ಬಂದಿದ್ದ ವೈದ್ಯನ ಹತ್ತಿರ ಬಂದು ಒಬ್ಬಳು ತಾಯಿ ನನ್ನ ಮಗು ಸರಿಯಾಗಿ ಊಟ ಮಾಡುತ್ತಿಲ್ಲ. ಅದಕ್ಕೆ ಹಸಿವಾಗಲೂ ಯಾವುದಾದರೂ ಮದ್ದು ಇದ್ದರೆ ಬರೆದು ಕೊಡಿ ಡಾಕ್ಟರ್ ಅಂತಾಳೆ. ಇದನ್ನೆಲ್ಲ ದೂರದಿಂದಲೇ ನಿಂತು ಗಮನಿಸುವ ಆ ಪುಟ್ಟ ಹುಡುಗಿ, ಅದೇ ಮನೆಯಲ್ಲಿ ಕೆಲಸ ಮಾಡುವವಳಾಗಿರುತ್ತಾಳೆ. ಬಡತನದ ಬೇಗೆಯನ್ನು ಸಹಿಸಿ ನೊಂದಿರುವ ಜೀವವದು. ನಿಸ್ತೇಜವಾದ ಕಣ್ಣು ಬಡಕಲು ಶರೀರ. ಸ್ವಲ್ಪ ಹೊತ್ತಿಗೆ ಮೆಲ್ಲನೆ ಬಂದ ಆ ಹುಡುಗಿ ಅದೇ ವೈದ್ಯನ ಹತ್ತಿರ ಬಂದು ತನಗೂ ಒಂದು ಮಾತ್ರೆ ಬೇಕು ಎನ್ನುತ್ತಾಳೆ. ಅದನ್ನು ಕೇಳಿ ಆ ವೈದ್ಯನು ದಂಗಾಗಿ ಹೋಗುತ್ತಾನೆ. ಅವಳು ಕೇಳುವುದು, "ಡಾಕ್ಟರ್, ಹಸಿವೆಯೇ ಆಗದಿರುವಂತ ಮದ್ದು ಬರೆದು ಕೊಡಿ. ನನಗೆ, ನನ್ನ ತಮ್ಮನಿಗೆ ಮತ್ತು ನನ್ನ ಅಮ್ಮನಿಗೆ." ಬಹುಶಃ ಈ ಮಾತು ಎಂಥವರ ಮನಸ್ಸನ್ನೂ ಕರಗಿಸಬಹುದು. ಕ್ಷಣಕಾಲ ನಾನು ಕೂಡ ಬೆಚ್ಚಿಬಿದ್ದಿದ್ದೆ. ಈ ಹಸಿವು ಅನ್ನುವುದು ನಮ್ಮನ್ನು ಅದ್ಯಾವ ಮಟ್ಟಿಗೆ ದೈನ್ಯರನ್ನಾಗಿಸಿ ಬಿಡುತ್ತದೆ. ಒಂದು ಹೊತ್ತಿನ ಊಟಕ್ಕೂ ಪರದಾಡುವ ಈ ಜಊವಿಗಳ ನೋವು ಯಾರಿಗೂ ಅರಿಯಲು ಸಾಧ್ಯವಿಲ್ಲ. ಈ ಭೂಮಿಯ ಮೇಲಿನ ಸಕಲ ಜೀವರಾಶಿಗೂ ಹಸಿವಿನ ಅರಿವು ಇದ್ದೇ ಇರುತ್ತದೆ. ಇಲ್ಲಿ, ಹುಟ್ಟಿನ ಜೊತೆ ಹಸಿವೂ ಜನ್ಮ ತಾಳಿರುತ್ತದೆ. ಹಸಿವು ಸಕಲ ಜೀವರಾಶಿಯನ್ನು ಕಾಡುವ ಒಂದು ದಾರುಣ ಸ್ಥಿತಿ.

*****

ಅವತ್ತು ನಾನು ನೋಡಿದೆ, ಆ ಹುಡುಗನ ಸ್ಥಿತಿಯೂ ಹೀಗೇ ಇತ್ತು. ಹರಿದ ಬಟ್ಟೆಯನ್ನು ಕಚ್ಚಿಕೊಂಡು ಅದೇನು ಹೇಳುತ್ತಿದ್ದ, ಎಲ್ಲರೂ ಕುತೂಹಲದಿಂದ ಅವನ ಕಡೆ ನೋಡುತ್ತಿದ್ದರು. ಅವನ ಹೊಟ್ಟೆ ತೋರಿಸಿ ಹಸಿವು ಅಂತ ಪೆಕರುಪೆಕರಾಗಿ ಹೇಳುವಾಗ ನಗುವವರೇ ಜಾಸ್ತಿ ಇದ್ದರು. ಪಾಪ! ಅದೆಷ್ಟು ಹಸಿವಾಗಿತ್ತೋ? ಯಾರೋ ಒಬ್ಬರು ಒಂದು ಬ್ರೆಡ್ ಕೊಟ್ಟರು. ಅದನ್ನಾತ ಗಬಗಬನೇ ತಿಂದು ಮುಗಿಸಿದ. ಈ ಹಸಿವು, ಬಾಯಾರಿಕೆ ಯಾರನ್ನೂ ಕಾಡದೇ ಬಿಡಲಾರದು. ಅವನು ಹುಚ್ಚನಾಗಿದ್ದರೂ ಕೂಡ ಮುಂದೆ ಅವನು ನಮ್ಮೂರ ಶಾಲೆಯ ಜಗಲಿಯಲ್ಲಿ ಇಲ್ಲವೇ ಬಾವಿಯ ಪಕ್ಕ ಇದ್ದ ಕಟ್ಟೆಯ ಮೇಲೆ ಮಲಗುತ್ತಿದ್ದ. ನನಗಂತು ಮನೆಯಲ್ಲಿ ಅದೇನು ಮಾಡಿದರೂ ಮೊದಲಿಗೆ ನೆನಪಾಗುವುದೇ ಅವನ ಮುಖ. ತುಂಬಾ ಹಿಕೊಂಡು ಹೋಗಿ ಅವನ ಮುಂದೆ ಇಟ್ಟು ಕೈ ಸನ್ನೆಯಲ್ಲಿ ತಿನ್ನು ಅಂತ ತಿನ್ನಿಸಿ ಬಂದಾಗ ಸಮಾಧಾನ. ಅವನೇನೋ ಅದೆಷ್ಟು ತಿಂಡಿ ಇದ್ದರೂ ತಿಂದು ಮುಗಿಸುತ್ತಿದ್ದ. "ಅವನೊಬ್ಬ ಹುಚ್ಚ" ಎಂದು ಎಲ್ಲರೂ ಕರೆಯುತ್ತಿದ್ದರು. ಆದರೂ ಆತ ಯಾವತ್ತೂ ಯಾರಿಗೂ ಕೆಡುಕು ಮಾಡಿದವನಲ್ಲ. ನಮ್ಮೂರ ಕೆಲ ಪುಂಡ ಪೋಕರಿಗಳು ಅವನನ್ನು ಅದ್ಯಾವ ಮಟ್ಟಿಗೆ ಕೆಡಿಸಿದ್ದರು ಎಂದರೆ ತಾವು ಸೇದುವ ಬೀಡಿ ಸಿಗರೇಟುಗಳನ್ನು ಬಲವಂತವಾಗಿ ಸೇದಿಸುತ್ತಿದ್ದರು. ಪಾಪ ಅವನು ಮೊದಮೊದಲು ಕೊಸರಾಡುತ್ತಿದ್ದರೂ ತಿಂಡಿ ತೋರಿಸಿ ಸೇದು ಇಲ್ಲಾಂದ್ರೆ ತಿಂಡಿ ಸಿಗಲ್ಲ ಅನ್ನುತ್ತಿದ್ದರು. ಅವನು ಹಸಿವಿಗಾಗಿ ಅದನ್ನು ಸೇದಿ ಕ್ರಮೇಣ ಅದಕ್ಕೆ ಅಭ್ಯಾವಾಗಿ ಬಿಟ್ಟ. ಮುಂದೆ ಎಲ್ಲರ ಮುಂದೆಯೂ ಬೀಡಿಗಾಗಿ ಕೈಚಾಚ ತೊಡಗಿದ. ಅವನ ಹಸಿವು, ಅಮಾಯಕತೆಯನ್ನೇ ಬಂಡವಾಳ ಮಾಡಿಕೊಂಡ ಜನರನ್ನು ಕಂಡಾಗಲೆಲ್ಲ ಅಸಹ್ಯ ಅನಿಸುತ್ತಿತ್ತು.

ಅಮ್ಮಾ ತುಂಬಾ ಹಸಿವು, ಏನಾದರೂ ತಿನ್ನುವುದಕ್ಕೆ ಕೊಡಿ ಎಂದು ಯಾರಾದರೂ ಬಂದು ಕೈ ಚಾಚಿ ಕೇಳುವಾಗ ಮನಸ್ಸು ಭಾರವಾಗುತ್ತದೆ. ನಡೆಯಲು ತ್ರಾಣವಿಲ್ಲದವನ್ನು ನೋಡಿದಾಗ, ಹಸಿವಿನ ಯಾತನೆಯ ಅರಿವಾಗುತ್ತದೆ. ಇಂತಹ ನೂರಾರು ಜೀವಗಳು ಬೀದಿಬೀದಿಯಲ್ಲಿ ತಿರುಗುತ್ತಾ ಒಂದು ಹೊತ್ತಿನ ತುತ್ತಿಗಾಗಿ ಬೇಡುತ್ತಿರುತ್ತಾರೆ. ಇದಕ್ಕೆಲ್ಲಾ ಕಾರಣ ಈ ಹಸಿವು ಅನ್ನುವುದೇ ನೋವಿನ ವಿಷಯ. ಇದು ಬೆಳಕಿನಷ್ಟೇ ಸತ್ಯವಾದರೂ ಕೂಡ ಅತಿ ಬುದ್ಧಿವಂತನಾದ ಮನುಷ್ಯ ಮಾಡುವ ಅತಿ ದಡ್ಡತನದ ಕೆಲಸ ಈ ಆಹಾರವನ್ನು ಮುಲಾಜಿಲ್ಲದೆ ಹಾಳು ಮಾಡುವುದು. ನಾವು ದಿನನಿತ್ಯ ಬಳಸುವ ಪದಾರ್ಥಗಳು ಮುಲಾಜಿಲ್ಲದೆ ಮಣ್ಣುಪಾಲಾಗುತ್ತಿರುತ್ತದೆ. ಒಮ್ಮೆ ಯೋಚಿಸಿ ನೋಡಿದರೂ ಸಾಕು. ಈ ಆಹಾರ ಎಸೆಯುವ ಬದಲು ಹಸಿದವರ ಹೊಟ್ಟೆ ಸೇರಿದರೆ ಅದೆಂಥಹ ಪುಣ್ಯದ ಕೆಲಸ ಎಂದು. ಇನ್ನು ಸಭೆ ಸಮಾರಂಭಗಳಲ್ಲಿ ಯಥೇಚ್ಛವಾಗಿ ಬಳಸುವ ಆಹಾರಗಳು ಹೊಟ್ಟೆಗಿಂತ ಜಾಸ್ತಿಯಾಗಿ ಕಸದ ತೊಟ್ಟಿಗಳನ್ನು ಸೇರುವುದು ವಿಷಾದನೀಯ. ಅತಿಯಾಗಿ ಬಡಿಸಿಕೊಂಡು ಹಾಳು ಮಾಡುವ ನಾವು ಒಂದು ಕ್ಷಣವೂ ಅನ್ನದ ಮಹತ್ವವನ್ನು ಅರಿಯುವುದೇ ಇಲ್ಲ. ಇನ್ನೆಲ್ಲೋ ಹಸಿದು ಕುಳಿತಿರುವ ಮುಖ ನಮ್ಮ ಕಣ್ಮುಂದೆ ಕ್ಷಣಮಾತ್ರಕ್ಕೂ ಸುಳಿಯುವುದಿಲ್ಲ.

ನಾವು ತಂತ್ರಜ್ಞಾನ, ಆಹಾರ ಸಂಸ್ಕರಣೆ, ಒಟ್ಟು ಆಹಾರ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದು ಹೇಳಿಕೊಳ್ಳುವ ಅಭಿವೃದ್ಧಿಶೀಲ ರಾಷ್ಟ್ರಗಳು ಕೂಡ ಹಸಿವಿನ ಕುಣಿಕೆಯಿಂದ ಹೊರಬಂದಿಲ್ಲ. ಅಲ್ಲಿ ಇವತ್ತಿಗೂ ಹಸಿವಿನಿಂದ ಸಾಯುವವರ ಸಂಖ್ಯೆ ಅಧಿಕವಾಗಿದೆ. ಆ ದೇಶಗಳಲ್ಲಿ ಈಗಲೂ ಅಪೌಷ್ಟಿಕತೆಯಿಂದ ಸಾಯುವವರ ಸಂಖ್ಯೆ ಅಧಿಕವಾಗಿದೆ. ಆ ದೇಶಗಳಲ್ಲಿ ಈಗಲೂ ಅಪೌಷ್ಟಿಕತೆಯಿಂದ ಸಾಯುವವರ ಸಂಖ್ಯೆ ಆತಂಕ ಹುಟ್ಟಿಸುವಂತಿದೆ. ನಮ್ಮ ಮುಂದೆ ಲಭ್ಯವಿರುವ ಅಂಕಿ–ಸಂಖ್ಯೆಗಳ ಪ್ರಕಾರ, ವಿಶ್ವದಲ್ಲಿ ಒಂಭತ್ತು ಮಂದಿಗೆ ಒಬ್ಬ ಹಸಿವಿನಿಂದ ಬಳಲುತ್ತಿದ್ದಾನೆ. ಅಂದರೆ ಜಗತ್ತಿನ ಜನಸಂಖ್ಯೆಗೆ ಲೆಕ್ಕ ಹಾಕಿದರೆ ಅಂದಾಜು 795 ಮಿಲಿಯನ್ ಮಂದಿ ಈಗಲೂ ಹಸಿವಿನಿಂದ ಬಳಲುತ್ತಿದ್ದಾರೆ.

ನಮ್ಮ ಸಮಾಜದ ಸಂಪನ್ಮೂಲದ ಒಂದು ಕೊಡುಗೆ ಈ ಆಹಾರ. ಇದನ್ನು ನಾವೇ ಹಾಳು ಮಾಡುವುದು ಅದೆಷ್ಟು ಸರಿ? ನಮ್ಮ ಹೊಟ್ಟೆ ತುಂಬಿದ ನಂತರ ಮಿಕ್ಕಿದ್ದು ನಮ್ಮದಲ್ಲ, ಅದು ಹಸಿದವನದು ಅನ್ನುವ ಸತ್ಯ ಅರಿವಾದರೂ ಸಾಕು. ಅದಕ್ಕಾಗಿ ನಾವು ಬಳಸುವ ಆಹಾರವನ್ನು ಮಿತವಾಗಿ ಬಳಸುವ ಪದ್ಧತಿಯನ್ನು ಅನುಸರಿಸಬೇಕು. ಈ ಜಾಗೃತಿ ನಮ್ಮಿಂದಲೇ ಶುರುವಾದಾಗ ಹಾದಿ ಬೀದಿಯಲ್ಲಿ ಕಾಡಿಬೇಡುವ ಹಸಿದ ಮುಖಗಳು ಕ್ರಮೇಣ ಕಡಿಮೆಯಾಗುತ್ತವೆ. ಆಗ ಮಾತ್ರ ನಮ್ಮೊಳಗಿನ ಮಾನವೀಯತೆಗೊಂದು ಅರ್ಥ ದೊರಕಬಹುದು. ಅದೆಷ್ಟು ಹಸಿವನ್ನು ತಣ್ಣಗಾಗಿಸಿದ ಭಾಗ್ಯವೂ ನಮ್ಮನ್ನು ಸಂತುಷ್ಟವಾಗಿಸಬಹುದು.

ಈ ಮಾನವೀಯತೆಯ ಮೆರೆಯಲು ನಾವು ಸಿದ್ಧರಾಗಬೇಕು. ಹಸಿವು ಮತ್ತು ಜಗತ್ತನ್ನು ರೂಪಿಸಲು ನಾವು ಬದ್ಧರಾಗಬೇಕು.

❋❋❋

## ಕವನ ಸಂಕಲನ

✍ : ವಿಕಾಸ್ ವಿ. ಪೂಜಾರಿ
I PUC SEBA

**ಭಾ**ರತಾಂಬೆಯ ಮಡಿಲಲ್ಲಿ ಆಯಿತು ನನ್ನ 'ಜನನ'
ಮಾಡುವೆ ಆ ಮಾತೆಗೆ ನಾ ಕೋಟಿ 'ನಮನ'

ಜನ್ಮದಾತೆಯ ಮೇಲೊಂದು ಬರೆಯುವೆ ನಾ 'ಕವನ'
ತ್ರಿವರ್ಣದ ಧ್ವಜವ ಹಾರಿಸುವೆ ನಾ 'ಗಗನ'

ಈ ಮಣ್ಣಲ್ಲಿ ಹುಟ್ಟಿದರು ಸಂತ 'ಶರಣ'
ಬೆಳಗಿದರು ನಾಡೆಲ್ಲ ಜ್ಞಾನದಾ 'ಕಿರಣ'

ಈ ಮಣ್ಣಿಗಾಗಿ ಮಡಿದರು ಕ್ರಾಂತಿಕಾರಿ 'ಮರಣ'
ಮಾಡಬೇಕು ನಾವೆಲ್ಲ ಸದಾ ಅವರ 'ಸ್ಮರಣ'

ಅರ್ಪಿಸೋಣ ನಾವೆಲ್ಲ ಭಾರತ ಮಾತೆಗೆ 'ತನುಮನ'
ಪ್ರೀತಿ ಸ್ನೇಹದಿಂದ ನಾವು ಎಂದಿಗೂ ಒಟ್ಟಿಗೆ 'ಬಾಳೋಣ'

ನಮ್ಮ ಕಣ್ಣು ಚೆನ್ನಾಗಿದ್ದರೆ
ಇಡೀ ಜಗತ್ತು ನಮಗೆ ಚೆನ್ನಾಗಿ ಕಾಣುತ್ತದೆ.
ಆದರೆ ಅದೇ ನಮ್ಮ ನಾಲಗೆ ಚೆನ್ನಾಗಿದ್ದರೆ
ಇಡೀ ಜಗತ್ತಿಗೆ ನಾವು ಚೆನ್ನಾಗಿ ಕಾಣುತ್ತೇವೆ.

❋❋❋

# ಗುರಿ ಸಾಧನೆಗೆ ನಾಲ್ಕು ವಾಕ್ಯಗಳು

✍ : ಮಾನಸ ಕೆ. ಓ., I PUC

**“ನಾ**ವು ವಿಶ್ವದ ಕಾಡುಗಳಿಗೆ ಏನು ಮಾಡುತ್ತಿದ್ದೇವೆಂದರೆ, ನಾವು ನಮಗಾಗಿ ಮತ್ತು ಒಬ್ಬರಿಗೊಬ್ಬರು ಏನು ಮಾಡುತ್ತಿದ್ದೇವೆ ಎಂಬುದರ ಪ್ರತಿಬಿಂಬವಾಗಿದೆ.”

ಇವತ್ತಿನ ದಿನ ನಿಮ್ಮ ಪಾಲಿಗೆ ಅತ್ಯಂತ ಸವಾಲುದಾಯಕವಾಗಿದ್ದರೆ ಏನೂ ವ್ಯತ್ಯಾಸವಾಗಲ್ಲ. ಆದರೆ ನೀವು ಸವಾಲುಗಳೊಡನೆ ಹೋರಾಡದೆ ಸುಲಭವಾಗಿ ಸೋತರೆ ಖಂಡಿತ ವ್ಯತ್ಯಾಸವಾಗುತ್ತದೆ.

ನೀವೊಬ್ಬ ಕಾಲೇಜನ್ನು ಬಿಟ್ಟರೆ ವ್ಯತ್ಯಾಸವಾಗುವುದಿಲ್ಲ. ಆದರೆ ನೀವು ಕಾಲೇಜನ್ನು ಬಿಟ್ಟು ಟೈಮ್ ಪಾಸ್ ಮಾಡುತ್ತಿದ್ದರೆ, ನಿಮ್ಮ ಅಮೂಲ್ಯ ಸಮಯವನ್ನು ಹರಟೆಹೊಡೆಯುವುದರಲ್ಲಿ ಕಳೆಯುತ್ತಿದ್ದರೆ ಖಂಡಿತ ವ್ಯತ್ಯಾಸವಾಗುತ್ತದೆ.

ನಮ್ಮ ಹೆಜ್ಜೆಗೆ ಹೆಗಲು ಕೊಡಲು ನಿಮ್ಮ ಜೊತೆ ಯಾರು ಇಲ್ಲದಿದ್ದರೆ ಏನೂ ವ್ಯತ್ಯಾಸವಾಗುವುದಿಲ್ಲ. ಆದರೆ ನಾವೇ ಕೆಲಸ ಮಾಡದೆ ನಮ್ಮ ಕನಸುಗಳಿಗೆ ಹೆಗಲು ಕೊಡದಿದ್ದರೆ ಖಂಡಿತ ವ್ಯತ್ಯಾಸವಾಗುತ್ತದೆ.

ಸಾಧನೆಗಿಂತ ಸೂಕ್ತವಾದ ಸೇಡಿಲ್ಲ.

ಇವತ್ತಿನ ದಿನ ವಾತಾವರಣ ಸರಿಯಿಲ್ಲದಿದ್ದರೆ, ಪ್ರಕೃತಿ ನಮ್ಮನ್ನು ಪರೀಕ್ಷಿಸುತ್ತಿದ್ದರೆ ಏನೂ ವ್ಯತ್ಯಾಸವಾಗುವುದಿಲ್ಲ. ಆದರೆ ನಾವು ಇದನ್ನೇ ನೆಪ ಮಾಡಿಕೊಂಡು ಕೆಲಸ ಮಾಡದೇ ಮನೆಯಲ್ಲಿ ಮಲಗಿ ಸೋಂಬೇರಿಗಳಾದರೆ ಖಂಡಿತ ವ್ಯತ್ಯಾಸವಾಗುತ್ತದೆ.

# ತಂದೆಯೇ ಮಗುವಿಗೆ ರೋಲ್ ಮಾಡೆಲ್

**ಮ**ಕ್ಕಳು ಮಾತನಾಡಲು ನಡೆದಾಡಲು ತೊಡಗುತ್ತಿದ್ದಂತೆ ತನ್ನ ತಂದೆ, ತಾಯಿಯಿಂದ ಕಲಿತುಕೊಳ್ಳಲು ಪ್ರತಿಯೊಂದು ವಿಷಯವೂ ಮುಂದಿನ ಜೀವನಕ್ಕೆ ಭದ್ರ ಬುನಾದಿಯಾಗುತ್ತದೆ. ಸಾಮಾನ್ಯವಾಗಿ ಕಿರಿಯ ಪ್ರಾಥಮಿಕ ತರಗತಿಯ ವರೆಗೂ ತಾಯಿಯಿಂದ ಕಲಿತುಕೊಳ್ಳುವ ವಿಷಯಗಳಿಗೆ ಹೆಚ್ಚು ಮಹತ್ವವಿದ್ದರೆ ಐದನೆಯ ತರಗತಿಯ ಬಳಿಕ ತಂದೆಯಿಂದ ಕಲಿತುಕೊಳ್ಳುವ ವಿಷಯಗಳೇ ಮುಂದೆ ಆ ಮಗುವಿನ ಸಾಮಾಜಿಕ ಬೆಳವಣಿಗೆಗೆ ಭದ್ರ ಬುನಾದಿಯಾಗುತ್ತದೆ. ಎಲ್ಲಾ ಮಕ್ಕಳು ತನ್ನ ತಂದೆಯೇ ಮೊದಲ ಹೀರೋ ಎಂದು ಹೇಳಿಕೊಳ್ಳುತ್ತಾರೆ. ತಂದೆಯೇ ಮಕ್ಕಳಿಗೆ ಧೈರ್ಯ, ಶ್ರಮದ ಪ್ರತೀಕ.

ಯಾವ ತಂದೆಯು ಒಳ್ಳೆಯ ಹಾದಿಯಲ್ಲಿ ನಡೆಯುತ್ತಾನೋ, ಮಗುವೂ ಸಹ ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡು ಒಳ್ಳೆಯ ಹಾದಿಯಲ್ಲಿಯೇ ನಡೆದು ಮುಂದೆ ದೊಡ್ಡ ಸಾಧನೆ ಮಾಡುತ್ತದೆ.

# ಹೀಗಿರಬೇಕು ನಮ್ಮ ಜೀವನಶೈಲಿ

**ಅ**ಲೋಪತಿಗೆ 200 ವರ್ಷಗಳ ಇತಿಹಾಸವಿದ್ದರೆ ಆಯುರ್ವೇದ, ಯುನಾನಿ, ಸಿದ್ಧ, ಹೋಮಿಯೋಪತಿಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪ್ರಸ್ತುತ ಯೋಗಕ್ಕೆ ಹೆಚ್ಚು ಮಹತ್ವ ಬಂದಿದೆ.

ಪ್ರತಿನಿತ್ಯ ಆರೋಗ್ಯವಂತ ವ್ಯಕ್ತಿಗೆ 8 ತಾಸು ನಿದ್ದೆ ಅವಶ್ಯಕ. ಅದೇ ಮಕ್ಕಳಿಗೆ 8 ತಾಸು ನಿದ್ದೆ ಅನಿವಾರ್ಯ. ನಿದ್ರಾ ಸಮಯ ರಾತ್ರಿ 10.00ರಿಂದ ಬೆಳಗ್ಗೆ 4.00ರ ವರೆಗೆ ಶುಭಕರವಾದದ್ದು. ನಿದ್ದೆಯಿಂದ ಎದ್ದ ತಕ್ಷಣ ಪಾದದ ಮೇಲೆ ಕುಳಿತು ಅರ್ಧ ಲೀಟರ್‌ನಿಂದ ಒಂದು ಲೀಟರ್ ವರೆಗೆ ಉಗುರು ಬೆಚ್ಚಗಿನ ನೀರು ಕುಡಿಯಬೇಕು. ಬೆಳಗ್ಗೆ 5ರಿಂದ 6ರ ವರೆಗೆ ಯೋಗ ಪ್ರಾಣಾಯಾಮ ಮಾಡುವ ಅಭ್ಯಾಸ ಒಳ್ಳೆಯದು. ಏಕೆಂದರೆ ಆ ಸಮಯ ಬ್ರಾಹ್ಮೀ ಮುಹೂರ್ತವಾಗಿದ್ದು ವಾತಾವರಣದಲ್ಲಿ ಆಮ್ಲಜನಕ ಹೆಚ್ಚಾಗಿರುತ್ತದೆ. ಯೋಗಾಭ್ಯಾಸದ ನಂತರ ಕನಿಷ್ಠ ಅರ್ಧ ತಾಸು ಬಿಟ್ಟು ಸ್ನಾನ ಮತ್ತು ಆಹಾರ ಸೇವಿಸಬಹುದು. ನಮ್ಮ ಆಹಾರದ ಸಮಯ– ಬೆಳಗ್ಗಿನ ಉಪಾಹಾರದ ಸಮಯ 8ರಿಂದ 9ಗಂಟೆಯಾಗಿರಲಿ, ಮಧ್ಯಾಹ್ನದ ಊಟ 12ರಿಂದ 2ಗಂಟೆಯೊಳಗಿರಲಿ ಮತ್ತು ರಾತ್ರಿ ಆಹಾರ 6ರಿಂದ 8ಗಂಟೆಯೊಳಗಿರಲಿ. ರಾತ್ರಿ ಆಹಾರ ಎಷ್ಟು ಬೇಗ ಸೇವಿಸುತ್ತೇವೋ, ಅಷ್ಟು ಒಳ್ಳೆಯದು. ಆಹಾರಕ್ಕಿಂತ ಅರ್ಧ ತಾಸು ಮುಂಚೆ ಮತ್ತು ಆಹಾರ ಸೇವನೆಯಾದ 1ತಾಸಿನ ನಂತರ ನೀರು ಸೇವಿಸಬೇಕು. ಪ್ರತಿನಿತ್ಯ 2.5ರಿಂದ 3ಲೀಟರ್ ನೀರು ಕುಡಿಯುವುದು ಆರೋಗ್ಯಕ್ಕೆ ಉತ್ತಮ.

❊❊❊



# ಮಕ್ಕಳೇ ಮನೆಯ ಮಾಣಿಕ್ಯ, ಮಕ್ಕಳೇ ದೇಶದ ಸಂಪತ್ತು

✍: **ಶ್ರೀಹಿತಾ,** I PUC SEBA

**ಸಾ**ಮಾನ್ಯವಾಗಿ ಮಕ್ಕಳ ದಿನಾಚರಣೆ ಎಂದಾಕ್ಷಣ ನೆನಪಾಗುವುದು ನಮ್ಮ ಶಾಲೆ, ಆಟ–ಪಾಠ, ಶಾಲೆಯಲ್ಲಿ ಮಾಡಿದ ಗಲಾಟೆ, ಪಡೆದ ಬಹುಮಾನ, ಸಿಹಿತಿಂಡಿ ಹಾಗೂ ನಮ್ಮ ನೆಚ್ಚಿನ ಚಾಚಾ ನೆಹರು!

ಇವೆಲ್ಲಾ ನೆನಪುಗಳು ಶಾಲೆಗೆ ಹೋಗುವ ಮಕ್ಕಳಲ್ಲಿ ಕಾಣಬಹುದು. ಆದರೆ ಶಾಲೆಗೆ ಹೋಗದ, ಮಧ್ಯದಲ್ಲಿ ಶಾಲೆ ಬಿಟ್ಟ, ಬೀದಿಮಕ್ಕಳ, ಬಾಲಕಾರ್ಮಿಕರ, ಅಪಾಯದ ಅಂಚಿನಲ್ಲಿರುವ ಮಕ್ಕಳ ದಿನಾಚರಣೆಗಳನ್ನು ಮಾಡುವವರು ಯಾರು? ಅವರ ಹಕ್ಕುಗಳಿಗೆ ರಕ್ಷಣೆ ನೀಡಿ, ಅವರನ್ನು ಸಹ ಇತರ ಸಹಪಾಠಿ ಮಕ್ಕಳ ಹಾಗೆ ಜೀವನ ಕಳೆಯುವಂತೆ ಮಾಡುವ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಯಾರದ್ದು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾದ ಸಂದರ್ಭ ಬಂದಿದೆ.

ಮಕ್ಕಳ ಮೇಲೆ ದಿವಂಗತಪಂಡಿತ್ ಜವಾಹರಲಾಲ ನೆಹರೂರವರಿಗೆ ಇದ್ದ ಅತೀವ ಕಾಳಜಿ ಮತ್ತು ಪ್ರೀತಿ, ಮಕ್ಕಳ ಹಕ್ಕುಗಳ ಮತ್ತು ಶಿಕ್ಷಣದ ಬಗ್ಗೆ ಅರಿವನ್ನು ಮೂಡಿಸುವ ಉದ್ದೇಶದಿಂದ ನೆಹರು ಜನ್ಮದಿನವಾದ ನವೆಂಬರ್ 14 ಮಕ್ಕಳ ದಿನಾಚರಣೆಯನ್ನು ಶಾಲೆಯಲ್ಲಿ ಆಚರಿಸುವುದಕ್ಕೆ ಹೆಚ್ಚಿನ ಒತ್ತು ನೀಡಿರುವುದನ್ನು ನೋಡಿದ್ದೇವೆ. ಆದರೆ ಅದರ ವಿಶಾಲತೆಯನ್ನು ಗಮನಿಸಿದಾಗ ಇದಕ್ಕೆ ಇರುವ ಪ್ರಾಮುಖ್ಯತೆಯೇ ಬೇರೆ.

ಭಾರತ ಸಂವಿಧಾನವು ಎಲ್ಲಾ ಮಕ್ಕಳ ಮೂಲಭೂತ ಹಕ್ಕುಗಳನ್ನು ಮತ್ತು ಅಗತ್ಯಗಳನ್ನು ರಕ್ಷಿಸುವ ಪ್ರಾಥಮಿಕ ಜವಾಬ್ದಾರಿಯನ್ನು ರಾಜ್ಯ ಸರ್ಕಾರಕ್ಕೆ ವಿಧಿಸಿದೆ. ಅವುಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ, ಮಕ್ಕಳಿಗೆ ಅನ್ವಯಿಸುವ ಕಾರ್ಮಿಕ ಕಾನೂನುಗಳ ಕಾಯ್ದೆ, ಬಾಲಕಾರ್ಮಿಕರ ನಿಯಂತ್ರಣ ಮತ್ತು ನಿಷೇಧ ಕಾಯ್ದೆ, ಮಕ್ಕಳ ಆರೈಕೆ ಮತ್ತು ರಕ್ಷಣೆಗೆ ಸಂಬಂಧಿಸಿದ ಜುವೆನೈಲ್ ಜಸ್ಟಿಸ್ ಆಕ್ಟ್ ಮತ್ತು ಭಾರತ ದಂಡ ಸಂಹಿತೆಯಲ್ಲಿ ಮಕ್ಕಳಿಗೆ ಅನ್ವಯಿಸುವ ಕಾನೂನುಗಳು ಪ್ರಮುಖವಾದವುಗಳು. ಇವುಗಳ ಜೊತೆಗೆ ಮಕ್ಕಳ ಹಕ್ಕುಗಳ ಕಾಯ್ದೆಯನ್ನು ರಕ್ಷಿಸಲು ಆಯೋಗವನ್ನು ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಚಿಸಿದ್ದು, ಅದಕ್ಕೆ ನಿರ್ದಿಷ್ಟ ಕಾರ್ಯ ಮತ್ತು ಅಧಿಕಾರಗಳನ್ನು ಸೂಚಿಸಿದೆ. ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಹಲವಾರು ಮಕ್ಕಳ ಕೇಂದ್ರಿತ ಸೀಮೆಗಳನ್ನು ಅನುಷ್ಠಾನಗೊಳಿಸಿದೆ.

❋❋❋

# ಬದಲಾವಣೆ

✍ : **ಗೌತಮಿ,** I B2 BASCs

**ಬ**ದಲಾವಣೆ ಬದಲಾವಣೆ ಬದಲಾವಣೆ

ಬದಲಾಗದ ಪದ ಬದಲಾವಣೆ

ಯಾವುದೇ ವಿಷಯ ಪರಿಪೂರ್ಣತೆಯನ್ನು ಹೊಂದುವವರೆಗೆ ಅದು ಬದಲಾಗುತ್ತಾ ಇರುತ್ತದೆ. ಬದಲಾವಣೆ ಕೇವಲ ದೊಡ್ಡ ಅಥವಾ ಮಹತ್ವದ ವಿಷಯಗಳಲ್ಲಿ ಮಾತ್ರವಲ್ಲ, ಸಾಮಾನ್ಯವಾಗಿ ಎಲ್ಲಾ ಚಟುವಟಿಕೆಗಳಲ್ಲಿ ನಾವು ಅದನ್ನು ಕಾಣುತ್ತೇವೆ.

ಕೆಲವೊಂದು ಬಾರಿ ಮನುಷ್ಯರು ಎಲ್ಲಾ ತರಹದ ಬದಲಾವಣೆಗೆ ಒಪ್ಪಿಕೊಳ್ಳುವುದಿಲ್ಲ. ಉದಾ: ಒಬ್ಬ ವ್ಯಕ್ತಿ ಆತನ ದಿನನಿತ್ಯದ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳಬಹುದು ಆದರೆ ಅಭಿರುಚಿ ಆಸಕ್ತಿಗಳಲ್ಲಿ ಬದಲಾವಣೆ ಕಷ್ಟ ಸಾಧ್ಯ. ಕೆಲವೊಂದು ಬದಲಾವಣೆ ಮನುಷ್ಯನ ಜೀವನ ಏಳಿಗೆಗೆ ಕಾರಣವಾದರೆ, ಕೆಲ ಬದಲಾವಣೆ ಆತನ ವಿನಾಶಕ್ಕೆ ಕಾರಣವಾಗುತ್ತದೆ. **"**ಮನುಷ್ಯರು ಎಂದೆಂದೂ ಬದಲಾಗದ ಹಾಗೆ ಇದ್ದಾರೆ ಎಂದಾದರೆ ಅವನೊಳಗೆಲ್ಲೋ ಏನೋ ತಪ್ಪಿದೆ ಎಂದರ್ಥ**"** ಎಂದು ಕ್ಲಿಂಟ್ ಈಸ್ಟ್‌ವುಡ್ ಎಂಬ ನಟ ಹೇಳುತ್ತಾನೆ. ನಾವು ಏನಾದರೂ ಒಂದು ಕೆಲಸ ಮಾಡಿದರೆ ಎಲ್ಲರೂ ಕೇಳುವ ಪ್ರಶ್ನೆ **"**Is something change" ಅದರ ಅರ್ಥ ನಾವು ಮಾಡಿದ ಕೆಲಸ ವಿಭಿನ್ನವಾಗಿದೆ ಅಂತಲ್ಲ. ಜಗತ್ತು ನಮ್ಮಿಂದ ವಿಭಿನ್ನತೆ ಬಯಸುತ್ತದೆ ಅಂತ. ಬದಲಾವಣೆ ಆಗಬೇಕಾದರೆ ನಾವು ಬೇರೆಯವರ ಮುಲಾಜಿಗೆ ಬೀಳದೆ ನಮ್ಮಿಂದ ಆದಷ್ಟು ಬದಲಾಯಿಸೋಣ. ಅದಕ್ಕೆ ವಿವೇಕಾನಂದರು ಒಂದು ಮಾತು ಹೇಳಿದ್ದಾರೆ, **"**All power is within you. You can do anything and everything" ಬದಲಾವಣೆಯ ಕುರಿತು ಯೋಚಿಸುವಾಗ ಸ್ವಲ್ಪ ಎಚ್ಚರವಿರಲಿ. ಏಕೆಂದರೆ, ನಿಮ್ಮ ಆಲೋಚನೆಗಳೇ ನಿಮ್ಮನ್ನು ರೂಪಿಸುತ್ತವೆ. ಆದ್ದರಿಂದ ಯೋಚಿಸುವಾಗ ಸ್ವಲ್ಪ ಎಚ್ಚರವಿರಲಿ.

ಒಂದು ದೇಶದ ಅಭಿವೃದ್ಧಿ ಆ ದೇಶದ ರಾಜ್ಯಗಳಿಂದ, ಒಂದು ರಾಜ್ಯದ ಅಭಿವೃದ್ಧಿ ಆ ರಾಜ್ಯದ ಜಿಲ್ಲೆಗಳಿಂದ, ಒಂದು ಜಿಲ್ಲೆಯ ಅಭಿವೃದ್ಧಿ ಆ ಜಿಲ್ಲೆಯ ತಾಲೂಕುಗಳಿಂದ, ಒಂದು ತಾಲೂಕಿನ ಅಭಿವೃದ್ಧಿ ಆ ತಾಲೂಕಿನ ಗ್ರಾಮಗಳಿಂದ, ಒಂದು ಗ್ರಾಮದ ಅಭಿವೃದ್ಧಿ ಆ ಗ್ರಾಮದಲ್ಲಿರುವ ಕುಟುಂಬಗಳಿಂದ, ಒಂದು ಕುಟುಂಬದ ಅಭಿವೃದ್ಧಿ ಆ ಕುಟುಂಬದ ವ್ಯಕ್ತಿಗಳಿಂದ ಮತ್ತು ಆ ವ್ಯಕ್ತಿಯ ಅಭಿವೃದ್ಧಿ ಆತನ ಬದಲಾವಣೆಯಿಂದ.

ನಾವು ಬೇರೆಯವರಿಂದ ಬದಲಾವಣೆಯನ್ನು ಬಯಸುವುದಕ್ಕಿಂತ ನಮ್ಮಲ್ಲಿ ಇರುವ ವಿಷಯಗಳ ಬದಲಾವಣೆ ಮಾಡೋಣ. ನಮ್ಮ ಆಲೋಚನೆಗಳಲ್ಲಿ ಇರುವ ಕೆಲವೊಂದು ತಪ್ಪುಗಳನ್ನು ತಿದ್ದಿಕೊಳ್ಳೋಣ. ನಮ್ಮ ಬದಲಾವಣೆಗಳು ಅಭಿವೃದ್ಧಿ ಪಥವನ್ನು ಹಿಡಿಯಲಿ.

ಈಗಾಗಲೇ ಆಗಿರುವ ಬದಲಾವಣೆಗಳನ್ನು ಒಪ್ಪಿಕೊಳ್ಳೋಣ, ನಮ್ಮಿಂದಾದ ಬದಲಾವಣೆಯನ್ನು ಅನುಸರಿಸೋಣ, ನಮ್ಮಿಂದಾಗಬೇಕಾದ ಬದಲಾವಣೆಯನ್ನು ಮಾಡೋಣ. ಆಗದ ಬದಲಾವಣೆಗಳನ್ನು ಪ್ರಯತ್ನಿಸೋಣ. ಏನೇ ಆಗಲಿ, ಬದಲಾವಣೆ ಆಗುತ್ತಿರಲಿ. ಆದರೆ ಅದು ಸಮಾಜಕ್ಕೆ ಅತವಾ ಪ್ರಪಂಚಕ್ಕೆ ಯಾವುದೇ ಹಾನಿ ಮಾಡದಿರಲಿ.

***

# ಸಂಗೀತ ಕಲಿಕೆಯ ಮಹತ್ವ

✍: ಪ್ರದೀಶ್
I B2 HEBA

**ಸಂ**ಗೀತವನ್ನು ಅಭ್ಯಾಸ ಮಾಡುವುದರಿಂದ ಏಕಾಗ್ರತೆ, ಗ್ರಹಣ ಶಕ್ತಿ, ಸ್ಮರಣ ಶಕ್ತಿ, ಚಿಂತನ ಶೀಲತೆ, ಸೃಜನ ಶೀಲತೆ ಹೆಚ್ಚುವುದರಿಂದ ಸಂಗೀತವನ್ನು ಅಭ್ಯಾಸ ಮಾಡುವವರ ಬುದ್ಧಿಶಕ್ತಿಯ ಮಟ್ಟವು ವೃದ್ಧಿಗೊಳ್ಳುತ್ತದೆ. ಶಿಸ್ತಿನಿಂದ ಅಭ್ಯಾಸ ಮಾಡಿದರೆ ಮಾತ್ರ ಸಿದ್ಧಿಸುವುದು. ಇದರಿಂದ ಸಂಗೀತ ವಿದ್ಯಾರ್ಥಿಗೆ ತನ್ನ ದಿನಚರಿಯಲ್ಲಿ ಶಿಸ್ತು ಏರ್ಪಾಡಾಗುತ್ತದೆ. ಕಾಠಿಣ್ಯವು ಕಡಿಮೆಯಾಗಿ, ಸಮಾಧಾನವು ಏರ್ಪಟ್ಟು ಸಂಸ್ಕಾರವಂತರಾಗಲು ಪೂರಕವಾಗುವುದು ಸಂಗೀತ.

ಇತರ ವಿಷಯಗಳನ್ನು ಅಭ್ಯಾಸ ಮಾಡುವಾಗ ಉಂಟಾಗುವ ಬೇಸರಿಕೆಯನ್ನು ತೊಲಗಿಸಲು ಹಾಗೂ ಮೆದುಳಿಗೆ ವಿಶ್ರಾಂತಿ ದೊರಕುವಂತೆ ಮಾಡಲು ಲಲಿತಕಲೆ ಸಹಕರಿಸುವುದರಿಂದ ಸಂಗೀತಕ್ಕೆ ಹೆಚ್ಚಿನ ಆದ್ಯತೆ ಇದೆ. ಸಂಗೀತವನ್ನು ಯಾವ ಕಾಲಕ್ಕೂ, ಯಾವ ದೇಶದಲ್ಲಿಯೂ, ಯಾವ ವಯಸ್ಸಿನಲ್ಲಿಯೂ ಹಾಡಿಕೊಳ್ಳಲು ಅಥವಾ ನುಡಿಸಿಕೊಳ್ಳಲು ಅನುಕೂಲವಾಗುವುದರಿಂದ ಲಲಿತ ಕಲೆಗಳಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಸಂಗೀತವು ಮಾನವನನ್ನು ಮಾನವತ್ವದಿಂದ ಅಮರತ್ವಕ್ಕೆ ಕೊಂಡೊಯ್ಯುವ ಸುನಾದದಿಂದ ಕೂಡಿದ ಮಧುರವಾದ ಲಲಿತ ಕಲೆಯಾಗಿದೆ. ಈ ಹಿರಿಮೆ ಸಂಗೀತದ್ದಾಗಿದೆ.

***

# ಗುರುಗಳಿಗೆ

✍ ಶ್ರೀನಿಧಿ ಶೆಟ್ಟಿ, I PUC

**ನಾ** ಬಲ್ಲೆ ಎಲ್ಲರೂ ನ್ಯಾಯಪರವಲ್ಲ
ಎಲ್ಲರೂ ಸತ್ಯವಂತರಲ್ಲ ಎಂಬುದನು
ಆದರೆ ಪ್ರತಿಯೊಬ್ಬ ಮುಠ್ಠಾಳನಿಗೂ ಪ್ರತಿಯಾಗಿ
ಒಬ್ಬ ಧೀರೋದಾತ್ತ
ಪ್ರತಿಯೊಬ್ಬ ಸ್ವಾರ್ಥಿ ರಾಜಕಾರಣಿಗೆ ಬದಲು
ಒಬ್ಬ ನಿಷ್ಠಾವಂತ ನಾಯಕ
ಪ್ರತಿಯೊಬ್ಬ ಶತ್ರುವಿಗೆ ಬದಲು
ಒಬ್ಬ ಸನ್ಮಿತ್ರನಿರುವನೆಂಬುದನು ಕಲಿಸಿ.

ನಿಮಗೆ ಸಾಧ್ಯವಾದರೆ ಕಲಿಸಿ
ಗಳಿಸಿದ ಒಂದು ಡಾಲರು
ಸಿಕ್ಕ ಐದಕ್ಕಿಂತ ಹೆಚ್ಚ ಬೆಲೆಯುಳ್ಳದೆಂಬುದನು
ಕಲಿಸು ಸೋಲುವುದನು
ಮತ್ತೆ ಗೆಲುವಿನಲಿ ಹರ್ಷಿಸುವುದನು.
ಪುಸ್ತಕಗಳ ಅದ್ಭುತಗಳನ್ನು ಅವನಿಗೆ ಕಲಿಸಿ
ಆದರೆ ಆಕಾಶದ ಹಕ್ಕಿಗಳು
ಹಾರಾಡುವ ದುಂಬಿಗಳನ್ನು ಮತ್ತು
ಹಸಿರು ಮಲೆಯ ಹೂಗಳನ್ನು ಕುರಿತು
ಧ್ಯಾನಿಸಲು ಅವನಿಗೆ ಬಿಡುವು ಮಾಡಿಕೊಂಡು.

ಶಾಲೆಯಲಿ ವಂಚಿಸುವುದಕ್ಕಿಂತ
ಫೇಲಾಗುವುದು ಹೆಚ್ಚು ಗೌರವವೆಂಬುದನು ಕಲಿಸಿ
ಎಲ್ಲರೂ ತಪ್ಪೆಂದಾಗ ತನ್ನ ವಿಚಾರಗಳಲ್ಲಿ ಅವನು ನಂಬಿಕೆ
ಉಳಿಸಿಕೊಳ್ಳಲು ಕಲಿಸಿ
ಕಲಿಸಿ ಜಾತಿಧರ್ಮಗಳಿಗಿಂತ ದೇಶಪ್ರೇಮ ದೊಡ್ಡದೆಂದು
ನಯದ ಜನರಲಿ ವಿನಯದಿ
ಒರಟರಲಿ ಒರಟುತನದಿ ನಡೆವುದನು ಕಲಿಸಿ.

***

# ಮಾವಿನ ಕಾಯಿ ಮತ್ತು ಹಣ್ಣುಗಳ ಅದ್ಭುತ ಔಷಧೀಯ ಗುಣಗಳು

✍: ಸುಜಿತ್ ಎಚ್.
I B2 HEBA

ಇದು ಬೇಸಿಗೆ ಕಾಲ. ಬೇಸಿಗೆ ಕಾಲ ದ್ವೇಷ ಮಾಡಲು ಹಲವು ಕಾರಣಗಳಿವೆ. ಆದರೆ ಇಷ್ಟು ಪಡಲು ಇರುವುದು ಒಂದೇ ಕಾರಣ ಅದು ಮಾವಿನ ಹಣ್ಣು. ಬೇಸಿಗೆಯಲ್ಲಿ ಮಾತ್ರ ಸಿಗುವಂತಹ ರುಚಿಯಾದ ಮಾವಿನ ಹಣ್ಣುಗಳು ಚಿಕ್ಕ ಮಕ್ಕಳಿಂದ ದೊಡ್ಡವರವರೆಗೂ ಎಲ್ಲರಿಗೂ ಬಲು ಪ್ರಿಯ. ಇಂತಹ ಮಾವಿನ ಅದ್ಭುತ ಆರೋಗ್ಯ ಔಷಧಿ ಗುಣಗಳ ಬಗ್ಗೆ ಇಂದು ಸವಿವರವಾಗಿ ತಿಳಿಯೋಣ.

ಮಾವಿನ ಔಷಧಿ ಉಪಯೋಗಿ ಭಾಗಗಳೆಂದರೆ ಕಾಯಿ, ಹಣ್ಣು ಕಾಂಡದ ಚೆಕ್ಕೆ, ಓಟೆ, ಎಲೆ ಮತ್ತು ಹೂಗಳು.

ಮಾವಿನ ಹಣ್ಣನ್ನು ಇಡಿಯಾಗಿ ತಿಂದು ನಂತರ ಒಂದು ಲೋಟ ಹಾಲು ಕುಡಿದರೆ ಅದು ಉತ್ತಮ ಮೇಧ ರಾಸಾಯನವಾಗಿ ಕೆಲಸ ಮಾಡುತ್ತದೆ. ಎಂದರೆ ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಮಾವಿನ ಹಣ್ಣನ್ನು ಜೇನಿನ ಜೊತೆಗೆ ಸೇವಿಸಿದರೆ ಅದು ಹೃದಯಕ್ಕೆ ಒಳ್ಳೆಯದು. ಎಳೆಯ ಮಾವಿನ ಕಾಯಿಯನ್ನು ಸೇವಿಸಿದರೆ ಹಸಿವು ಹೆಚ್ಚುತ್ತದೆ. ಮತ್ತು ರಕ್ತದ ಉತ್ಪತ್ತಿಗೆ ಸಹಕರಿಸುತ್ತದೆ. ಮಾವಿನ ಚೆಕ್ಕೆಯನ್ನು ಮೇಲೆ ಕೆರೆದು ತೆಗೆದು ಅದರ ಮೇಲೆ ಕೆಂಪು ಮಣ್ಣು ಹಚ್ಚಿರುವ ಬಟ್ಟೆಯನ್ನು ಸುತ್ತಬೇಕು. ನಂತರ ಅದನ್ನು ಬೆಂಕಿಯ ಮೇಲೆ ಬಿಸಿ ಮಾಡಬೇಕು. ನಂತರ ಹೊಟ್ಟೆಯ ಒಳಗಿರುವ ಚೆಕ್ಕೆಯನ್ನು ತೆಗೆದು ವೆಕ್ಕೆಯ ರಸ (ನಾಲ್ಕು ಅಥವಾ ಆರು ಚಮಚ) ಸಮಪ್ರಮಾಣದ ಎಳ್ಳೆಣ್ಣೆ ಬೆರೆಸಬೇಕು. ಇದನ್ನು ಬೆಳಗ್ಗೆ ಮತ್ತು ರಾತ್ರಿ ಅರ್ಧ ಪ್ರಮಾಣದಲ್ಲಿ ಸೇವಿಸಬೇಕು. ಇದು ರಕ್ತ ಮಿಶ್ರಿತ ಬೇಧಿ ಹಾಗೂ ಮಾಂಸ ಮಿಶ್ರಿತ ಬೇಧಿಗೆ ಒಳ್ಳೆಯ ಮದ್ದು. ಹಾಗೆಯೇ ಮೂಲವ್ಯಾಧಿಗೆ ಹಿತಕರ. ಮಾವಿನ ಮರದ ಒಳಗಿನ ತೊಗಟೆಯನ್ನು ಅಕ್ಕಿ ತೊಳೆದ ನೀರಿನಲ್ಲಿ ಕರಿದು ಕುಡಿದರೆ ಜ್ವರದಿಂದ ಕೂಡಿದ ಬೇಧಿ ನಿಲ್ಲುತ್ತದೆ. ಮಾವಿನ ಚಿಗುರು ಮತ್ತು ನೇರಳೆ ಚಿಗುರನ್ನು ಸಮಭಾಗ ಸೇರಿಸಿ ಅದರ ರಸವನ್ನು ಹಾಲು ಸಕ್ಕರೆಯ ಜೊತೆ ನಾಲ್ಕರಿಂದ ಆರು ವಾರಗಳವರೆಗೆ ಸೇವಿಸಿದರೆ ಮೂಲವ್ಯಾಧಿ ಮೊಳಕೆ ಗುಣವಾಗುತ್ತದೆ. ಮಾವಿನ ಮರದ ಎಲೆಯಲ್ಲಿ ಕಷಾಯದ ರಸವಿದೆ. ಇದರಿಂದ ಹಲ್ಲು ತಿಕ್ಕಿದರೆ ಶುಭ್ರವಾಗುತ್ತದೆ. ಮಾತ್ರವಲ್ಲ, ಹಲ್ಲು ಮತ್ತು ವಸಡುಗಳು ಗಟ್ಟಿಯಾಗುತ್ತವೆ. ಮಾವಿನ ಮರದ ತೊಗಟೆಯ ಕಷಾಯವನ್ನು ಆಮವಾತ ಸಮಸ್ಯೆಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಅರ್ಧಲೋಟದಷ್ಟು ಮಾವಿನ ಚೆಕ್ಕೆಯ ಕಷಾಯಕ್ಕೆ ಶೋಧಿಸಿದ ಸುರಾದ ತಿಳಿ ನೀರು ಸೇರಿಸಿ ಕುಡಿದರೆ ಹೊಟ್ಟೆ ನೋವು ಶಮನವಾಗುತ್ತದೆ. ಮಾವಿನ ಎಲೆಯ ಕಷಾಯ ಮಾಡಿ, ತಣಿಸಿ, ಅದಕ್ಕೆ ಜೇನು ಸೇರಿಸಿ ಕುಡಿದರೆ ಕೆಮ್ಮು ಕಡಿಮೆಯಾಗುತ್ತದೆ. ಸ್ವರವು ಉತ್ತಮವಾಗುತ್ತದೆ.

ಅಡುಗೆಯಲ್ಲಿ ಮಾವಿನಕಾಯಿ ಬಳಸಿ ಚಟ್ನಿ ಮಾಡುವ ವಿಧಾನ, ಚಿಕ್ಕದಾಗಿ ಹೆಚ್ಚಿಕೊಂಡ ಮಾವಿನ ಕಾಯಿಯನ್ನು ಕಾಯಿತುರಿ, ಹಸಿಮೆಣಸು, ಉಪ್ಪು, ಇವುಗಳೊಂದಿಗೆ ಹದವಾಗಿ ರುಬ್ಬಿಕೊಳ್ಳಿ. ತೆಂಗಿನ ಎಣ್ಣೆ, ಕರಿಬೇವು, ಸಾಸಿವೆ, ಉದ್ದಿನಬೇಳೆ ಹಾಗೂ ಕೆಂಪು ಮೆಣಸಿನ ಎರಡು ಮೂರು ಚೂರುಗಳನ್ನು ಸೇರಿಸಿ ಒಗ್ಗರಣೆ ಹಾಕಿ, ಈ ಚಟ್ನಿಯನ್ನು ಇಡ್ಲಿ, ದೋಸೆ ಜೊತೆಗೆ ಅಥವಾ ಊಟದಲ್ಲಿ ಬಳಸಬಹುದು. ಇದು ಹಸಿವು ಹಾಗೂ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ.

ಮಾವಿನ ಹಣ್ಣಿನ ಗೊಜ್ಜು: 2–3ಚೆನ್ನಾಗಿ ಕಳೆತ ಮಾವಿನ ಹಣ್ಣುಗಳನ್ನು ಕಿವುಚಿ ರಸ ತೆಗೆದಿಟ್ಟುಕೊಳ್ಳಿ. ಬೀಜಗಳ ಜೊತೆಗೆ ಈ ರಸವನ್ನು ಬೆರೆಸಿ. ನಂತರ ಒಗ್ಗರಣೆ ಕೊಡಿ. ಈ ಗೊಜ್ಜು ರುಚಿಕರ ಹಾಗೂ ಆರೋಗ್ಯಕರ.

***

# ನಗುವಿನಲ್ಲಿ ಇರುವ ಶಕ್ತಿ

✍ : ಸಂಗ್ರಹ: ಸಾನಿಯಾ
I Arts

**ನ**ಗುವೆನ್ನುವುದು ಮಾನವನಿಗೆ ಹುಟ್ಟಿನಿಂದಲೇ ಬಂದ ಒಂದು ಅದ್ಭುತವಾದ ಕಲೆ, ಮನುಷ್ಯ ನಗುವಂತೆ ಇತರ ಪ್ರಾಣಿ–ಪಕ್ಷಿಗಳಿಗೆ ನಗಲು ಸಾಧ್ಯವಿಲ್ಲ. ಹಾಗಾಗಿ ನಗು ಮಾನವರಿಗೆ ನಿಸರ್ಗದತ್ತವಾಗಿ ಸಿಕ್ಕಿದ ವರವೆಂದೆನ್ನಬಹುದು. ನಗು ಎಂದರೆ ದಂತ ಪ್ರದರ್ಶನವಲ್ಲ. ಅದು ಸಂತಸದ ಭಾವನೆಯನ್ನು ವ್ಯಕ್ತಪಡಿಸುವ ಮಾಧ್ಯಮ. ನಗು ಕೇವಲ ತುಟಿಯಂಚಿನ ನಗು ಆಗಬಾರದು. ಅದು ನಮ್ಮ ಹೃದಯದಿಂದ ಹೊಮ್ಮಿವ ಭಾವನೆಗಳ ಸಂಕೇತ ಆಗಬೇಕು. ನಗದವರು ಯಾರಿದ್ದಾರೆ ಹೇಳಿ? ಎಲ್ರೂ ನಗ್ತಾರೆ. ಯಾವಾಗ ನಗ್ತಾರೆ? ಅನ್ನುವ ಪ್ರಶ್ನೆ ನಮ್ಮನ್ನು ಕಾಡಬಹುದು. ಕೆಲವರು ದೇಶಾದರಿ ನಗುವನ್ನು ತೋರಿಕೆಗಾಗಿ ನಕ್ಕರೆ, ಗೇಲಿ ಮಾಡಿ ನಗುವುದು ಇನ್ನು ಕೆಲವರ ಹವ್ಯಾಸ. ಹೊಗಳಿದಾಗ, ಹೊಗಳಿಕೆಗೆ ಉಬ್ಬಿ ನಗುವ ಲಾಂಛನವನ್ನು ಪ್ರದರ್ಶಿಸುವವರಿಗೂ ಕೊರತೆಯಿಲ್ಲ. ಕೆಲವೊಮ್ಮೆ ನಾವು ನಮ್ಮ ಹಿತೈಷಿಗಳನ್ನು ಸಂತೋಷಪಡಿಸುವ ಸಲುವಾಗಿ ಮುಗುಳ್ನಕ್ಕು ನಗುವನ್ನು ಹೊರ ಸೂಸಬೇಕಾಗುತ್ತದೆ. ಇನ್ನು ಕೆಲವು ಸಲ ಅಪರಿಚಿತರನ್ನು ಪರಿಚಯ ಮಾಡಿಕೊಳ್ಳುವಲ್ಲಿ ನಗುವಿನ ನಟನೆ ವ್ಯಕ್ತಪಡಿಸಬೇಕಾಗುತ್ತದೆ.

ಕೆಲವರು ತಮಗೆ ಇನ್ನೊಬ್ಬರಿಂದ ಏನಾದರೂ ಸಹಾಯ ಬೇಕಿದ್ದರೆ ನಗುನಗುತ್ತಾ ಮಾತನಾಡಿ ಪೀಠಿಕೆ ಹಾಕುತ್ತಾರೆ. ಇನ್ನೊಬ್ಬರನ್ನು ಖುಷಿ ಪಡಿಸುತ್ತಾರೆ. ತನಗೆ ಬೇಕಾದ ಕೆಲಸವನ್ನು ಸುಲಭವಾಗಿ ಗಿಟ್ಟಿಕೊಳ್ಳುತ್ತಾರೆ ಹಾಗೂ ಸದಾ ಹಸನ್ಮುಖಿಗಳಾಗಿ ಇರುವುದರಿಂದ ಇನ್ನೊಬ್ಬರ ಸ್ನೇಹವನ್ನು ಸುಲಭದಲ್ಲಿ ಸಂಪಾದಿಸಬಹುದು. ನಗುವಿನ ಮೂಲಕ ಆಶಾವಾದಿ ತನ್ನ ಜೀವನದಲ್ಲಿ ಬಂದ ಕಷ್ಟಗಳನ್ನು ಮರೆಯುತ್ತಾನೆ. ಆದರೆ ನಿರಾಶಾವಾದಿಯು ತನ್ನೊಳಗಿನ ಚಿಂತೆಯ ಬೇಗೆಯಿಂದ ನಗುವುದನ್ನೇ ಮರೆತು ಬಿಡುತ್ತಾನೆ. ಜೀವನದಲ್ಲಿ ನಗುವಿಲ್ಲದಿದ್ದರೆ ಅದು ಬಂಜರು ಭೂಮಿಯಂತೆ, ನಗುವಿಲ್ಲದ ಮುಖ ಬಾಡಿ ಹೋದ ಹೂವಿನಂತೆ. ಆದ್ದರಿಂದ ನಗು ಮಾನವನ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ.

ಕವಿಯೊಬ್ಬರು, "ಜಗವೆಲ್ಲ ನಗುತಿರಲಿ ಜಗದಳುವು ನನಗಿರಲಿ" ಎಂದು ಹೇಳಿ ಇಡೀ ಜಗತ್ತೇ ನಗುನಗುತ್ತಾ ಇರುವುದನ್ನು ಅಪೇಕ್ಷಿಸುತ್ತಾರೆ. ಹೀಗೆ ಇಡೀ ಜಗತ್ತಿನ ಜನರೆಲ್ಲ ನಗುನಗುತ್ತಾ, ಪ್ರೀತಿ ವಿಶ್ವಾಸಗಳಿಂದ ಒಂದೇ ಕರುಳ ಬಳ್ಳಿಯಲ್ಲಿ ಹುಟ್ಟಿದ ಮಕ್ಕಳಂದು ತಿಳಿದು ಜೀವಿಸುತ್ತಿದ್ದರೆ ಯಾವುದೇ ಜಗಳಗಳಾಗಲಿ ಉಂಟಾಗಲು ಸಾಧ್ಯವಿಲ್ಲ. ಹೀಗೆ ನಗು, ಒಬ್ಬರಿಂದ ಭಿನ್ನ–ವಿಭಿನ್ನ. ಆದರೆ ನಗುವಿನ ಮೌಲ್ಯವನ್ನು ಅರಿತುಕೊಂಡು ಸಮಯ–ಸಂದರ್ಭಕ್ಕನುಗುಣವಾಗಿ ಸರಿಯಾಗಿ ನಕ್ಕರೆ ನಗುವಿನಿಂದಾಗುವ ಲಾಭವನ್ನು ಪಡೆಯಬಹುದು. ನಗುವುದೇ ಸ್ವರ್ಗ, ಅಳುವುದೇ ನರಕ. ನಗುತ್ತಾ ಬಾಳೋಣ, ಸ್ವರ್ಗವ ಕಾಣೋಣ.

***

## ಕನಸು

✍: ವೈಷ್ಣವಿ ಎಸ್. ಪೂಜಾರಿ, I PUC SEBA

**ಎ**ಲ್ಲರಿಗೂ ಇರುತ್ತದೆ ಹಲವಾರು ಕನಸು
ಅದನ್ನು ನನಸಾಗಿಸಲು ಬೇಕು ಒಳ್ಳೆಯ ಮನಸ್ಸು

ಕನಸಿನ ಹಾದಿಯಲ್ಲಿ ಎದುರಾಗಬಹುದು ಹಲವಾರು ಕಷ್ಟ
ತಲೆಬಾಗಿದರೆ ನಮಗಾಗಬಹುದು ನಷ್ಟ

ತಲೆಯೆತ್ತಿ ಕಷ್ಟಗಳಿಗೆ ಹೋರಾಡು ನೀ
ಯಶಸ್ಸು ಸಿಕ್ಕ ಮೇಲೆ ಹಕ್ಕಿಯಂತೆ ಹಾರಾಡು ನೀ

ಕನಸಿನಿಂದಲೇ ಆಗುವುದು ದೇಶ ಕಲ್ಯಾಣ
ಗುರಿಯನಿಟ್ಟಿರೋ ನೀ ಆಕಾಶದವರೆಗೆ
ಹಗಲಿರುಳು ಹೋರಾಡು ನೀ ಜಗತ್ತಿನೊಳಗೆ
ಯಶಸ್ಸಿನ ಹಣ್ಣನ್ನು ತಿಂದು ಅನುಭವಿಸು ನೀ ಜೀವನದೊಳಗೆ.

# ನಮ್ಮ ಏಳ್ಗೆಗೆ ನಾವೇ ಶಿಲ್ಪಿಗಳು

✍ : ಪ್ರತೀಕ್ಷಾ
I PUC HEPS

**ಬ**ಯಸಿದ್ದೆಲ್ಲಾ ಸಿಗದೆ ಇರಬಹುದು, ಆದರೆ ಯಾವುದಕ್ಕಾಗಿ ಪ್ರಯತ್ನಿಸುತ್ತೇವೆಯೋ, ಅದು ಸಿಕ್ಕೇ ಸಿಗುತ್ತದೆ ಎಂಬ ಮಾತಿದೆ. ಅದುಬೇಕು, ಇದುಬೇಕು, ಹಾಗಾಗಬೇಕು ಎಂಬ ಬಯಕೆ ತುಂಬಾ ಸಹಜ. ಐ.ಎ.ಎಸ್.ಅಧಿಕಾರಿಯಾಗಬೇಕು, ಪ್ರಧಾನಿಯಾಗಬೇಕು, ಮುಖ್ಯಮಂತ್ರಿಯಾಗಬೇಕು ಎಂದೆಲ್ಲ ಕನಸು ಕಾಣುವುದು ತಪ್ಪಲ್ಲ. ಆದರೆ ನಮ್ಮ ಗುರಿ ತಲುಪುವಲ್ಲಿ ನಮ್ಮ ದಾರಿ ಯಾವುದು ಎಂಬುದು ಬಹುದೊಡ್ಡ ಪ್ರಶ್ನೆ.

ರಮೇಶನಿಗೆ ಏಳನೆಯ ತರಗತಿ ಮುಗಿಯುವ ಹೊತ್ತಿಗೆ ಸಂಗೀತ ಕಲಿಯಬೇಕೆಂಬ ಹಂಬಲ ಬಂದಿತು. ಅವರ ಅಮ್ಮ ಅದಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಆದರೆ ರಮೇಶನಿಗೆ ಒಂದು ತಿಂಗಳಾಗುವಷ್ಟರಲ್ಲಿ ಅದು ಬೋರಾಗಿ ಕಾಣಲಾರಂಭಿಸಿತು. ಕೊನೆಗೆ ಶ್ರದ್ಧೆಯ ಕೊರತೆಯಿಂದ ಸಂಗೀತ ಕ್ಲಾಸಿನಿಂದ ದೂರವಾದ. ಆಮೇಲೊಮ್ಮೆ ತಬಲಾ ಕಲಿಯುವ ಮನಸ್ಸಾಯಿತು. ಅಲ್ಲೂ ಕೂಡ ಆದದ್ದು ಆರಂಭ ಶೂರತ್ವ ಮಾತ್ರ. ಏನೂ ಪ್ರಯೋಜನವೇ ಆಗಲಿಲ್ಲ. ಮತ್ತೆ ಕರಾಟೆ ಕಲಿಯುವಾಸೆ. ಆದರೆ ಯಾವುದರಲ್ಲೂ ಏನೂ ಆಗಲೇ ಇಲ್ಲ ಎನ್ನುವುದು ಗಮನಾರ್ಹ ಸಂಗತಿ.

ಇದೊಂದು ಉದಾಹರಣೆ ಮಾತ್ರ. ಇಂಥವರು ಹಲವರು ಸಿಗುತ್ತಾರೆ. ಯಾರೋ ಸಂಗೀತ ಕಲಿಯುತ್ತಿದ್ದರೆ ನಾವೂ ಹೋಗೋಣ ಎಂಬುದು ಹಲವರ ಯೋಚನೆ. ಸಂಗೀತವನ್ನು ಬಹಳ ತಾಳ್ಮೆಯಿಂದ ಕಲಿಯಬೇಕು ಎನ್ನುವಷ್ಟರಲ್ಲಿ ಅರ್ಧದಷ್ಟು ಉತ್ಸಾಹ ಇಳಿದಿರುತ್ತದೆ. ಮತ್ತೊಂದಿಷ್ಟು ಮಾರ್ಗದರ್ಶನ ಸೂತ್ರಗಳನ್ನು ಕಲಿಯುವಾಗ 'ಅಯ್ಯೋ! ಇದು ನನ್ನಿಂದಾಗದು' ಎಂಬ ನಿರ್ಣಯಕ್ಕೆ ಬಂದು ಬಿಡುತ್ತೇವೆ. ರಾತ್ರೋರಾತ್ರಿ ಸಂಗೀತತಜ್ಞನಾಗಬೇಕು. ಇದಕ್ಕೆ ಎಷ್ಟು ದುಡ್ಡಾದರೂ ಸರಿ, ಕೊಡುತ್ತೇವೆ ಎಂಬ ಹಲವರು ದಂಬಾಲು ಬೀಳುವ ಬಗ್ಗೆ ಸಂಗೀತ ಟೀಚರ್ ಇಬ್ಬರು ಅನುಭವ ಹಂಚಿಕೊಂಡಿದ್ದರು. ಫ್ಯಾಶನ್ನಿಗಾಗಿ ಅಥವಾ ಮತ್ತಿನ್ನೇನೋ ಕಲಿಯುತ್ತಿದ್ದಾರೆ ಎಂಬ ಕಾರಣಕ್ಕಾಗಿಯೋ, ಯಾರದ್ದೋ ಮಾತು ಕೇಳಿಯೋ ಅಥವಾ ಕುಟುಂಬದ ಎದುರು ಶೋ ಮಾಡುವ ಕಾರಣಕ್ಕೋ ಕಂಡದ್ದನ್ನೆಲ್ಲಾ ಕಲಿಯುತ್ತೇವೆಂಬ ಕ್ಷಣಿಕ ತೀರ್ಮಾನ ಮಾಡುವವರು ಮೇಲ್ಕಂಡ ಹೇಳಿಕೆಯನ್ನು ಮನನ ಮಾಡುವ ಅಗತ್ಯ ಇದೆ. 'ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ' ಎಂಬ ಮಾತಿನಂತೆ 'ಮನಸ್ಸಿದ್ದರೆ ಮಾರ್ಗ' ಎಂಬುದು ಚಿರಪರಿಚಿತ ನಾಣ್ನುಡಿ. ಆಂಜನೇಯನಿಗೆ ಸೀಮೋಲ್ಲಂಘನೆ ಮಾಡುವಾಗ ತನ್ನ ಶಕ್ತಿಯ ಅರಿವೇ ಇರಲಿಲ್ಲವಂತೆ. ಸೀತಾನ್ವೇಷಣೆಗೆ ಲಂಕೆಗೆ ಹಾರಿಹೋಗಿ ಪ್ರಯತ್ನ ನಡೆಸಬೇಕು ಎಂಬ ಸೂಚನೆ ಬಂದಾಗ ಕಪಿಸೈನ್ಯವೆಲ್ಲ ಜಿಗಿದು ಜಿಗಿದು ತಾನು ಮಾಡುತ್ತೇನೆ ಆ ಕಾರ್ಯ ಎಂದು ಉತ್ಸಾಹ ತೋರಿದವರಂತೆ. ಆದರೆ ಆಂಜನೇಯ ಮಾತ್ರ ನಿರ್ಲಿಪ್ತನಾಗಿ ತಟಸ್ಥನಾಗಿ ತನ್ನಿಂದಾಗದ ಕಾರ್ಯವಿದು ಎಂದು ಕೀಳರಿಮೆಯಿಂದ ಕುಳಿತಿದ್ದನಂತೆ. ಪವಾಡ ಸದೃಶ ಕೆಲಸ ಆಗುವುದಾದರೆ ಅದು ಆಂಜನೇಯನಿಂದ ಮಾತ್ರ ಸಾಧ್ಯ. ತಾಕತ್ತಿರುವುದು ಮಾರುತಿಗೆ ಎಂಬುದನ್ನು ಬೇರೆಯವರು ಆಂಜನೇಯನಿಗೆ ಪ್ರೇರಣೆ ನೀಡಿದರು. ಸೀಮೋಲ್ಲಂಘನ ಯಶಸ್ವಿಯಾಯಿತು.

'ನಮ್ಮ ಶಕ್ತಿಯೇನು, ಸಾಮರ್ಥ್ಯವೇನು, ನಮ್ಮ ಕನಸನ್ನು ಈಡೇರಿಸಿಕೊಳ್ಳಲು ಮಾಡಬೇಕಾದದ್ದೇನು' ಎಂಬ ನಿರ್ದಿಷ್ಟತೆ ಇರಬೇಕು. ಯಾವುದೇ ಸಾಧನೆಗೆ ದೊಡ್ಡ ಹಂತ ಕಠಿಣಶ್ರಮ ಹಾಗೂ ಉತ್ಸಾಹ. ಆಮೇಲೆ ಯಾವುದೇ ಗುರಿಯನ್ನಾದರೂ ತಲುಪಬಹುದು ಎಂಬುದು ತಜ್ಞರ ಅಭಿಮತ. ಹನಿಹನಿಗೂಡಿದರೆ ಹಳ್ಳವೆಂಬಂತೆ ಅಧ್ಯಯನವಿರಲಿ, ಕ್ರೀಡೆಯಿರಲಿ, ಸಂಗೀತವಿರಲಿ, ನಿರಂತರ ಶ್ರಮಪಟ್ಟು ಸಫಲತೆಯೆಡೆಗೆ ಮುನ್ನುಗ್ಗುವಂತೆ ಮಾಡುತ್ತೇವೆ. ಎಕ್ಸ್ಟ್ರಾ ಆರ್ಡಿನರಿ ಎಂದು ಕೆಲವರನ್ನು ಗುರುತಿಸುತ್ತೇವೆ.

ಆದರೆ ಎಲ್ಲರಿಗೂ ಇರುವ ಅವಕಾಶದಲ್ಲೂ ತಾವೊಂದಿಷ್ಟು ಎಕ್ಸ್ಟ್ರಾ ಎಫರ್ಟ್‌ನಿಂದ ಎಕ್ಸ್ಟ್ರಾ ಆರ್ಡಿನರಿ ಆದವರು ಅವರು ಎಂಬುದನ್ನು ಮರೆಯಬಾರದು. ಇಪ್ಪತ್ತೊಂದು ದಿನ ಯಾವುದೇ ಅಭ್ಯಾಸವನ್ನು ನಿರಂತರವಾಗಿ ಪಾಲಿಸಿದರೆ ಇಪ್ಪತ್ತೆರಡನೇ ದಿನ ಆ ಅಭ್ಯಾಸ ನಮ್ಮನ್ನು ಹಿಂಬಾಲಿಸುತ್ತದೆ ಎಂಬುವುದು ಖ್ಯಾತ ಚಿಂತಕ, ಬರಹಗಾರ ರಾಬಿನ್ ಶರ್ಮಾ ಹೇಳಿದ ಮಾತು. ಇದು ಅಕ್ಷರಶಃ ಸತ್ಯ ಎಂಬುದನ್ನು ಬಹುತೇಕರು ಪ್ರಯೋಗದಿಂದ ಅನುಭವದಿಂದ ಮನಗಂಡಿದ್ದಾರೆ. ನಮ್ಮ ಏಳ್ಗೆಗೆ ನಾವೇ ಶಿಲ್ಪಿಗಳು, ಮತ್ಯಾರೋ ಬಂದು ನಮ್ಮನ್ನು ಉದ್ಧಾರ ಮಾಡುತ್ತಾರೆಂಬುದು ಭ್ರಮೆಯಷ್ಟೇ. ಅಲ್ಪತೃಪ್ತರಾಗಬಾರದು; ದೊಡ್ಡ ಕನಸು ನಮ್ಮದಾಗಬೇಕು.

***

# ದುಷ್ಟ ಕಾಗೆ

✍: **ಪ್ರದೀಶ್**, I B2 HEBA

**ಒಂ**ದಾನೊಂದು ಕಾಲದಲ್ಲಿಲೊಂದು ಗುಬ್ಬಚ್ಚಿ ವಾಸವಾಗಿತ್ತು. ಒಂದು ಕಾಗೆ ಅದರ ಜೊತೆ ಗೆಳೆತನ ಬೆಳೆಸಿತ್ತು. ಅವೆರಡೂ ಜೊತೆಗೇ ಆಹಾರ ಹುಡುಕಲು ಹೋಗುತ್ತಿದ್ದವು. ಒಂದು ದಿನ ಅವು ಕಾಡಿನ ಪಕ್ಕದ ಹಳ್ಳಿಯ ನಡುವೆ ಹಾರುತ್ತಿದ್ದವು. ಒಂದು ಗುಡಿಸಿಲಿನ ಹೊರಗೆ ಚಾಪೆಯ ಮೇಲೆ ಬಿಸಿಲಲ್ಲಿ ಒಣಗಲು ಇರಿಸಿದ್ದ ಮೆಣಸು ಅವುಗಳಿಗೆ ಕಾಣಿಸಿತು. "ನಮ್ಮಿಬ್ಬರಲ್ಲಿ ಯಾರು ಹೆಚ್ಚು ಮೆಣಸು ತಿನ್ನುತ್ತಾರೆಂದು ಪಂಥ ಹಾಕೋಣವೇ? ಸೋತವರು ಗೆದ್ದವರ ಮಾತು ಕೇಳಬೇಕು" ಎಂದಿತು ಕಾಗೆ. ಗುಬ್ಬಚ್ಚಿ ಒಪ್ಪಿಕೊಂಡಿತು. ಎರಡೂ ಕೆಳಗಿಳಿದು ಮೆಣಸು ತಿನ್ನ ತೊಡಗಿದವು. ಗುಬ್ಬಚ್ಚಿ ವೇಗವಾಗಿ ತಿನ್ನುತ್ತಿತ್ತು. ಮೆಣಸುಗಳೆಲ್ಲಾ ಮುಗಿದವು. "ನಾನು ಗೆದ್ದೆ: ನಿನಗಿಂತ ಹೆಚ್ಚು ಮೆಣಸು ನಾನು ತಿಂದಿದ್ದೇನೆ" ಎಂದಿತು ಕಾಗೆ. "ಹೌದು, ನೀನೇ ಗೆದ್ದಿ" ಎಂದು ಒಪ್ಪಿಕೊಂಡಿತು ಗುಬ್ಬಚ್ಚಿ. "ನಾನು ಹೇಳಿದಂತೆ ನೀನು ಕೇಳಬೇಕು" ಎಂದಿತು ಕಾಗೆ. ಗುಬ್ಬಚ್ಚಿ ಈ ಮಾತಿಗೂ ಒಪ್ಪಿಕೊಂಡಿತು. ಕಾಗೆ ಅದರ ಮೇಲೆ ನೆಗೆದು ನಿಂತಿತು. "ನಾನೀಗ ನಿನ್ನನ್ನು ತಿಂದು ಹಾಕುತ್ತೇನೆ" ಎಂದಿತು. "ನಿನಗೆ ನೀರು ಬೇಕಾದರೆ ಒಂದು ಮಡಕಡ ತಾ" ಎಂದಿತು ನದಿ. ಕಾಗೆ ಮಡಕಡ ತರಲು ಕಂಬಾರನ ಬಳಿಗೆ ಹೋಯಿತು. "ಮಡಕೆ ಕೊಡುತ್ತೇನೆ, ಆದರೆ ಮಣ್ಣು ಕಲಿಸಲು ಒಂದು ಸಲಿಕೆ ತಾ"ಎಂದಿತು ನದಿ. ಕಾಗೆ ಮಡಕೆ ತರಲು ಕುಂಬಾರನ ಬಳಿಗೆ ಹೋಯಿತು. "ಸಲಕೆ ಕೊಡುತೇನೆ, ಆದರೆ ಕುಲುಮೆ ಉರಿಸಲು ಬೆಂಕಿ ತಾ" ಎಂದ ಕುಂಬಾರ. ಕಾಗೆ ರೈತನ ಪತ್ನಿಯ ಬಳಿ ಹೋಗಿ ಬೆಂಕಿ ಕೇಳಿತು. "ಬೆಂಕಿ ಕೊಡುತ್ತೇನೆ, ಆದರೆ ನೀನು ಅದನ್ನು ಹೇಗೆ ಒಯ್ಯುತ್ತಿ?" ಎಂದು ಕೇಳಿದಳು ರೈತನ ಹೆಂಡತಿ. "ರೆಕ್ಕೆಗಳಲ್ಲಿ ಹಿಡಿದುಕೊಂಡು ಹೋಗುತ್ತೇನೆ" ಎಂದಿತು ಕಾಗೆ. ರೈತನ ಹೆಂಡತಿ ಉರಿಯುವ ಕೆಂಡಗಳನ್ನು ಕಾಗೆಗೆ ಕೊಟ್ಟಳು. ಕಾಗೆ ರೆಕ್ಕೆಗಳ ಕೆಳಗೆ ಕೆಂಡಗಳನ್ನು ಇಟ್ಟುಕೊಂಡು ಆಕಾಶಕ್ಕೆ ನೆಗೆಯಿತು. ಅದು ರೆಕ್ಕೆ ಹೊಡೆಯುವಾಗ ಕೆಂಡಗಳು ಜೋರಾಗಿ ಉರಿಯಿತು. ಅದರ ಉರಿಗೆ ಕಾಗೆಯ ರೆಕ್ಕೆಗಳು ಸುಟ್ಟು ಹೋದವು. ಕಾಗೆ ನೆಲಕ್ಕೆ ಬಿದ್ದು ಸತ್ತೇ ಹೋಯಿತು. ಪಾಪದ ಗುಬ್ಬಚ್ಚಿ ಕಾಗೆಯ ಕಾಟವಿಲ್ಲದೆ ಸುಖವಾಗಿ ಬಾಳಿತು.

***

# ಪ್ರಗತಿಯೂ ಮಾರಕವಾಗಬಹುದು

✍: ನಿಧಿ ಶೆಟ್ಟಿ, I B2

**ಹಿಂ**ದಿನ ನೂರು ವರ್ಷಗಳಿಗೆ ಹೋಲಿಸಿದರೆ ಇಪ್ಪತ್ತೊಂದನೆಯ ಶತಮಾನದಲ್ಲಿ ನಾವು ಸಾಧಿಸುವ ಪ್ರಗತಿ ಎಷ್ಟೋ ಪಾಲು ಹೆಚ್ಚಾಗಿರಬಹುದು. ಈಗಲೇ ಇಡೀ ಜಗತ್ತನ್ನೇ ಒಂದು ಪುಟ್ಟ ಗ್ರಾಮವನ್ನಾಗಿ ನಾಮ ಮಾಡಿದ್ದೇವೆ. ಔಷಧೀಯ ಕ್ಷೇತ್ರದಲ್ಲಿ ಕೆಲವೊಂದು ರೋಗಗಳಿಗೆ ಪರಿಹಾರವಿಲ್ಲದಿದ್ದರೂ, ಅನೇಕ ಸಾಂಕ್ರಮಿಕ ರೋಗಗಳ ಮೇಲೆ ನಿಯಂತ್ರಣ ಸಾಧಿಸಿದ್ದು ವಿಜ್ಞಾನದ ವಿಜಯವೇ ಸರಿ. ನಾವಿಂದು ನಮ್ಮ ಮನೆಯ ಪುಟ್ಟ ಕೋಣೆಯಲ್ಲಿ ಕುಳಿತು ಜಗತ್ತಿನ ಸಮಾಚಾರಗಳನ್ನು ಕಣ್ಣಾರೆ ಕಾಣಬಹುದು ಮಾತ್ರವಲ್ಲ, ಸಾಧ್ಯವಿದ್ದರೆ ಸಂಪಾದಿಸಲೂಬಹುದು.

ಆದರೆ ನಾವು ಈ ಪ್ರಗತಿಗೆ ಕೊಡಬೇಕಾದ ಬೆಲೆಯಾದರೂ ಏನು? ಈಗಲೇ ಕುಡಿಯಲು ನೀರು, ಉಸಿರಾಡಲು ಗಾಳಿ, ತಿನ್ನಲು ಶುದ್ಧ ಆಹಾರ ದುರ್ಲಭವಾಗಿದೆ. ಇದೇ ಏನು ಪ್ರಗತಿಯ ಅರ್ಥವೇ? ನಮ್ಮ ಹತ್ತಿರದ ನಾಗಾರ್ಜುನ ವಿದ್ಯುತ್ ಸ್ಥಾವರದ ಯೋಜನೆಯನ್ನೇ ತೆಗೆದುಕೊಳ್ಳಿ. ನೂರಾರು ವರ್ಷಗಳಿಂದ ಇಲ್ಲಿ ಮನೆಮಾಡಿದ್ದ ಮಂದಿ ಎಲ್ಲವನ್ನೂ ತೊರೆದು ಎಲ್ಲಿಗೆ ಹೋಗಬೇಕು? ಹೊಸ ಪರಿಸರದಲ್ಲಿ ಅವರನ್ನು ಕೇಳುವವರು ಯಾರು? ತಮ್ಮ ಪರಂಪರಾಗತ ಸಾಂಸ್ಕೃತಿಕ ಮೌಲ್ಯಗಳು ಪ್ರಗತಿಯ ಅದ್ಭುತ ಗಾಳಿ ಚಕ್ರದ ಅಡಿಯಲ್ಲಿ ನುಚ್ಚುನೂರಾಗುವುದನ್ನು ನೋಡಿ ಕಣ್ಣೀರಿಡುವುದಲ್ಲದೇ ಬೇರೇನು ಮಾಡಲು ಅವರಿಗೆ ಸಾಧ್ಯ.

ಮಾನವ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗಬಹುದು. ಆದರೆ ಅದೇ ಮಣ್ಣಿನಲ್ಲಿರುವ ಪ್ರಾಣಿಗಳು, ಪಕ್ಷಿಗಳು, ಹುಳುಹುಪ್ಪಟೆಗಳು ಅವುಗಳಿಗೆ ಬದುಕಲು ಮನುಷ್ಯನಿಗಿರುವಷ್ಟೇ ಹಕ್ಕಿಲ್ಲವೇ? ಈಗಲೇ ನೀವು ನೋಡಿರಬಹುದು ಗುಬ್ಬಿ ಕಣ್ಮರೆಯಾಗುತ್ತಿರುವುದನ್ನು. ಕಾರಣ ಏನು ಗೊತ್ತೇ? ವಿಷ ಮಿಶ್ರಿತ ಕಾಳುಕಡ್ಡಿಗಳು, ಮೊಬೈಲ್‌ನಿಂದ ಬರುವ ಆಯಸ್ಕಾಂತೀಯ ಸಂಜ್ಞೆಗಳು, ನೀಸರಹಿತ ಪೆಟ್ರೋಲ್– ಇವೆಲ್ಲವುಗಳು. ಮಳೆಗಾಲವನ್ನು ಸ್ವಾಗತಿಸುತ್ತಿದ್ದ ಆ ಕಪ್ಪೆಗಳ ಗಾನ ಈಗ ಎಲ್ಲಿದೆ? ಹೋಗಲಿ, ಕಾಗೆಗಳಾದರೂ ಈಗ ಮೊದಲಿನಷ್ಟು ಇವೆಯೇ? ಇದೇ ರೀತಿ ಮುಂದುವರಿದರೆ ನಮ್ಮ ಪ್ರೀತಿಯ ಕಾಗಕ್ಕ–ಗುಬ್ಬಕ್ಕಗಳೂ ಚಿತ್ರದಲ್ಲಿಯೇ ನೋಡುವ ಕಾಲ ದೂರವಿರಲಾರದು.

***

# ಕಾಡ್ಗಿಚ್ಚು

✍ : ಪ್ರದೀಶ್, I B2 HEBA

**ಎ**ಚ್ಚರಾಗು! ಎಚ್ಚರಾಗು! ಎಚ್ಚರಾಗು! ಧೀರ
ಕಾಡು ಉಳಿಸಿ ನಾಡು ಬೆಳೆಸಿ ಬದುಕೋಣ ಬಾರ

ಮನುಷ್ಯನ ಹಿತಚಿಂತನೆಗೆ ಮಿತಿಯಿಲ್ಲ
ಮರಗಿಡ, ಪ್ರಾಣಿಗಳಿಗೆ ಇನ್ನು ಉಳಿವಿಲ್ಲ
ಅವನ ಸಂತೋಷ ಐಶ್ವರ್ಯಕ್ಕೆ ಪರಿಸರ ನಾಶವಾಗುತ್ತಿದೆ
ಭೂಮಿಯ ತಾಪ ಏರಿ ಕಾಡ್ಗಿಚ್ಚು ಹೊರಟಿದೆ.

ಎಚ್ಚರಾಗು! ಎಚ್ಚರಾಗು! ಎಚ್ಚರಾಗು! ಧೀರ
ಕಾಡು ಉಳಿಸಿ ನಾಡು ಬೆಳೆಸಿ ಬದುಕೋಣ ಬಾರ

ನೆರಳ ನೀಡುವ ಮರವಿಲ್ಲ
ಆಡಿ ಬೆಳೆದ ಸವಿನೆನಪಿಲ್ಲ
ಮನುಷ್ಯನ ಸಂತೋಷಕ್ಕೆ ನಾಶವಾಯಿತಲ್ಲ
ಇನ್ನು ಭೂಮಿಯಲ್ಲಿ ನಮಗೆ ಉಳಿಗಾಲವಿಲ್ಲ.

ಎಚ್ಚರಾಗು! ಎಚ್ಚರಾಗು! ಎಚ್ಚರಾಗು! ಧೀರ
ಕಾಡು ಉಳಿಸಿ ನಾಡು ಬೆಳೆಸಿ ಬದುಕೋಣ ಬಾರ

ಇನ್ನಾದರೂ ಪರಿಸರ ಉಳಿಸೋಣ
ಒಗ್ಗಟ್ಟಿನಲ್ಲಿ ಪರಿಸರ ಉಳಿಸೋಣ
ಕಾಡ್ಗಿಚ್ಚಿನಂತಹ ಮನುಷ್ಯನ ಯೋಚನೆ
ನಾಶಮಾಡಿಕೊಂಡು ಉದ್ಧಾರ ಮಾಡೋಣ.

ಎಚ್ಚರಾಗು! ಎಚ್ಚರಾಗು! ಎಚ್ಚರಾಗು! ಧೀರ
ಕಾಡು ಉಳಿಸಿ ನಾಡು ಬೆಳೆಸಿ ಬದುಕೋಣ ಬಾರ

***

# ಮಲೆನಾಡ ದಿವ್ಯ ವಿಸ್ಮೃತಿ

✍ : ಧನುಷ್ ರೆಡ್ಡಿ
II PUC SEBA

**ಮ**ಲೆನಾಡು ಪದಗಳಿಗೂ ಸಿಗದ, ಎಂದೆಂದಿಗೂ ವರ್ಣಿಸಲಾಗದ ಕಾನನದ ನಾಡು. ಮಲೆಮಲೆಗಳ ಮೇಲೆಲ್ಲಾ ಹಸಿರು ಮಾತೆಯು ತನ್ನ ಹಸಿರು ಸೆರಗನ್ನು ಹೊದಿಸಿ, ಪ್ರಾತಃ ಕಾಲದಲ್ಲಿ ಹುಟ್ಟುವ ಸೂರ್ಯನಿಗೂ ಅವನ ಕಿರಣಗಳನ್ನು ವಸುಧೆಗೆ ಸ್ಪರ್ಶಿಸಲು ಬಿಡಳು. ಕೊನೆಕೊನೆಗೆ ಅವಳ ಮನ ಕರಗಿ ಕನಿಕರದಿಂದೆಂಬಂತೆ ಹಸಿರೆಲೆಗಳ ನಡುನಡುವಿನಿಂದ ರವಿಯ ಕೋಲುಕೋಲು ಕಿರಣಗಳನ್ನು ಭೂತಾಯಿಗೆ ಸ್ಪರ್ಶಿಸಲು ಅನುವುಮಾಡಿಕೊಡುವಳು. ಈ ಸೋಜಿಗದ ಸಂದರ್ಭಕ್ಕೂ ಮೊದಲು ಬೆಳಗಿನ ಜಾವ ಮಲೆನಾಡಿನ ಗಿರಿಗಳೆಲ್ಲಾ ಮಂಜಿನ ಹಾಲು ಹಾಲು ಸಮುದ್ರದ ಮಧ್ಯಮಧ್ಯದಲ್ಲಿ ಪಾಚಿಗಟ್ಟಿದ ಕಲ್ಲುಬಂಡೆಗಳಂತೆ ಕಾಣುವಾಗ, ಸೂರ್ಯನು ತನ್ನ ಉದಯದಿಂದ ಆ ಮಂಜಿನ ಹಾಲು ಸಮುದ್ರವನ್ನೆಲ್ಲಾ ಬತ್ತಿಸಿ, ಕಾಂತಾರದಿಂದಾವೃತವಾದ ಗಿರಿಗಳ ಮಧ್ಯದಿಂದ ರಾಜನಡಿಗೆ ಇಡುತ್ತಾ, ಗಗನಕ್ಕೇರಿ, ಉಂಡೆಉಂಡೆ ಮೋಡಗಳಿಗೆ ತನ್ನ ಕೇಸರಿ ರೇಖೆಗಳಿಂದ ಚುಂಬಿಸುವನು. ಇದರ ಜೊತೆಗೆ ಹಕ್ಕಿಗಳ ಚಿಲಿಪಿಲಿ, ಮೈಕೊರೆಯುವ ಚಳಿ ಆವರಿಸಿದ್ದರಂತೂ ಎಂಥವರಿಗೂ ಯಾವುದೋ ದಿವ್ಯಲೋಕಕ್ಕೆ ಹೆಜ್ಜೆ ಇಟ್ಟಂತೆ ಅನುಭವ. ಇದಾದ ಮೇಲೆಯೇ ಹಸಿರು ಮಾತೆ ಸೂರ್ಯನ ಮೇಲೆ ತೋರುವ ಆ ಕನಿಕರದ ಸನ್ನಿವೇಶ. ಕೊನೆಗೂ ಹಾಗೋ ಹೀಗೋ, ಎಲೆಗಳ ಗೊಜಲಿನ ನಡುವಿನಿಂದ ಸೂರ್ಯನ ಕಿರಣಗಳು ಭುವಿಗೆ ಸ್ಪರ್ಶವಾಗುತ್ತವೆ. ಬರುಬರುತ್ತಾ ಅರುಣನು ಸಂಧ್ಯಾರಾಗದಲ್ಲಿ ತನ್ನ ರುಧಿರದ ಕಿರಣಗಳನ್ನು ಎಲ್ಲೆಡೆಯೂ ಪಸರಿಸಿ, ಗಿರಿಗಳ ನಡುವಿನಿಂದ ಹುಟ್ಟಿದ್ದ ಅವನು, ನೀರಲ್ಲಿ (ಸಮುದ್ರದಲ್ಲಿ) ಮುಳುಗಿ ಮರೆಯಾಗುವನು. ತನ್ನ ದಿನದ ಕರ್ತವ್ಯ ಮುಗಿಸಿ ನಾಳೆಗೆ ಮರುಜನ್ಮವೆತ್ತಲೂ ಸಜ್ಜಾಗುವನು. ಸೂರ್ಯನು ಮಡಿದ ಮೇಲೆ ಚಂದ್ರನ ಕಾಂತಿಯೇ ಬೈರುಗಪ್ಪಿಗೆ ಆಸರೆ. ಆ ಬೈರುಗಪ್ಪಿನಲ್ಲಿ ಅಂತಹ ನಿಬಿಡವಾದ ವನದಲ್ಲಿಯೂ ಎಂತಹ ನೀರವತೆ ಕೂಡಿರುತ್ತದೆಂದರೆ ಹುಳುಗಳ ಕಾಲ್ಗೆಜ್ಜೆಯ ಸದ್ದು ಕೇಳುವಷ್ಟು! ಶಶಿಯ ಬೆಳದಿಂಗಳನ್ನೇ ನಯನಗಳಲ್ಲಿ ತುಂಬಿಸಿಕೊಳ್ಳುವಾಗ ತಂಗಾಳಿ ಮೆಲ್ಲನೆ ಮೈಸೋಂಕಿ ಹೋದಾಗ ಆಹಾ! ಎಂತಹ ಪ್ರಮೋದ. ಜೀವನದ ಗೋಜಲುಗಳೆಲ್ಲವನ್ನು ಮರೆತು ಮಲೆನಾಡಿನ ಗಿರಿಗಳಲ್ಲೇ ವಾಸಮಾಡಿಬಿಡೋಣ ಎನ್ನುವಷ್ಟು ಖುಷಿ. ಮಲೆನಾಡನ್ನು ಕಣ್ಣಾಲಿಗಳಲ್ಲೂ ತುಂಬಿಕೊಂಡರೆ ಸ್ವರ್ಗವೇ ಇಲ್ಲವೆನಿಸುತ್ತದೆ. ಈ ಇಳೆಯ ಮಡಿಲಲ್ಲಿ ಮಲೆನಾಡನ್ನು ಸೃಷ್ಟಿಸಿದ ಆ ದೇವರಿಗೆ ನನ್ನ ಧಮನಿಗಳಲ್ಲಿ ಹರಿಯುತ್ತಿರುವ ರುಧಿರದಿಂದ ಹೃದಯಾಂತರಾಳದ ವಂದನೆಗಳು.

***

# ಬದಲಾದ ಜಿಪುಣ ರಂಗಣ್ಣ

✍: ಅನೀಶ್ ಬಿ., I PUC

**ಒಂ**ದು ಊರಿನಲ್ಲಿ ಒಬ್ಬ ಜಿಪುಣಗ್ರೇಸನಿದ್ದ. ಅವನು 'ಜಿಪುಣ ರಂಣ್ಣ' ಎಂದೇ ಪ್ರಖ್ಯಾತನಾಗಿದ್ದ. ಅವನು ಎಲ್ಲೇ ವ್ಯಾಪಾರಕ್ಕೆ ಹೋದರೂ ತನ್ನ ಜಿಪುಣತನವನ್ನು ಅಲ್ಲಿ ಪ್ರದರ್ಶಿಸುತ್ತಿದ್ದ. ಅವನ ಜಿಪುಣತನ ಎಲ್ಲಿಯವರೆಗೆ ಇತ್ತೆಂದರೆ, ಬಸ್ ಹತ್ತಿದ ಕೂಡಲೇ ಕಂಡಕ್ಟರ್ ಟಿಕೆಟ್ ಕೇಳಲು ಬಂದಾಗ 10 ರೂಪಾಯಿ ಜಾಗಕ್ಕೆ 5 ರೂಪಾಯಿ ಕೊಟ್ಟು ಹಿಂದಿನ ನಿಲ್ದಾಣದಲ್ಲಿಯೇ ಇಳಿದು ಮನೆಯವರೆಗೆ ನಡೆದುಕೊಂಡು ಹೋದ ಪ್ರಸಂಗಗಳೂ ಉಂಟು.

ಒಮ್ಮೆ ರಂಗಣ್ಣ ತರಕಾರಿ ತರಲೆಂದು ಅಂಗಡಿಗೆ ಹೋಗಿ, 60 ರೂಪಾಯಿ ತರಕಾರಿಗಳನ್ನು 40 ರೂಪಾಯಿಗೆ ಕೇಳಿದ. ಆಗ ಅಂಗಡಿಯವ ಸುತರಾಂ ಒಪ್ಪಲೇ ಇಲ್ಲ. ರಂಗಣ್ಣ ಅಂಗಡಿಯವನಿಗೆ ಮನದಲ್ಲಿಯೇ ಬೈದುಕೊಂಡು, "ಇಂದು ಮನೆಯಲ್ಲಿ ಬೇಳೆಸಾರನ್ನು ಮಾಡಿಕೊಂಡು ತಿಂದರಾಯ್ತು" ಎಂದು ಯೋಚಿಸಿ ಮುಂದೆ ಹೊರಟ. ಮುಂದೆ ಒಬ್ಬ ಮಹಿಳೆ ತನ್ನ ಪುಟ್ಟ ಮಗುವನ್ನು ಕೈಯಲ್ಲಿ ಹಿಡಿದುಕೊಂಡು, "ಕಲ್ಲಂಗಡಿ ಕೆಜಿ 40..." ಎಂದು ಕೂಗುತ್ತಾ ಕಲ್ಲಂಗಡಿ ಹಣ್ಣನ್ನು ನಡು ಬಿಸಿಲಿನ ನಡು ಮಧ್ಯಾಹ್ನದ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಳು. ರಂಗಣ್ಣನಿಗೆ ಆ ಬಿಸಿಲ ಬೇಗೆಗೆ ಕಲ್ಲಂಗಡಿ ಹಣ್ಣಿನ ಪಾನಕ ಕುಡಿಯಬೇಕೆಂಬ ಆಸೆಯಾಯಿತು. "ಇಲ್ಲೇ ಅಂಗಡಿಯಲ್ಲಿ ನಾನೊಬ್ಬನೇ ಪಾನಕವನ್ನು ಕುಡಿದರೆ 40ರಿಂದ 50 ರೂ ಆಗುತ್ತದೆ. ಆದರೆ ಈ ಕಲ್ಲಂಗಡಿ ಹಣ್ಣನ್ನು ಖರೀದಿಸಿ, ಮನೆಯಲ್ಲಿ ಅದನ್ನು ಪಾನಕ ಮಾಡಿ ಕುಡಿದರೆ, ಅದೇ 40ರಿಂದ 50 ರೂಪಾಯಿಗಳಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳೆಲ್ಲರೂ ಪಾನಕವನ್ನು ಕುಡಿಯಬಹುದು" ಎಂದು ಯೋಚಿಸಿ, ರಂಗಣ್ಣ ಕಲ್ಲಂಗಡಿ ಹಣ್ಣನ್ನು ಖರೀದಿಸಲು ನಿರ್ಧರಿಸಿದ.

ರಂಗಣ್ಣ ಕಲ್ಲಂಗಡಿ ಮಾರುವವಳ ಬಳಿ ಬಂದು, "ರೂ. 40ರ ಕಲ್ಲಂಗಡಿ ಹಣ್ಣನ್ನು ರೂ. 30ಕ್ಕೆ ಕೊಡುವುದಾದರೆ ಮಾತ್ರ ನಾನು ಖರೀದಿಸುತ್ತೇನೆ. ಇಲ್ಲವಾದರೆ ಬೇಡ" ಎಂದನು. ಆಕೆ ಬಹಳ ಸಂತೋದಿಂದಲೇ ರಂಗಣ್ಣನಿಗೆ ರೂ.40ರ ಕಲ್ಲಂಗಡಿ ಹಣ್ಣನ್ನು ರೂ.30ಕ್ಕೆ ಕೊಟ್ಟಳು. ರಂಗಣ್ಣನೋ, ಕಲ್ಲಂಗಡಿಯನ್ನು ಕೊಂಡು ಬಹಳ ಸಂತಸದಿಂದ ಮನೆಯತ್ತ ಹೆಜ್ಜೆ ಹಾಕಿದನು.

ಕೆಲ ದಿನಗಳ ಬಳಿಕ ರಂಗಣ್ಣ, ಅದೇ ಮಹಿಳೆಯ ಬಳಿ ಕಲ್ಲಂಗಡಿಯನ್ನು ಕೊಳ್ಳಲು ಬಂದನು. ಆಗ ಅದೇ ಮಹಿಳೆ ತನ್ನ ಕೈಯಲ್ಲೊಂದು ಪುಟ್ಟ ಮಗುವನ್ನು ಹಿಡಿದುಕೊಂಡು, "ಕಲ್ಲಂಗಡಿ ಕೆಜಿ 50..." ಎಂದು ಕೂಗುತ್ತಿದ್ದಳು. ರಂಗಣ್ಣ, "ಇವಳು ನಾನು ಹೇಳಿದಷ್ಟೇ ದರಕ್ಕೆ ಕಲ್ಲಂಗಡಿಯನ್ನು ಕೊಡುತ್ತಾಳೆ" ಎಂದು ಮನದಲ್ಲಿಯೇ ಯೋಚಿಸಿ, ಅವಳ ಬಳಿ ಬಂದು, "ರೂ 50ರ ಕಲ್ಲಂಗಡಿಯನ್ನು 25ರೂಪಾಯಿಗೆ ಕೊಡು" ಎಂದನು. ಆಗ ಆಕೆ, "ಇಲ್ಲ ಅಣ್ಣ, ಅಷ್ಟು ಕಡಿಮೆ ಹಣಕ್ಕೆ ನಿಮಗೆ ಈ ಹಣ್ಣನ್ನು ಕೊಟ್ಟರೆ ನನಗೆ ಗೀಟುವುದಿಲ್ಲ" ಎಂದಳು. ರಂಗಣ್ಣ, "ಸರಿ ಬಿಡು, ನಿಮ್ಮಂತಹ ಬೀದಿಬದಿ ವ್ಯಾಪಾರಿಗಳ ಹಣೆಬರಹವೇ ಇಷ್ಟು" ಎಂದು ಆಕೆಗೆ ಬೈಯುತ್ತಾ ಮುನ್ನಡೆದ.

ಸ್ವಲ್ಪ ಮುಂದೆ ಹೋದ ಬಳಿಕ, ರಂಗಣ್ಣನಿಗೆ ತನ್ನನ್ನು ಯಾರೋ ಕರೆದಹಾಗೆ ಅನಿಸಿತು. ತಿರುಗಿ ನೋಡಿದರೆ, ಕಲ್ಲಂಗಡಿ ಮಾರುತ್ತಿದ್ದ ಆ ಮಹಿಳೆಯು ತನ್ನ ಪುಟ್ಟ ಮಗುವನ್ನು ಚೀದಲ್ಲಿ ಕಟ್ಟಿಕೊಂಡು, ಕೈಯಲ್ಲೊಂದು ಕಲ್ಲಂಗಡಿಯನ್ನು ಹಿಡಿದುಕೊಂಡು ರಂಗಣ್ಣನ ಬಳಿ, "ನಿಲ್ಲಿ ಅಣ್ಣ..." ಎಂದು ಕೂಗುತ್ತಾ ಓಡಿ ಬರುತ್ತಿದ್ದಳು. ಆಕೆ ರಂಗಣ್ಣನ ಬಳಿ ಬಂದು, "ಅಣ್ಣ, ನಿಮಗೆ ರೂ.30ಕ್ಕೆ ಈ ಕಲ್ಲಂಗಡಿಯನ್ನು ಕೊಡುವೆ" ಎಂದಳು. ಆಗ ರಂಗಣ್ಣ "ರೂ.25ಕ್ಕೆ ಕೊಟ್ಟರೆ ಏನಾಗುತ್ತದೆ?" ಎಂದನು. ಆಗ ಆಕೆ, "ಅಣ್ಣ, 30ರೂಪಾಯಿಗಳಿದ್ದರೆ ನನ್ನ ಈ ಪುಟ್ಟ ಮಗುವಿಗೆ ಒಂದು ಲೋಟ ಹಾಲು ಮತ್ತು ಬ್ರೆಡ್ ಕೊಡಬಹುದು. ನಿಮ್ಮಂತೆಯೇ ಇನ್ನೊಬ್ಬರು ನನ್ನ ಬಳಿಗೆ ವ್ಯಾಪಾರಕ್ಕೆ ಬಂದರೆ, ನಾನೂ ಕೂಡ ಈ ದಿನ ಊಟ ಮಾಡಬಹುದು" ಎಂದಳು. ಆಕೆಯ ಮಾತಿಗೆ ರಂಗಣ್ಣನ ಮನ ಕರಗಿತು. ಕಲ್ಲಂಗಡಿ ಹಣ್ಣನ್ನು ಚೌಕಾಸಿ ಮಾಡದೆ 50 ರೂಪಾಯಿಗಳಿಗೆ ಖರೀದಿಸಿ, ಮನೆಯತ್ತ ನಡೆದ. "ಛೇ! ಇಷ್ಟು ದಿನ ನಾನು ಅನೇಕ ಕುಟುಂಬಗಳಿಗೆ ಹೊಟ್ಟೆ ತುಂಬಿಸುವುದರಲ್ಲಿ ಚೌಕಾಸಿ ಮಾಡಿ, ಅವರ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಯನ್ನು ಇಟ್ಟೆನಲ್ಲ!" ಎಂದು ಪಶ್ಚಾತ್ತಾಪ ಪಟ್ಟ. ಮುಂದೆ ರಂಗಣ್ಣ, ಯಾರ ಬಳಿಯೂ ತನ್ನ ಜಿಪುಣತನವನ್ನು ತೋರಿಸಲಿಲ್ಲ. ಕೆಲವೇ ದಿನಗಳಲ್ಲಿ ಅವರ ಹೆಸರ ಮುಂದಿದ್ದ 'ಜಿಪುಣ' ಎಂಬ ಅಡ್ಡ ಹೆಸರು ಕೂಡ ಮಾಯವಾಯಿತು.

***

# ಇಬ್ಬರು ಬುದ್ಧಿವಂತ ಮಕ್ಕಳ ಕಥೆ

✍ : ವಿಜಯ್
I PUC B1

**ರಾ**ಮಪುರ ಎಂಬ ದೊಡ್ಡ ಊರಿನಲ್ಲಿ ಇಬ್ಬರು ಅಣ್ಣ–ತಮ್ಮಂದಿರಿದ್ದರು. ಅಣ್ಣನ ಹೆಸರು ರಮೇಶ ಮತ್ತು ತಮ್ಮನ ಹೆಸರು ರಾಹುಲ. ಇವರಿಬ್ಬರೂ ತಮ್ಮ ವಯಸ್ಸನ್ನು ಲೆಕ್ಕಿಸದೇ ಬೆಳಗ್ಗಿನಿಂದ ಸಾಯಂಕಾಲದ ವರೆಗೆ ಚಿಕ್ಕಪುಟ್ಟ ಕೆಲಸಗಳನ್ನು ಮಾಡಿ ಹಣವನ್ನು ಸಂಪಾದಿಸುತ್ತಿದ್ದರು. ರಮೇಶ ಮತ್ತು ರಾಹುಲರು 7 ವರ್ಷ ಮತ್ತು 5 ವರ್ಷದ ಬಾಲಕರಾಗಿದ್ದರು. ಇವರಿಬ್ಬರೂ ತಮ್ಮ ಊರಿನಲ್ಲಿ ಅತೀ ಹೆಚ್ಚು ಜನರು ಸೇರುವಲ್ಲಿ ಪೇಪರ್ ಮತ್ತು ಇತರ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದರು. ಆ ಹಣ್ಣುಗಳನ್ನು ಮಾರಾಟ ಮಾಡುತ್ತಿರುವಾಗ ಅವರ ಊರಿಗೆ ಬೇರೆ ದೇಶದಿಂದ ಯಾತ್ರಿಕರು ಕಾರಿನಲ್ಲಿ ಬರುತ್ತಾರೆ. ಇದನ್ನು ಕಂಡ ರಮೇಶನು ಅವರಲ್ಲಿ ತಮ್ಮಲ್ಲಿರುವ ಹಣ್ಣುಗಳನ್ನು ತೆಗೆದುಕೊಳ್ಳಿ, ಸಿಹಿಯಾದ ಹಣ್ಣುಗಳು. ಇವು ಇಲ್ಲಿ ಬಿಟ್ಟರೆ ಬೇರೆಲ್ಲಿಯೂ ಇಷ್ಟು ರುಚಿಯಾದ ಹಣ್ಣುಗಳು ಸಿಗುವುದಿಲ್ಲ ಎಂದು ಮಾರಾಟ ಮಾಡಲು ಪ್ರಯತ್ನಿಸುತ್ತಿರುವಾಗ ಅವರ ಕಾರಿನ ಡ್ರೈವರ್ ಆ ಹಣ್ಣುಗಳಲ್ಲಿ ಹುಳಗಳಿರುತ್ತವೆ ಮತ್ತು ಹಣ್ಣುಗಳು ರುಚಿಯೂ ಇರುವುದಿಲ್ಲ, ಅವನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದನು. ಆದರೆ ಮಕ್ಕಳ ಮೇಲೆ ಕರುಣೆ ತೋರಿಸಿ ಯಾತ್ರಿಕನು ಹಣ್ಣುಗಳನ್ನು ತೆಗೆದುಕೊಳ್ಳುತ್ತಾನೆ. ಇದರಿಂದ ಆ ಮಕ್ಕಳು ಖುಷಿ ಪಟ್ಟು ಯಾತ್ರಿಕರಿಗೆ ತಮ್ಮ ಊರನ್ನು ತೋರಿಸಲು ಕರೆದುಕೊಂಡು ತಮ್ಮ ಊರಿನ ಪ್ರಸಿದ್ಧವಾದ ಸ್ಥಳಗಳನ್ನು ತೋರಿಸುತ್ತಾರೆ. ಹಾಗೆಯೇ ಆ ಊರಿಗೆ ಹೊಸಬನಾದ ಯಾತ್ರಿಕನಿಗೆ ಸುಂದರ ಸ್ಥಳಗಳನ್ನು ತೋರಿಸಲು ಕರೆದುಕೊಂಡು ಹೋಗುತ್ತಾರೆ. ಎಲ್ಲಾ ಸ್ಥಳಗಳನ್ನು ತೋರಿಸಿದ ನಂತರ ಅವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಒಂದು ಉತ್ತಮ ಹೊಟೇಲನ್ನು ತೋರಿಸಿದರು. ಆ ಹೊಟೇಲಿನಲ್ಲಿದ್ದ ಯಾತ್ರಿಕನು ಹೊರಗೆ ಬಂದು ನೋಡಿದಾಗ ಆ ಇಬ್ಬರೂ ಮಕ್ಕಳು ರಸ್ತೆಯ ಬಳಿಯಲ್ಲಿ ನಿಂತಿದ್ದರು. ಇದನ್ನು ಕಂಡ ಯಾತ್ರಿಕನು ನೀವು ಈ ರಾತ್ರಿಯಲ್ಲಿ ಇಲ್ಲಿ ಏನು ಮಾಡುತ್ತಿರುವಿರಿ ಎಂದು ಕೇಳಿದಾಗ, ಬಾಲಕರು, ನಾವು ಬೆಳಗ್ಗೆ ತಂದ ಪೇಪರ್ ಮಾರಾಟವಾಗಿಲ್ಲ. ಈಗ ಐದು ನಿಮಿಷ ಬಿಟ್ಟರೆ ಒಂದು ಬಸ್ಸು ಬರುತ್ತದೆ, ಅದರಲ್ಲಿ ಇರುವ ಜನರು ಈ ಪೇಪರ್‌ಗಳನ್ನು ತೆಗೆದುಕೊಳ್ಳಬಹುದು ಎಂಬ ಆಸೆಯಿಂದ ನಿಂತಿದ್ದೇವೆ ಎಂದು ಆ ಹುಡುಗರು ಉತ್ತರಿಸಿದರು. ಆನಂತರ ಆ ಪೇಪರ್‌ಗಳನ್ನು ಮಾರಿ ಹಿಂದಿರುಗಿದರು. ಮಾರನೆ ದಿನ ಅದೇ ರೀತಿಯಲ್ಲಿ ಬೆಳಗ್ಗೆ ಎದ್ದು ಕೆಲಸ ಮಾಡಲು ಪ್ರಾರಂಭಿಸುತ್ತಾರೆ. ಇದನ್ನು ಕಂಡ ಯಾತ್ರಿಕನು "ನೀವು ಇಷ್ಟು ಕಷ್ಟ ಪಟ್ಟು ಹಣವನ್ನು ಸಂಪಾದಿಸಿ ಹೊರದೇಶಕ್ಕೆ ಹೋಗಲು ಹಣವನ್ನು ಕೂಡಿಡುವುದೇ" ಎಂದು ಕೇಳಿದಾಗ, ಮಕ್ಕಳು ಇಲ್ಲ–ಇಲ್ಲ, ಈ ಹಣವನ್ನು ನಮಗಾಗಿ ಸಂಪಾದಿಸುವುದಲ್ಲ. ಈ ಹಣ ನಮಗೆ ತುಂಬಾ ಅವಶ್ಯಕತೆ ಇದೆ. ಆದರೆ ಅವರು ತಮ್ಮ ವೈಯುಕ್ತಿಕ ವಿಷಯಗಳನ್ನು ಇಲ್ಲಿ ಹೇಳುವುದಿಲ್ಲ. ಅವರು ತಮ್ಮ ಬಾಲ್ಯದಲ್ಲಿ ಬಹಳ ದೊಡ್ಡ ಅಪಘಾತ ಸಂಭವಿಸಿದ್ದರಿಂದ ತಮ್ಮ ತಂದೆ–ತಾಯಿಯನ್ನು ಕಳೆದುಕೊಂಡಿದ್ದರು. ಹಾಗೆಯೇ ಆ ಅಪಘಾತದಲ್ಲಿ ತನ್ನ ಅಕ್ಕನಿಗೆ ಆರೋಗ್ಯದ ಸಮಸ್ಯೆ ಉಂಟಾಗಿ ಅವಳು ಆಸ್ಪತ್ರೆಯಲ್ಲಿ ದಾಖಲಾಗಿದ್ದಳು. ಇದರಿಂದ ಅವರಿಬ್ಬರೂ ತಮ್ಮ ವಯಸ್ಸನ್ನು ಲೆಕ್ಕಿಸದೇ ರಾತ್ರಿ–ಹಗಲು ಕಷ್ಟ ಪಟ್ಟು ಹಣ ಸಂಪಾದಿಸಿ ತಮಗೆ ಹಣವನ್ನು ಉಳಿಸಿದರೆ ವಾರ–ವಾರ ಹಣವನ್ನು ಆಸ್ಪತ್ರೆಗೆ ಕಟ್ಟುತ್ತಿದ್ದರು. ಆದರೆ ಈ ವಿಷುಗಳನ್ನು ಯಾತ್ರಿಕನಿಗೆ ಹೇಳುವುದಿಲ್ಲ. ಹೇಳಿದರೆ ನಾವು ಅವರಲ್ಲಿ ಅನುಕಂಪದಿಂದ ಇದ್ದು ಸಹಾಯ ಕೇಳಿದ ಹಾಗೆ ಆಗುತ್ತದೆ ಎಂದು ಯೋಚಿಸುತ್ತಾರೆ. ಆದರೆ ಯಾತ್ರಿಕನು ಹೊರಡುವ ಮುಂಚೆ ನಿಮಗೆ ಯಾವ ಸಹಾಯ ಬೇಕೆಂದು ಕೇಳಿದಾಗ ಆ ಅಣ್ಣತಮ್ಮಂದಿರಲ್ಲಿ ತಮ್ಮನಾದ ರಾಹುಲನು ನಮ್ಮನ್ನು ಇನ್ನೊಂದು ಊರಿಗೆ

ನಿಮ್ಮ ಕಾರಿನಲ್ಲಿ ಕರೆದುಕೊಂಡು ಹೋಗುತ್ತೀರಾ ಎಂದು ಕೇಳಿದನು. ಅದಕ್ಕೆ ಅಣ್ಣನು, "ತಕ್ಷಣ ಬೇಡ ಬೇಡ ನಮ್ಮನ್ನು ಕರೆದುಕೊಂಡು ಹೋಗುವ ತೊಂದರೆ ನಿಮಗೆ ಯಾಕೆ. ಆದರೆ ಪರವಾಗಿಲ್ಲ. ನಾನು ಈ ಊರಿಗೆ ಹೊಸಬ. ಈ ಊರನ್ನು ನನಗೆ ತೋರಿಸಿದ್ದೀರ" ಎಂದು ಹೇಳಿ ನಿಮ್ಮನ್ನು ಬೇರೆ ಊರಿಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಅಲ್ಲಿಂದ ತೆರಳಿದ. ಅನಂತರ ರಮೇಶನು ತಮ್ಮನಾದ ರಾಹುಲನಿಗೆ ಕೋಪದಿಂದ ಯಾಕೆ ನೀವು ಅವರಿಗೆ ನಮ್ಮನ್ನು ಕರೆದುಕೊಂಡು ಹೋಗಲು ಹೇಳಿದೆ ಎಂದು ಕೇಳಿದಾಗ ನೀನು ಇಲ್ಲಿಂದ ಸುಮಾರು ಹದಿನೈದು ಕಿಲೋಮೀಟರ್ ಸೈಕಲ್ ತುಳಿದುಕೊಂಡು ಹೋಗುವಾಗ ನಿನಗೆ ಆಯಾಸವಾಗುತ್ತದೆ. ಅದಕ್ಕಾಗಿ ನಾನು ಈ ರೀತಿ ಸಹಾಯ ಕೇಳಿದೆನು ಎಂದು ಹೇಳುತ್ತಾನೆ. ಮರುದಿನ ಯಾತ್ರಿಕನ ಜೊತೆ ಬೇರೆ ಊರಿಗೆ ಬಂದರು. ಅವರು ಆಸ್ಪತ್ರಯೆ ಸ್ವಲ್ಪ ದೂರದಲ್ಲಿ ಕಾರು ನಿಲ್ಲಿಸಿ ನಾವು ಇಲ್ಲಿಂದ ಹೋಗುತ್ತೇವೆ ಎಂದು ಹೇಳಿ ಹೊರಟುಬಿಟ್ಟರು. ಅವರು ನನ್ನಿಂದ ಏನೋ ವಿಷಯವನ್ನು ಮುಚ್ಚಿಡುತ್ತಿದ್ದಾರೆ ಎಂದು ಅನುಮಾನದಿಂದ ಅವರಿಬ್ಬರನ್ನು ಹಿಂಬಾಲಿಸಿ ಹೋದಾಗ ಆ ಮಕ್ಕಳು ಆಸ್ಪತ್ರೆಗೆ ಹೋದರು. ಆಗ ಏನೂ ತಿಳಿಯದ ಯಾತ್ರಿಕನು ಆಸ್ಪತ್ರೆಯಲ್ಲಿದ್ದ ನರ್ಸ್‌ಗೆ ಕೇಳಿದಾಗ ಅವರಿಬ್ಬರು ಎಲ್ಲಿ ಹೋಗುತ್ತಿದ್ದಾರೆ  ಎಂದು ಕೇಳಿದಾಗ ಅವರ ಬಾಲ್ಯದ ನೋವು, ಅಪಘಾತದ ವಿಷಯಗಳನ್ನು ಹೇಳುತ್ತಾಳೆ. ಕೊನೆಗೆ ಇದನ್ನು ಕೇಳಿದ ಯಾತ್ರಿಕನು ತಾನು ಸಹಾಯ ಮಾಡಲು ಇಚ್ಛಿಸುತ್ತಾನೆ. 'ಇಲ್ಲಿ ಮಕ್ಕಳ ಅನ್ಯೋನ್ಯತೆ ಮತ್ತು ಅಕ್ಕನ ಮೇಲಿನ ಪ್ರೀತಿ ಹಾಗೂ ಅವರ ಜವಾಬ್ದಾರಿಯನ್ನು ಕಾಣಬಹುದಾಗಿದೆ.'

***

# ಗತಕಾಲ

✍: **ಶ್ರೇಯಾ,** I B1

**ವಿ**ಶಾಲವಾದ ಬಾನು, ಮುಂಜಾನೆಯ ಮಂಜು
ಸಾಗರದಾಚೆಯ ಗಡಿಯಲ್ಲಿ ಮೈಮರೆತಿರಲು
ಆಗ ತಾನೇ ಎದ್ದ ಸೂರ್ಯನ ನೋಡುತಲಿ
ಗತಕಾಲವೊಮ್ಮೆ ಉದಯಿಸಿದಂತಾಯಿತು.

ಆದರೂ, ಆಗಿರಲಿಲ್ಲ ಎಂದೂ
ಪ್ರೀತಿ–ವಿಶ್ವಾಸಗಳಿಗೆ ಕೊರತೆ
ಅದಾಗಿತ್ತು ತುಂಬಿ ತುಳುಕುವ ಒರತೆ
ಕಷ್ಟ–ಕಾರ್ಪಣ್ಯಗಳ ನಡುವೆ, ಅಂಕು–
ಡೊಂಕಾದ ದಾರಿ,
ಇದೇ ಜೀವನ ಎಂದು ಹೇಳುತ್ತಿತ್ತು ಸಾರಿ.

ನೆರಳು ಬೆಳಕಿನ ಆಟದಲ್ಲಿ
ಜೀವನ ನಡೆಸಿತ್ತು ತಾಕಲಾಟ
ನೊಂದು–ಬೆಂದು ಬಸವಳಿಯುತ್ತಿರಲು
ನಡುವೊಮ್ಮೆ ಆನಂದದ ಹಾರಾಟ
ಈ ಆಟ–ಹಾರಾಟಗಳ ನಡುವೆ
ಹಲವರ ಜೀವಕ್ಕಾಗಿತ್ತು ಪರದಾಟ.

ಕಷ್ಟವೇ ಸುಖದ ಮೊದಲ್ಹೆಜ್ಜೆಯೆಂಬಂತೆ
ಬದುಕೀಗ ಹಾಲ್ಜೇನಿನ ಉದ್ಯಾನ
ಕಹಿಮೋಡ ತಿಳಿಯಾಗಿ, ಬಾಳೆಲ್ಲಾ ನಂದನ
ಇಂದುದಯಿಸಿದೆ ನವೋದಯ
ಶುಭಕಾಮನೆಗಳ ಶುಭೋದಯ
ಆಗಿದೆ ಸೂರ್ಯನ ಹೊಸ ಉದಯ
ಅದು ಚೆಲ್ಲಿದೆ ಧರೆಗೆ ನವಪ್ರಭೆಯ.

***

# ಸುಖವೆಂಬ ಪಕ್ಷಿ

✍: ಪವಿತ್ರಾ, I PUC Arts

**ಬ**ಹಳ ಹಿಂದೆ ಟಿಬೆಟ್ ಒಂದು ಬಡ ದೇಶವಾಗಿತ್ತು. ಮಣ್ಣಿನಲ್ಲಿ ಏನೂ ಬೆಳೆಯುತ್ತಿರಲಿಲ್ಲ. ಕೆರೆ, ನದಿಗಳು ಇರಲಿಲ್ಲ. ಮರಗಿಡಗಳೂ ಇರಲಿಲ್ಲ. ಜನರು ಬಹಳ ಕಷ್ಟದಿಂದ ಜೀವಿಸುತ್ತಿದ್ದರು. ಸುಖವೆಂಬುದು ಅವರಿಗೆ ಇರಲೇ ಇಲ್ಲ.

ಈ ಜನರು 'ಸುಖವೆಂಬುದು ಒಂದು ಪಕ್ಷಿ. ಅದು ಬಹು ದೂರದ ಪರ್ವತದ ಮೇಲೆ ಇರುತ್ತದೆ. ಎಲ್ಲಿ ಹೋಗುವುದೋ ಅಲ್ಲಿ ಸುಖವಿರುತ್ತದೆ' ಎಂದು ನಂಬಿದ್ದರು. ಈ ಜನರೆಲ್ಲ ಒಂದು ಸಲ ಒಂದು ಕಡೆ ಸೇರಿದರು. ಬಹಳ ಬುದ್ಧಿವಂತನಾದ ವಾಂಗ್ ಎಂಬ ಹುಡುಗನನ್ನು ಸುಖದ ಪಕ್ಷಿಯನ್ನು ಹುಡುಕಲು ಕಳುಹಿಸಿದರು. ಊರಿನ ಮಹಿಳೆಯರು ರೊಟ್ಟಿಗಳನ್ನು ಕಟ್ಟಿಕೊಟ್ಟರು. ತಮ್ಮ ಸಂಪ್ರದಾಯದಂತೆ ವಾಂಗ್‌ನ ತಲೆಯ ಮೇಲೆ ಬಾರ್ಲಿ ಕಾಳುಗಳನ್ನು ಎರಚಿದರು.

ವಾಂಗ್ ಪೂರ್ವ ದಿಕ್ಕಿನತ್ತ ನಡೆದ. ಎಷ್ಟೋ ದಿನಗಳು ನಡೆದ ನಂತರ ಎದುರಿಗೆ ಪರ್ವತವೊಂದು ಕಂಡಿತು. ಆಗ ಕಪ್ಪು ಗಡ್ಡದ ರಾಕ್ಷಸನೊಬ್ಬ ಎದುರಿಗೆ ಕಾಣಿಸಿಕೊಂಡ. "ಯಾರಲ್ಲಿ? ಎಲ್ಲಿಗೆ ಹೋಗುತ್ತಿರುವಿ?" ಎಂದು ಕೂಗಿದ.

ವಾಂಗ್ ತಾನು ಬಂದ ಉದ್ದೇಶವನ್ನು ಹೇಳಿದ. ರಾಕ್ಷಸ ನಗುತ್ತ "ಇಷ್ಟು ಚಿಕ್ಕ ಹುಡುಗನಾದ ನಿನಗೆ ಸುಖದ ಪಕ್ಷಿ ಸಿಗುವುದೇ? ನಿನಗೆ ಆ ಪಕ್ಷಿ ಬೇಕಾದರೆ ನೀನು ಒಬ್ಬ ತಾಯಿಯನ್ನು ಕೊಲ್ಲಬೇಕು. ಇದಕ್ಕೆ ನೀನು ಒಪ್ಪದಿದ್ದರೆ ನೂರಾರು ಯೋಜನಗಳಷ್ಟು ನಡೆಯಬೇಕು" ಎಂದ.

ವಾಂಗ್ ಹೇಳಿದ, "ನನಗೂ ಒಬ್ಬ ತಾಯಿ ಇದ್ದಾಳೆ. ನಾನು ಅವಳನ್ನು ಬಹಳ ಪ್ರೀತಿಸುತ್ತೇನೆ. ಹೀಗಿರುವಾಗ ಬೇರೆ ಒಬ್ಬ ತಾಯಿಯನ್ನು ನಾನು ಕೊಲ್ಲಲಾರೆ."

ರಾಕ್ಷಸನಿಗೆ ಬಹಳ ಸಿಟ್ಟು ಬಂತು. 'ಉಫ್' ಎಂದು ಬಾಯಿಯಿಂದ ಗಾಳಿಯನ್ನು ಊದಿದ. ಕೂಡಲೇ ವಾಂಗ್ ನಡೆಯಬೇಕಿದ್ದ ದಾರಿಯೆಲ್ಲ ಚೂಪಾದ ಕಲ್ಲುಗಳಿಂದ ತುಂಬಿತು. ಇದರಿಂದ ಹೆದರಿದ ವಾಂಗ್ ಮತ್ತೆ ನಡೆಯತೊಡಗಿದ. ಚೂಪಾದ ಕಲ್ಲುಗಳು ಅವನ ಕಾಲುಗಳನ್ನು ಚುಚ್ಚಿದವು. ಪಾದವೆಲ್ಲಾ ಕತ್ತರಿಸಿ ರಕ್ತಮಯವಾಯಿತು. ಆದರೂ ವಾಂಗ್ ಅಂಜದೇ ನಡೆಯತೊಡಗಿದ. ಕೊನೆಕೊನೆ ನಡೆಯಲಾಗದೇ ತೆವಳತೊಡಗಿದ. ಆಗ ಅವನ ಮೈಕೈ ಎಲ್ಲಾ ರಕ್ತಮಯವಾಯಿತು.

ಹೀಗೆ ಬಲು ದೀರ್ಘಕಾಲ ನಡೆದ ನಂತರ ಎದುರಿಗೊಬ್ಬ ಕಂದು ಗಡ್ಡದ ರಾಕ್ಷಸ ಕಾಣಿಸಿದ. ಅವನು "ಯಾರಲ್ಲಿ?" ಎಂದು ಕೂಗಿದ. ವಾಂಗ್ ತಾನು ಬಂದ ಉದ್ದೇಶವನ್ನು ಹೇಳಿದ. ಆಗ ಆ ರಾಕ್ಷಸ ಹೇಳಿದ, "ನಿನಗೆ ಆ ಸುಖದ ಪಕ್ಷಿ ಸಿಗುವುದಿಲ್ಲ. ನಿನಗದು ಬೇಕಿದ್ದರೆ ನೀನು ಒಬ್ಬ ಮುದುಕನನ್ನು ಕೊಲ್ಲಬೇಕು. ಇಲ್ಲದಿದ್ದರೆ ಉಪವಾಸದಿಂದ ಸಾಯಬೇಕಾಗುತ್ತದೆ."

ವಾಂಗ್ ಹೇಳಿದ, "ನನಗೂ ಒಬ್ಬ ಅಜ್ಜ ಇದ್ದಾನೆ. ಹೀಗಿರುವಾಗ ಬೇರೆ ಅಜ್ಜನನ್ನು ಕೊಲ್ಲಲಾರೆ. ನೀನು ಯಾವ ಶಿಕ್ಷೆ ಕೊಟ್ಟರೂ ಸರಿ."

ಆಗ ಆ ರಾಕ್ಷಸ 'ಉಫ್' ಎಂದು ಗಾಳಿಯನ್ನು ಊದಿದ. ಕೂಡಲೇ ವಾಂಗ್‌ನ ರೊಟ್ಟಿಯ ಗಾಂಟು ಹಾರಿಹೋಯಿತು. ಎದುರಿನ ದಾರಿಯಲ್ಲಿದ್ದ ಎಲ್ಲಾ ಗಿಡಮರಗಳು ಕಣ್ಮರೆಯಾದವು. ಅಲ್ಲಲ್ಲಿ ಇದ್ದ ತೊರೆಗಳೆಲ್ಲ ಬತ್ತಿಹೋದವು. ಆದರೆ ವಾಂಗ್ ಹೆದರಲಿಲ್ಲ. ಮತ್ತೆ ನಡೆಯತೊಡಗಿದ. ಎಷ್ಟು ಕಾಲದವರಗೆ ಹೀಗೇ ನಡೆದನೋ ಗೊತ್ತಿಲ್ಲ, ಹಸಿವೆಯಿಂದ ಬಳಲಿದ. ಬಾಯಾರಿಕೆಗಳಿಂದ ಒಣಗಿದ. ಆದರೂ ನಡೆಯತೊಡಗಿದ.

ಕೊನೆಗೊಮ್ಮೆ ಅವನಿಗೆ ಕಣ್ಣು ಕತ್ತಲು ಬಂತು. ಪ್ರಜ್ಞೆತಪ್ಪಿ ಬೀಳುವಷ್ಟರಲ್ಲಿ ಬಿಳಿಯ ಗಡ್ಡದ ರಾಕ್ಷಸನೊಬ್ಬ ಕಾಣಿಸಿಕೊಂಡ. "ಯಾರದು? ಏನು ಬೇಕು ನಿನಗೆ?" ಎಂದು ಅವನು ಕೇಳಿದ. ವಾಂಗ್ ತನ್ನ ಉದ್ದೇಶವನ್ನು ತಿಳಿಸಿದ. ಆಗ ಆ ರಾಕ್ಷಸ ನೀನು ಒಬ್ಬ ಮನುಷ್ಯನ ಕಣ್ಣುಗಳನ್ನು ಚುಚ್ಚಬೇಕು. ಇದಕ್ಕೆ ನೀನು ಒಪ್ಪದಿದ್ದರೆ ನೀನೇ ಕುರುಡನಾಗುತ್ತಿಯಾ" ಎಂದ.

ವಾಂಗ್ ಉತ್ತರಿಸಿದ, "ನಾನು ಆ ಕೆಲಸವನ್ನು ಮಾಡುವುದಿಲ್ಲ." ಆ ರಾಕ್ಷಸ 'ಉಫ' ಎಂದು ಗಾಳಿ ಊದಿದ. ಕೂಡಲೇ ವಾಂಗ್ ಕುರುಡನಾದ. ವಾಂಗ್ ಈಗ ತೆವಳುತ್ತಾ ಮುಂದುವರೆದ. ಪರ್ವತದ ಶಿಖರವನ್ನು ತಲುಪಿದ. ಆಗ ಅವನಿಗೆ ಸುಖದ ಹಕ್ಕಿಯ ಇಂಪಾದ ದನಿ ಕೇಳಿಸಿತು.

"ಮಗೂ, ನೀನು ನನಗಾಗಿ ಬಂದೆಯಾ?"

ವಾಂಗ್ ಸಂತಸದಿಂದ ಉತ್ತರಿಸಿದ, "ಹೌದು! ನನ್ನ ಜನರೆಲ್ಲ ನಿನಗಾಗಿ ಹಗಲುರಾತ್ರಿ ಹಂಬಲಿಸುತ್ತಿದ್ದರೆ."

ಆ ಹಕ್ಕಿ ವಾಂಗ್‌ನ ಹೆಗಲ ಮೇಲೆ ಕುಳಿತು ಹಾಡಿತು. ಆಗ ವಾಂಗ್‌ನ ಕಣ್ಣಿನ ದೃಷ್ಟಿ ಮರಳಿ ಬಂದಿತು. ಅವನ ಮೈಕೈಗಾಯಗಳೆಲ್ಲ ಮಾಯವಾದವು. ಪಕ್ಷಿ ಅವನಿಗೆ ಸೊಗಸಾದ ಆಹಾರವನ್ನು ಕೊಟ್ಟಿತು. ನಂತರ ಇಬ್ಬರೂ ಹಾರುತ್ತಾ ವಾಂಗ್‌ನ ಹಳ್ಳಿಯ ಸಮೀಪದ ಗುಡ್ಡದ ತುದಿ ತಲುಪಿದರು. ಪಕ್ಷಿ ವಾಂಗ್‌ಗೆ ಕೇಳಿ, "ನಿಮ್ಮ ಜನರಿಗೆ ಬೇಕಿರುವುದು ಏನು?"

ವಾಂಗ ಹೇಳಿದ, "ನಮಗೆ ಸುಖ ಸಂತೋಷ ಬೇಕು. ಎಲ್ಲೆಲ್ಲೂ ಗಿಡಮರಗಳು ಬೇಕು."

ಪಕ್ಷಿ ಗುಡ್ಡದ ತುದಿ ಏರಿ ಹಾಡಿತು. ಅದರ ಮೊದಲ ಹಾಡು ಮುಗಿದಾಗ ಮುಗಿಲಲ್ಲಿ ಮೋಡಗಳು ತೇಲಿದವು. ಸೂರ್ಯರಶ್ಮಿ ಬೆಳಗಿತು. ಅದರ ಎರಡನೆಯ ಹಾಡು ಮುಗಿದಾಗ ಗುಡ್ಡದ ಬುಡದಿಂದ ಎಂಟು ದಿಕ್ಕುಗಳಲ್ಲಿಯೂ ಸುಂದರವಾದ ಕಾಡು ಪ್ರತ್ಯಕ್ಷವಾಯಿತು. ಪ್ರಾಣಿಪಕ್ಷಿಗಳು ಹರ್ಷದಿಂದ ನಲಿದವು. ಹೂವುಗಳು ಅರಳಿದವು. ಹಣ್ಣುಗಳಿಂದ ರೆಂಬೆಕೊಂಬೆಗಳು ತೂಗಿಬಿದ್ದವು. ಪಕ್ಷಿಯ ಮೂರನೆಯ ಹಾಡು ಮುಗಿದಾಗ ಅಲ್ಲಲ್ಲಿ ಕೆರೆ–ತೊರೆ–ಸರೋವರಗಳು ಕಾಣಿಸಿಕೊಂಡವು. ನೀರ ಮೇಲೆ ಬೀಸಿದ ಗಾಳಿ ತಂಪಾಗಿ ಮೆರೆಯಿತು. ಅಂದಿನಿಂದ ಆ ಪ್ರಾಂತ್ಯದ ಜನರು ಸುಖವಾಗಿ ಬಾಳಿದರು.

***

# ಚಂದ್ರನಿಗೆ ಶಾಪ

✍ : ಭೂಮಿಕಾ ಎಸ್.
I PUC SEBA

**ಒ**ಮ್ಮೆ ಗಣೇಶ ಇಲಿಯ ಮೇಲೆ ಸಂಚಾರ ಮಾಡುತ್ತಾ ಚಂದ್ರಲೋಕಕ್ಕೆ ಬರುತ್ತಾನೆ. ಚಂದ್ರನೋ ಸರ್ವಾಂಗ ಸುಂದರ. ಅವನಿಗೆ ತನ್ನ ಸೌಂದರ್ಯದ ಮೇಲೆ ಅಪಾರ ಮಮತೆ. ವಿಕಟರೂಪನಾದ ಗಣಪನನ್ನು ಕಂಡು ಅಪಹಾಸ್ಯ ಮಾಡುತ್ತಾನೆ. ಜೋರಾಗಿ ನಗುತ್ತಾನೆ. ಗಣಪನಿಗೆ ಅಪಮಾನವಾಗುತ್ತದೆ. ಚಂದ್ರನಿಗೆ ಹೀಗೆ ಶಾಪ ನೀಡುತ್ತಾನೆ. "ಎಲೈ ಚಂದ್ರ! ನೀನು ಸೌಂದರ್ಯ ಮದದಿಂದ ಬೀಗುತ್ತಿದ್ದೀಯಾ. ಮೂರ್ಖ! ಅದಕ್ಕೆ ತಕ್ಕ ಫಲವನ್ನು ಅನುಭವಿಸು. ನಿನ್ನೆಲ್ಲಾ ಗರ್ವ, ಅಜ್ಞಾನಕ್ಕೆ ಕಾರಣವಾದ ಸೌಂದರ್ಯ ಕುಂದಿ ಹೋಗಲಿ. ಭಾದ್ರಪದ ಶುದ್ಧ ಚೌತಿಯಂದು ನಿನ್ನನ್ನು ನೋಡುವವರು ಅಪವಾದಕ್ಕೆ ಗುರಿಯಾಗಲಿ" ಎಂದು ಶಪಿಸುತ್ತಾನೆ. ಶಾಪಗ್ರಸ್ತನಾದ ಕೂಡಲೇ ಚಂದ್ರನ ಅಹಂಕಾರ ಇಳಿದು ಹೋಗುತ್ತದೆ. ಅವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಗಣೇಶನ ಮುಂದೆ ಭಯ–ಭಕ್ತಿಗಳಿಂದ ಕೈಮುಗಿದು ನಿಂತು, "ಸ್ವಾಮಿ, ನನ್ನ ಅಜ್ಞಾನವನ್ನು ಕ್ಷಮಿಸಿಬಿಡು. ನನಗೆ ಕೊಟ್ಟ ಶಾಪವನ್ನು ಹಿಂತೆಗೆದುಕೊಂಡು ನನ್ನನ್ನು ಉದ್ಧರಿಸು" ಎಂದು ಬೇಡಿಕೊಳ್ಳುತ್ತಾನೆ.

ಗಣೇಶ ಚಂದ್ರನನ್ನು ಕ್ಷಮಿಸುತ್ತಾನೆ. "ಚೌತಿಯ ದಿನ ನಿನ್ನನ್ನು ನೋಡಿ ಮಿಥ್ಯಾಪವಾದಕ್ಕೆ ಗುರಿಯಾದವರು ಶುದ್ಧ ಬಿದಿಗೆಯ ದಿನ ನಿನ್ನ ದರ್ಶನ ಮಾಡಿದರೆ ಅಥವಾ ಸ್ಯಮಂತಕ ಮಣಿಯ ಕಥೆಯನ್ನು ಕೇಳಿದರೆ, ಅಂಥವರು ಅಪವಾದದಿಂದ ಮುಕ್ತರಾಗಲಿ" ಎಂದು ಹೇಳುತ್ತಾನೆ.

***

# ದುರಾಸೆಯ ಹಂಡೆಗೆ ಬಿದ್ದ ರಾಜ

✍: ಅನೀಶ್ ಬಿ., I PUC

**ಹೇ**ಮಾಪುರ ಎಂಬುದೊಂದು ಪುಟ್ಟ ರಾಜ್ಯ. ಹೇಮದತ್ತ ಎಂಬ ದೊರೆ ಆ ರಾಜ್ಯದ ರಾಜನಾಗಿದ್ದ. ಅವನ ರಾಜ್ಯದಲ್ಲಿನ ಪ್ರಜೆಗಳು ಸುಖ, ಶಾಂತಿ, ನೆಮ್ಮದಿಯಿಂದ ಬಾಳುತ್ತಿದ್ದರು. ಆ ರಾಜ್ಯದಲ್ಲಿ ಕಿಟ್ಟಣ್ಣ ಎಂಬ ರೈತನು ತನ್ನ ಸಣ್ಣ ಜಮೀನಿನಲ್ಲಿ ಅನೇಕ ಬೆಳೆಗಳನ್ನು ಬೆಳೆದು ಬದುಕು ಕಟ್ಟಿಕೊಂಡಿದ್ದನು.

ಬೇಸಿಗೆಗಾಲ ಬಂದಿತು. ಆ ದಿನ ಸಂಜೆ ಕಿಟ್ಟಣ್ಣನು, ತನ್ನ ಮಕ್ಕಳೊಂದಿಗೆ ಸೇರಿ ನೀರಿನ ಕೊರತೆಯನ್ನು ನೀಗಿಸಲು ಹೊಸ ಬಾವಿಯೊಂದನ್ನು ತೆಗೆಯಲು ಯೋಚಿಸಿದ. ಹೀಗೆ ಬಾವಿಯನ್ನು ತೆಗೆಯುತ್ತಾ ಹೋದಂತೆ ಟಣ್ ಟಣ್ ಎಂದು ಶಬ್ದ ಬರಲು ಪ್ರಾರಂಭಿಸಿತು. ಕಿಟ್ಟಣ್ಣ "ಇದೇನಿರಬಹುದು?" ಎಂದು ಯೋಚಿಸಿ ಮತ್ತೆ ಪಿಕ್ಕಾಸಿಯಿಂದ ಆ ಸದ್ದು ಬಂದ ಕಡೆಗೆ ಹೊಡೆದ. ಈಗ ಅವನಿಗೊಂದು ಆಶ್ಚರ್ಯ ಕಾದಿತ್ತು. ಅದೇನೆಂದರೆ, ಆ ವಸ್ತು ಬಹಳ ದೊಡ್ಡದಾದ ತಾಮ್ರದ ಹಂಡೆಯಾಗಿತ್ತು! ಅದೆಷ್ಟು ದೊಡ್ಡದಾಗಿತ್ತು ಎಂದರೆ, ಒಬ್ಬ ಮನುಷ್ಯ ಆ ಹಂಡೆಯೊಳಗೆ ಇರಬಹುದಾದಷ್ಟು ದೊಡ್ಡ ಹಂಡೆ ಅದಾಗಿತ್ತು! ಕೊಟ್ಟಣ್ಣ ಬಹಳ ಕಷ್ಟಪಟ್ಟು ಆ ಹಂಡೆಯೊಳಗಿದ್ದ ಮಣ್ಣನ್ನು ತನ್ನ ಮಕ್ಕಳೊಂದಿಗೆ ಶುಚಿಗೊಳಿಸಿ ಹಂಡೆಯನ್ನು ಮನೆಗೆ ತೆಗೆದುಕೊಂಡು ಹೋದನು.

ಮನೆಗೆ ಹೋದಾಗ ಕಿಟ್ಟಣ್ಣನ ಹೆಂಡತಿ ಬಹಳ ಆಶ್ಚರ್ಯದಿಂದ ಹಂಡೆಯನ್ನು ನೋಡಿ ಸಂತಸಪಟ್ಟಳು. ಕಿಟ್ಟಣ್ಣ ಮತ್ತು ಮಕ್ಕಳು ಕೈಕಾಲು ತೊಳೆದು ವಿಶ್ರಾಂತಿ ಪಡೆದರು. ವಿಶ್ರಾಂತಿ ಪಡೆದ ನಂತರ ಕಿಟ್ಟಣ್ಣನ ಮಕ್ಕಳು ಲಗೋರಿ ಆಟವಾಡತೊಡಗಿದರು. ಆಟವಾಡುತ್ತಾ ಲಗೋರಿ ಚೆಂಡು ಹಂಡೆಯೊಳಗೆ ಬಿದ್ದೇ ಬಿಟ್ಟಿತು! "ಛೆ! ಇನ್ನು ಈ ಚೆಂಡು ನಮಗೆ ಸಿಗುವುದಿಲ್ಲ" ಎಂದು ನಿರಾಶೆಯಿಂದ ಮಕ್ಕಳು ರಾತ್ರಿ ಮಲಗಿದರು.

ಬೆಳಗ್ಗೆದ್ದು ನೋಡಿದರೆ, ನೂರಾರು ಚೆಂಡುಗಳು ಆ ಹಂಡೆಯಲ್ಲಿದ್ದವು! ಇದನ್ನು ಕಂಡು ಆಶ್ಚರ್ಯಚಕಿತರಾದ ಕಿಟ್ಟಣ್ಣ ಮತ್ತು ಮಕ್ಕಳು, "ಇದೊಂದು ಮಾಯಾ ಹಂಡೆ" ಎಂದುಕೊಂಡು ಕುತೂಹಲದಿಂದ ನೋಡಿದರು. ತಕ್ಷಣ ತಮಗೆ ಬೇಕಾದಷ್ಟನ್ನು ತೆಗೆದುಕೊಂಡರು. ತದನಂತರ ಯಾವುದೇ ದುರಾಸೆಗೆ ಬೀಳದೆ, ತಮಗೆ ಅಗತ್ಯವಿದ್ದಷ್ಟು ದವಸ ಧಾನ್ಯಗಳನ್ನು ಆ ಮಾಯಾ ಹಂಡೆಗೆ ಹಾಕಿ ದಾಸ್ತಾನು ಮಾಡತೊಡಗಿದರು.

ಈ ಮಾಯಾ ಹಂಡೆಯ ವಿಷಯ, ರಾಜ್ಯದ ರಾಜನಾದ ಹೇಮದತ್ತನವರೆಗೂ ತಲುಪಿತು. ದುರಾಸೆಗೆ ಬಿದ್ದ ರಾಜ ಆ ಹಂಡೆಯನ್ನು ತನ್ನ ಸುಪರ್ದಿಗಿಡಲು ಮಂತ್ರಿಯ ಮೂಲಕ ಕಿಟ್ಟಣ್ಣನಿಗೆ ಹೇಳಿ ಕಳುಹಿಸಿದನು. ಮಂತ್ರಿ ಕಿಟ್ಟಣ್ಣನ ಬಳಿ ಬಂದು ರಾಜನ ಆಜ್ಞೆಯನ್ನು ತಿಳಿಸಿದ. ಆದರೆ ಕಿಟ್ಟಣ್ಣ, "ನನ್ನ ಜಮೀನಿಗೆ ಇದು ದೇವರ ರೂಪದಲ್ಲಿ ಬಂದಿದೆ. ಇದನ್ನು ಯಾರಿಗೂ ಕೊಡುವುದಿಲ್ಲ" ಎಂದು ಕೇಳಿ ಕಳುಹಿಸಿದ.

ರೈತನು ಹೇಳಿದ ಮಾತುಗಳೆಲ್ಲವನ್ನೂ ಮಂತ್ರಿ ರಾಜನಿಗೆ ಚಾಚೂತಪ್ಪದೇ ವರದಿ ಮಾಡಿದನು. ರಾಜನು ಕೋಪದಿಂದ ಕೆಂಡಾಮಂಡಲವಾದನು. ಹಂಡೆಯನ್ನು ಪಡೆಯಲೇಬೇಕೆಂಬ ದುರಾಸೆಯಿಂದ ತಾನು ತನ್ನ ಸೈನ್ಯದೊಂದಿಗೆ ಕಿಟ್ಟಣ್ಣನ ಮನೆಗೆ ಬಂದನು. ಕಿಟ್ಟಣ್ಣ ರಾಜನ ಸೈನ್ಯವನ್ನು ನೋಡಿ ದಂಗಾದ. ರಾಜ್ಯದ ಜನತೆ, ರಾಜನ ಸೇನೆಯನ್ನು ನೋಡಲೆಂದು ಕಿಟ್ಟಣ್ಣನ ಮನೆಯ ಬಳಿಗೆ ಬಂದರು. "ರಾಜಾಜ್ಞೆಯನ್ನು ಮೀರಿದರೆ ನಿನಗೆ ಮರಣದಂಡನೆಯೇ ಗತಿ" ಎಂದು ರಾಜ ಕಿಟ್ಟಣ್ಣನಿಗೆ ಬೆದರಿಕೆಯೊಡ್ಡಿದನು. ಕಿಟ್ಟಣ್ಣನು ಜೀವಭಯದಿಂದಲೇ ಆ ಮಾಯಾಹಂಡೆಯನ್ನು ರಾಜನಿಗೆ ಕೊಟ್ಟನು.

ರಾಜನು ಆ ಹಂಡೆಯನ್ನು ಪಡೆದು ಹಿರಿಹಿರಿ ಹಿಗ್ಗುತ್ತಾ ಅರಮನೆಯತ್ತ ತೆಗೆದುಕೊಂಡು ಹೋಗಿ, ತನ್ನ ಸಿಂಹಾಸನದ ಬಳಿಯೇ ಅದಕ್ಕೊಂದು ಜಾಗ ಮಾಡಿದನು. ರಾಜನು ಕುತೂಹಲದಿಂದ ಆ ಹಂಡೆಯೊಳಗೆ ಬಗ್ಗಿ ನೋಡುವ ಭರದಲ್ಲಿ ಆ ಹಂಡೆಯೊಳಗೆ ಬಿದ್ದೇಬಿಟ್ಟನು! ನಂತರ ಸಾವಿರಾರು ರಾಜರು ಆ ಸಿಂಹಾಸನಕ್ಕಾಗಿ ಹಂಡೆಯೊಳಗೆಯೇ ಗುದ್ದಾಡತೊಡಗಿದರು. ಇವರ ಗುದ್ದಾಟಕ್ಕೆ ಮಾಯಾ ಹಂಡೆ ನುಜ್ಜುಗುಜ್ಜಾಗಿ ಒಡೆಯಲಾರಂಭಿಸಿತು. ಮಂತ್ರಿ ರಾಜನನ್ನು ಉಳಿಸುವ ಸಲುವಾಗಿ ಹಂಡೆಯಿಂದ ಹುಟ್ಟಿಕೊಂಡ ರಾಜರ ಮೇಲೆ ತನ್ನ ಸೇನಾ ಬಲದಿಂದ ಯುದ್ಧ ಸಾರಿದನು. ಸೇನೆ ಸಮರದಲ್ಲಿ ವಿಫಲಗೊಂಡಿತು. ರಾಜನ ದುರಾಸೆಯಿಂದಾಗಿ ರಾಜ್ಯದಲ್ಲಿ ಅರಾಜತೆ ಮೂಡಿ, ರಾಜ್ಯ ಪತನಗೊಂಡಿತು. ಹೇಮದತ್ತನು 'ಅತಿ ಆಸೆ ಗತಿ ಕೇಡು' ಎಂಬ ಪಾಠವನ್ನು ಕಲಿಸಿದನು.

❋❋❋

---

# ಪೂರ್ಣಪ್ರಜ್ಞರು

✍ : ಧನುಷ್ ರೆಡ್ಡಿ
II PUC SEBA

**ಕ**ಳೆದ ಎರಡು ವೈಶಾಖ ಮಾಸದಿಂದಲೂ
ನಮ್ಮನ್ನು ಪ್ರೀತಿಯಿಂದ ಹರಸುತ್ತಲೂ
ಪಲ್ಲವಿಯಿಂದ ಅಂತ್ಯದವರೆಗೂ
ನಮ್ಮನ್ನು ಪ್ರಜ್ಞರನ್ನಾಗಿ ಮಾಡಲು
ಶ್ರಮಿಸಿದ ಈ ತೇಜಸ್ವಿ ಗುರುಗಳಿಗೆ
ಎಂತಹ ಗುರುದಕ್ಷಿಣೆ ನೀಡಿದರು ಅಲ್ಲವೇ।

ನಮ್ಮ ಜಯ – ಶುಭಗಳಲ್ಲಿ ಜೊತೆಗಿದ್ದು
ನಮ್ಮ ಬೀಳುಗಳಲ್ಲಿ ಕುಗ್ಗಿಸದೆ
ಸಂಜೀವನಂತೆ ಉತ್ತೇಜಿಸಿ
ವಿಜಯದ ಹಾದಿಯನ್ನು ತೋರಿದ
ಚಂದ್ರಶೇಖರ ಜ್ಯೋತಿಗಳಿವರು।

ರಾಮಕೃಷ್ಣರಂತೆ ನೀತಿ ಶೃತಿಗಳನ್ನು ಕಲಿಸಿ,
ಬಾಲಕ ವನಿತೆಯರೆಂದು ಭೇದ ಮಾಡದೆ
ನಮ್ಮ ಪ್ರಗತಿಗೋಸ್ಕರ ವರ್ಷಪೂರ್ತಿ ದುಡಿದವರಿವರು।

ಇವರೇನಾದರೂ ದೇವಲೋಕದ
ಶಾಲೆಯಲ್ಲಿ ಭೋದಕರಾಗಿದ್ದರೆ
ರಾಧಾಕೃಷ್ಣರು ಲಲ್ಲೆಯ ಬಿಟ್ಟು
ಸುಬ್ರಮಣ್ಯರು ನವಿಲು ಸವಾರಿ ತ್ಯಜಿಸಿ
ನಾಗರತ್ನರು ನಾಗಲೋಕವನ್ನೇ ಮರೆತು
ಸ್ವತಃ ರಾಜೇಶ್ವರಿಯು ತನ್ನ ಮಗ ಗಣೇಶನೊಡನೆ
ಇವರ ಬೋಧನೆಯನ್ನು ಕೇಳಲು ಕೂರುತ್ತಿದ್ದರೋ ಏನೋ।

ಇಂತಹ ಗುರುಗಳು ನಮಗೆ ಸಿಕ್ಕಿದ್ದು
ದೇವಿಯ ಪ್ರಸಾದವೇ ಸರಿ
ನಮ್ಮ ಜೀವನದಲ್ಲಿ ರಶ್ಮಿಯಂತಿರುವ
ಈ ಚರೀಷ್ಟರರಿಗೆ
ಜಯಶಂಕರನು ನಗುವನ್ನು
ಮಹಬಲೇಶ್ವರನು ರಕ್ಷಣೆಯನ್ನು ನೀಡಲೆಂದು
ವಿನಮ್ರವಾಗಿ ಮೊರೆಯಿಡುತ್ತೇನೆ.

❋❋❋

# ವಿನಮ್ರ ಹಣತೆ

✍: ಸಿದ್ಧಿ , I B2 BASCs

**ಬೆ**ಳಕಿನ ವಿಚಾರದಲ್ಲಿ ನಾನೇ ಶ್ರೇಷ್ಠ, ನಾನೇ ಶ್ರೇಷ್ಠ ಅನ್ನುವ ತರ್ಕಗಳು ದಿನೇ ದಿನೇ ದೇವಲೋಕಕ್ಕೆ ಬರತೊಡಗಿದವು. ಸೂರ್ಯ, ಚಂದ್ರ, ನಕ್ಷತ್ರಗಳು ಪ್ರತಿನಿತ್ಯ ಇದೇ ವಿಷಯದ ಬಗ್ಗೆ ಸಂಬಂಧಿಸಿದವರ ಮೂಲಕ ತಮ್ಮನ್ನೇ ಶ್ರೇಷ್ಠರೆಂದು ಗುರುತಿಸಬೇಕು ಅನ್ನುವ ಬಲವಂತ ಹೇರತೊಡಗಿದವು. ಯಾರನ್ನು ತಾನು ಶ್ರೇಷ್ಠನೆಂದು ಗುರುತಿಸಬೇಕೆಂದು ಬ್ರಹ್ಮನಿಗೆ ಗಲಿಬಿಲಿಯುಂಟಾಯಿತು. ಈ ವಿಚಾರದಲ್ಲಿ ಎಲ್ಲರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಿ ತುರ್ತು ಸಭೆ ಕರೆದನು.

ಸಭೆಗೆ ಇಂದ್ರಾದಿಗಳು ಸೇರಿದಂತೆ ಎಲ್ಲಾ ದೇವತೆಗಳು ಹಾಜರಿದ್ದರು. ಸೂರ್ಯ, ಚಂದ್ರ, ಹೀಗೆ ಯಾರ್ಯಾರು ಸ್ಪರ್ಧೆಯಲ್ಲಿದ್ದರೋ ಅವರಿಗೆಲ್ಲಾ ಕರೆ ಹೋಯಿತು. ಎಲ್ಲರೂ ಬಂದು ಸೇರಿದಾಗ ಸಭೆ ಆರಂಭವಾಯಿತು. ಭೂಮಿ ಕಡೆಯಿಂದ ಮಿಂಚುಹುಳ ಸ್ಪರ್ಧೆಗೆ ಹೋಗಿತ್ತು. "ಭೂಮಿಯಲ್ಲಿ ಬೆಳಕಿಗೆ ಪ್ರತಿನಿಧಿ ನೀನು ಒಬ್ಬನೇನಾ, ಮತ್ಯಾರೂ ಇಲ್ಲವೇ, ಹಣತೆ ಯಾಕೆ ಬಂದಿಲ್ಲ" ಅಂತ ಸಭೆಯಲ್ಲಿ ಕೇಳಲಾಯಿತು. ಆ ಮಿಂಚುಹುಳವು, ಹಣತೆಯನ್ನು ನಾನು ಕರೆದೆ, ಆದರೆ ಹಣತೆ, "ನಾನು ಸ್ಪರ್ಧಿಸಲು ಸೂಕ್ತವಾದವನೋ, ಇಲ್ಲವೋ ಗೊತ್ತಿಲ್ಲ. ನೀವು ಹೋಗಿ ಬನ್ನಿ" ಅಂತ ಹೇಳಿ ನನ್ನನ್ನು ಕಳಿಸಿತು ಎಂದಿತು.

ಬ್ರಹ್ಮನಿಗೆ ಈ ಸಭೆಯಲ್ಲಿ ಹಣತೆ ಇರುವುದು ಸೂಕ್ತವೆನ್ನಿಸಿ ತುರ್ತಾಗಿ ಅದನ್ನು ಕರೆಯಿಸಿತು. ಸಭೆಯಲ್ಲಿ ಮೊದಲು ವಾದಿಸುವ ಮತ್ತು ಹಕ್ಕು ಮಂಡಿಸುವ ಅಧಿಕಾರವನ್ನು ಸೂರ್ಯನಿಗೆ ನೀಡಲಾಯಿತು. ಸೂರ್ಯ, "ನನಗೆ ಪ್ರತಿಸ್ಪರ್ಧಿಯೇ ಇಲ್ಲ. ಈ ಸಭೆಯ ಅವಶ್ಯಕತೆಯೂ ಇರಲಿಲ್ಲ. ನಾನು ಇಲ್ಲದೇ ಜಗತ್ತೇ ಇಲ್ಲ. ಜೀವನ ನಡೆಯುವುದು ನನ್ನ ಬೆಳಕಿನಿಂದಲೇ" ಎಂದು ಹೇಳಿ ಅಹಂನಿಂದ ಎಲ್ಲರ ಕಡೆ ನೋಡಿತು. ಆನಂತರ ಚಂದ್ರ, "ಈ ಸೂರ್ಯ ಎಲ್ಲಾ ಕಾಲದಲ್ಲೂ ಇರುವವನಲ್ಲ. ಹಗಲು ಮಾತ್ರ ಅವನ ಕೆಲಸ. ರಾತ್ರಿ ನಾನು ಇಲ್ಲದೇ ಬದುಕಿಲ್ಲ. ಕವಿಗಳಿಗೆ ನನ್ನಷ್ಟು ಸಹಾಯ ಮಾಡಿದವರು ಯಾರೂ ಇಲ್ಲ. ನಾನು ಸೂರ್ಯನಷ್ಟು ಪ್ರಖರವಾಗಿ ಬಿಸಿಲು ನೀಡಿ ಜನರಿಗೆ ತೊಂದರೆ ಕೊಡುವುದಿಲ್ಲ" ಎಂದು ವಾದಿಸಿತು. ನಕ್ಷತ್ರಗಳು, "ಸೂರ್ಯನ ಬೆಳಕು ಹಗಲು ಮಾತ್ರ ಮತ್ತು ಚಂದ್ರ ತಿಂಗಳಲ್ಲಿ ಕೆಲವು ದಿನ ಮಾತ್ರ. ಆದರೆ ನಾವು ರಾತ್ರಿಯಲ್ಲಿ ಯಾವತ್ತೂ ಇರ್ತೀವಿ. ನಮ್ಮ ಬೆಳಕು ಅವರಿಗೆ ಚಿಕ್ಕದಿರಬಹುದು. ಆದರೆ, ಅಷ್ಟರಲ್ಲೇ ಅವರಿಗೆ ಹಾದಿ ತೋರಿಸುತ್ತೇವೆ. ಮಕ್ಕಳಿಗೂ ನಮ್ಮನ್ನು ಕಂಡರೆ ಅಕ್ಕರೆ" ಎಂದು ಹೇಳಿದವು. ಮಿಂಚುಹುಳ ಕೂಡ, "ನಾನು ಸಣ್ಣವನಾದರೂ ಯಾರ ಸಹಾಯವಿಲ್ಲದೇ ಇಡೀ ಕತ್ತಲೆಯಲ್ಲಿ ಒಂದು ಬೆಳಕಿನ ಸೊಬಗು ಮೂಡಿಸುವೆ" ಎಂದು ಹೇಳಿತು.

ತನ್ನ ವಾದ ಮಂಡಿಸಲು ಮುಂದಾದ ಹಣತೆ "ನನಗೆ ವಾದ ಮಂಡಿಸಲು ಆಸೆ ಇಲ್ಲ. ನಾನು ನನ್ನ ಕೆಲಸ ಮಾಡುತ್ತಿದ್ದೇನೆ. ನನ್ನನ್ನು ನಾನು ಸುಟ್ಟುಕೊಂಡು ಬೆಳಕು ನೀಡುವುದರಲ್ಲಿ ನನಗೆ ಖುಷಿ ಇದೆ. ಅದು ಕೇವಲ ಸ್ವಲ್ಪವೇ ಬೆಳಕಾಗಲಿ, ನನ್ನನ್ನು ನಂಬಿ ಹಚ್ಚಿದವರಿಗೆ ನಾನು ಮೋಸ ಮಾಡುವುದಿಲ್ಲ. ಅವರು ಬಯಸುವವರೆಗೂ ಬೆಳಕು ಕೊಡುತ್ತೇನೆ. ಅವರು ಬೇಡವೆಂದರೆ ನನ್ನ ಬೆಳಗುವಿಕೆ ನಿಲ್ಲಿಸುತ್ತೇನೆ. ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ ಬೇಡವೆಂದರೆ ನಿಲ್ಲಿಸಿಯಾರೆ? ಜನರಿಗೆ ಬೇಕೋ ಬೇಡವೋ ಗೊತ್ತಿಲ್ಲ. ತಮ್ಮ ಪಾಡಿಗೆ ತಾವು ಉರಿಯುತ್ತಲೇ ಇರುತ್ತಾರೆ. ನಾನು ಇಲ್ಲದೇ ಹೋಗಿದ್ದರೆ ಮನುಷ್ಯರ ಜಗತ್ತು ಹೇಗಿರುತ್ತಿತ್ತು ಎಂದು ಊಹಿಸಿ, ಆದರೆ ಅದರಲ್ಲಿ ನನಗೆ ಹೆಗ್ಗಳಿಕೆ ಇಲ್ಲ. ಅದು ನನ್ನ ಕೆಲಸ. ನನ್ನ ಪಾಡಿಗೆ ನಾನು ಉರಿದು ಬೆಳಕು ನೀಡುವುದು ನನ್ನ ಕರ್ತವ್ಯ. ಕರ್ತವ್ಯದಲ್ಲಿ ಶ್ರೇಷ್ಠತೆಯ ಲೆಕ್ಕ ಹಾಕುವುದು ನನಗೆ ಸರಿ ಬರುವುದಿಲ್ಲ. ಅದಕ್ಕಾಗಿ ನಾನು ಮೊದಲೇ ಸಭೆಗೆ ಬಂದಿರಲಿಲ್ಲ. ಕ್ಷಮಿಸಿ" ಎಂದು ಕೈ ಮುಗಿಯಿತು.

ಹಣತೆಯ ಮಾತು ಮುಗಿಯುತ್ತಲೇ ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿದರು. ಆಗ ಬ್ರಹ್ಮ "ಯಾರು ಶ್ರೇಷ್ಠರು ಎಂಬುದನ್ನು ನಾನು ತೀರ್ಮಾನಿಸುವ ಅಗತ್ಯವಿಲ್ಲ. ಇಡೀ ಸಭೆಯೇ ಅದನ್ನು ಗುರುತಿಸಿದೆ. ಶ್ರೇಷ್ಠತೆ ಬರುವುದು ಬರೀ ಬಲದಿಂದಲ್ಲ. ತನ್ನ ಶಕ್ತಿಯಿಂದಲ್ಲ. ಅದರ ಜೊತೆಗೆ ನಡವಳಿಕೆಯಿಂದಲೂ. ಸಣ್ಣ ಬೆಳಕು ಕೊಟ್ಟರೂ ಹಣತೆಯ ವ್ಯಕ್ತಿತ್ವ ಗುರುತರವಾದದ್ದು" ಎಂದನು. ಎಲ್ಲರೂ ಹಣತೆಗೆ ಜಯಕಾರ ಹಾಕಿದರು. ಸೂರ್ಯ, ಚಂದ್ರ, ನಕ್ಷತ್ರಗಳಿಗೆ ತಮ್ಮ ತಪ್ಪಿನ ಅರಿವಾಯಿತು.

***

# ಹಣೆಬರಹ

✍ : ಶ್ರೇಯಾ
I PUC SEBA

**ಒಂ**ದಾನೊಂದು ಕಾಲದಲ್ಲಿ ಸುವರ್ಣಗಿರಿ ಎಂಬ ರಾಜ್ಯದಲ್ಲಿ ಚಂದ್ರಸೇನನೆಂಬ ರಾಜನು ಆಳುತತ್ತಿದ್ದನು. ಆತನು ದಾನ, ಧರ್ಮ, ಪೂಜೆ ಪುನಸ್ಕಾರಗಳಿಗೆ ಪ್ರಖ್ಯಾತನಾಗಿದ್ದನು. 'ನನ್ನ ರಾಜ್ಯದಲ್ಲಿ ಬಡವರೇ ಇರಬಾರದು. ಎಲ್ಲರೂ ಸುಖಸೌಭಾಗ್ಯಗಳಿಂದ ಕೂಡಿರಬೇಕು' ಎಂಬ ಭಾವನೆ ಹೊಂದಿ ತನ್ನ ಪ್ರಜೆಗಳನ್ನು ಮಕ್ಕಳಿಗಿಂತ ಹೆಚ್ಚಾಗಿ ಕಾಣುತ್ತಿದ್ದನು. ಆಗಾಗ ಸಂಜೆಯ ವೇಳೆ ಮಂತ್ರಿ ಸುಗುಣಾನಂದನೊಡನೆ ವಾಯು ವಿಹಾರಕ್ಕೆ ಹೋಗುತ್ತಿದ್ದನು.

ಒಂದು ದಿನ ಹೀಗೆ ಹೋಗುತ್ತಿರುವಾಗ ಸಂಜೆ ಮುಗಿದು ಕತ್ತಲಾಗುತ್ತ ಬಂತು. "ಮಂತ್ರಿಗಳೇ ಬೇಗ ರಾಜಧಾನಿ ಸೇರೋಣ. ಕುದುರೆಯನ್ನು ವೇಗವಾಗಿ ಓಡಿಸಿ" ಎಂದು ಸೂಚಿಸಿದನು. ಕೊಂಚ ದೂರ ಹೋಗುವುದರಲ್ಲಿ ರಾಜನು ಕುದುರೆಯನ್ನು ನಿಲ್ಲಿಸಿ, "ಮಂತ್ರಿಗಳೇ, ಕತ್ತಲಾಗುತ್ತಾ ಬಂದಿದ್ದರೂ ಕುಟೀರದ ಮುಂದೆ ತೋಟದ ಕೆಲಸ ಮಾಡುತ್ತಿರುವ ವಿಪ್ರ ಯಾರು?" ಎಂದು ಕೇಳಿದನು. ಆಗ ಮಂತ್ರಿಯು, "ಆತ ಶೇಷ ಶರ್ಮನೆಂಬ ಪ್ರಖ್ಯಾತ ಪಂಡಿತ, ಶ್ರಮಜೀವಿ" ಎಂದನು.

"ನಮ್ಮ ರಾಜ್ಯದಲ್ಲಿ ಆತ ಏಕೆ ಇಷ್ಟು ಕಷ್ಟಪಡಬೇಕು? ಅರಮನೆಗೆ ಕರೆಸಿ ಬೇಕಾದ್ದನ್ನು ಕೊಡಿ" ಎಂದನು.

"ಕ್ಷಮಿಸಿ ಮಹಾರಾಜ, ಆತ ಮಹಾ ಆತ್ಮ ಗೌರವಿ. ಯಾರಿಂದ ಏನೂ ಬೇಡುವುದಿಲ್ಲ. ಯಾರ ಸಹಾಯವನ್ನೂ ಬಯಸುವುದಿಲ್ಲ. ಕಾಯಕ ಮಾಡಿ ಹೆಂಡತಿ ಮಕ್ಕಳನ್ನು ಪೋಷಿಸುತ್ತಿದ್ದಾನೆ" ಎಂದು ಮಂತ್ರಿ ಉತ್ತರಿಸಿದನು.

"ಸರಿ ನಡೆಯಿರಿ, ಇದಕ್ಕೆ ನಾವೇ ಒಂದು ಉಪಾಯ ಮಾಡೋಣ" ಎಂದು ಇಬ್ಬರೂ ಹೊರಟರು.

ಮಾರನೆಯ ದಿನ ಶೇಷ ಶರ್ಮನ ತೋಟದಲ್ಲೊಂದು ಚೀಲ ಇತ್ತು. ಅದರ ತುಂಬಾ ಚಿನ್ನದ ನಾಣ್ಯಗಳಿದ್ದವು. ಕೂಡಲೇ ಆತ ಅದನ್ನು ಕೈಯಲ್ಲಿ ಹಿಡಿದು ರಾಜ ದರ್ಬಾರಿಗೆ ನಡೆದ. "ಮಹಾಪ್ರಭು, ನನ್ನ ತೋಟದಲ್ಲಿ ಚಿನ್ನದ ನಾಣ್ಯಗಳಿರುವ ಈ ಚೀಲ ಸಿಕ್ಕಿದೆ. ಯಾರದೋ ಏನೋ ವಿಚಾರಣೆ ನಡೆಸಿ ಅವರಿಗೆ ತಲುಪಿಸಿ" ಎಂದು ಹೇಳಿ ಹೊರಡಲನುವಾದ.

ಆಗ ರಾಜನು, "ಅದು ಯಾರದೇ ಆಗಲಿ, ನಿಮ್ಮ ತೋಟದಲ್ಲಿ ಸಿಕ್ಕಿದೆ. ನೀವೇ ಅನುಭವಿಸಿ" ಎಂದನು. ಆಗ ಶೇಷ ಶರ್ಮ, "ಕ್ಷಮಿಸಿ ಮಹಾಪ್ರಭು. ನಿತ್ಯ ನನ್ನ ತೋಟಕ್ಕೆ ಅನೇಕ ಹಕ್ಕಿಗಳು ಬರುತ್ತವೆ. ನವಿಲು, ಜಿಂಕೆಗಳು ಬರುತ್ತವೆ. ಅವು ನಮ್ಮದೆಂದರೆ ದ್ರೋಹವಾಗುವುದಿಲ್ಲವೇ? ಅನೇಕ ಮಂದಿ ದಾರಿಹೋಕರು ನಮ್ಮ ತೋಟದ ಹಣ್ಣು ಹಂಪಲು ತಿಂದು ಹೋಗುತ್ತಾರೆ. ಅವರು ನಮ್ಮವರಾಗುತ್ತಾರೋ? ಕ್ಷಮಿಸಿ, ಆ ಹಣ ಯಾರದ್ದೋ, ಅವರಿಗೇ ಕೊಡಿ" ಎಂದನು.

"ನಮ್ಮ ಹಣೆಯಲ್ಲಿ ಬರೆದಿರುವಷ್ಟು ನಮಗೆ ಸಿಕ್ಕಿದೆ. ನಾನು ಅದರಿಂದ ಸುಖವಾಗಿದ್ದೇನೆ" ಎಂದು ವಂದಿಸಿ ಕುಟೀರಕ್ಕೆ ತೆರಳಿದನು. ಮಂತ್ರಿ, "ಪ್ರಭು, ಹಣೆಬರಹ ಬದಲಾಯಿಸಲು ಬರೆದ ಆ ಬ್ರಹ್ಮನಿಂದಲೇ ಸಾಧ್ಯವಿಲ್ಲ" ಎಂದನು.

***

# ಟಿಪ್ಪು ಸುಲ್ತಾನನ ಸತ್ಯತೆ

✍ : ಧನುಷ್ ರೆಡ್ಡಿ
II PUC SEBA

**ಓ**ದುವ ಮುನ್ನ : ಈ ಅಂಕಣದಲ್ಲಿ ನಾನು ಬರೆದಿರುವ ಪ್ರತಿಯೊಂದು ಅಂಶಗಳು ಸತ್ಯತೆಯನ್ನು ಹೊಂದಿದ್ದು, ಒಬ್ಬ ಭಾರತೀಯನಾಗಿ ನನ್ನ ಭಾರತೀಯರಿಗೆ ನಮ್ಮ ಇತಿಹಾಸ ಪುಸ್ತಕಗಳು ಮರೆಮಾಚಿರುವ ಕೆಲವು ಸತ್ಯ ಸಂಗತಿಗಳನ್ನು ತಿಳಿಸಲು ಯತ್ನಿಸಿದ್ದೇನೆ ಹೊರತು ಯಾವುದೇ ಮತ, ಜಾತಿ ಮತ್ತು ಧರ್ಮದ ವಿರುದ್ಧವಾಗಿ ಅಥವಾ ದ್ವೇಷಿಯಾಗಿ ಬರೆದಿಲ್ಲ. ಇತಿಹಾಸದ ಅಂಶಗಳನ್ನು ನಾನು ಎಸ್.ಎಲ್. ಭೈರಪ್ಪನವರ **"ಆವರಣ"** ಎಂಬ ಕಾದಂಬರಿಯಿಂದ ತಿಳಿದುಕೊಂಡು, ನಂತರ ನನ್ನದೇ ಮಾತುಗಳಲ್ಲಿ ರಚಿಸಲು ಯತ್ನಿಸಿದ್ದೇನೆ. ಓದುಗರು ಈ ಅಂಕಣ ಓದಿದ ನಂತರ ಇತಿಹಾಸದ ಬಗ್ಗೆ ಮತ್ತಷ್ಟು ಆಸಕ್ತಿ ಬೆಳೆದರೆ **"ಆವರಣ"** ಕಾದಂಬರಿಯನ್ನು ಓದಿ ಇನ್ನಷ್ಟು ತಿಳಿದುಕೊಳ್ಳಬಹುದು.

ಸುಲ್ತಾನ್ ಫತೇಹಿ ಆಲಿ ಸಾಹೇಬ್ ಟಿಪ್ಪು ಪ್ರಸಿದ್ಧವಾಗಿ ಟಿಪ್ಪು ಸುಲ್ತಾನ್, ಮೈಸೂರ ಹುಲಿ, ಸ್ವಾತಂತ್ರ್ಯ ಹೋರಾಟಗಾರನೆಂದೆಲ್ಲಾ ವೈಭವೀಕರಿಸುತ್ತವೆ. ನಮ್ಮ ಶಾಲೆಯ ಇತಿಹಾಸ ಪುಸ್ತಕಗಳು ನಾವು ನೀವು ಕಲಿತದ್ದು ಇದನ್ನೇ. ಕೇವಲ ಬ್ರಿಟಿಷರ ವಿರುದ್ಧ ಹೋರಾಡಿದ ಎಂಬ ನೆಪಕ್ಕೆ ಅವನನ್ನು ಸ್ವಾತಂತ್ರ್ಯ ಹೋರಾಟಗಾರನೆಂದು ಬಿಂಬಿಸಿದ ಇತಿಹಾಸಕಾರರಿಗೆ, ಲೇಖಕರಿಗೆ ನನ್ನದೊಂದು ಛೀಮಾರಿ. ಟಿಪ್ಪುವಿನ ನಿಜಾಂಶಗಳೇ ಬೇರೆ. ಅವನ ನಿಜಾಂಶಗಳನ್ನು ಮರೆಮಾಚುವ ಕೆಲಸವನ್ನು ನಮ್ಮ ಇತಿಹಾಸಕಾರರು ತುಂಬಾ ನಾಜೂಕಾಗಿ ಮಾಡಿದ್ದಾರೆ. ಟಿಪ್ಪು ಸುಲ್ತಾನ್ ಎಂತಹ ಧರ್ಮಾಂಧನೆಂಬುದನ್ನು ಇತಿಹಾಸವು ಸಾರಿ ಸಾರಿ ಹೇಳುತ್ತದೆ.

ಟಿಪ್ಪುವಿನ ಸತ್ಯತೆಯನ್ನು ಇತಿಹಾಸ ಹೀಗೆ ಬಿಚ್ಚಿಡುತ್ತದೆ. ಟಿಪ್ಪು ರಾಜನಾದ ಮೇಲೆ ಮೈಸೂರಿನ ಆಡಳಿತ ಭಾಷೆಯಾಗಿದ್ದ ಕನ್ನಡ ಭಾಷೆಯನ್ನು ತೆಗೆದು ಫಾರಸಿ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ತಂದನು. ಕಂದಾಯ ಲೆಕ್ಕ ಪುಸ್ತಕಗಳಲ್ಲಿದ್ದ ಹಳೆಯ ಕನ್ನಡ ಪದಗಳ ಬದಲಿಗೆ ಖಾತೆ, ಖಿರ್ದಿ, ಪಹಣಿ, ಗುದಪ್ತಾ ಎಂಬ ಮುಂತಾದ ಹೆಸರುಗಳನ್ನು ಜಾರಿಗೊಳಿಸಿದ. ಹೀಗೆ ಹಲವು ಕಡೆಗಳಲ್ಲಿ ಕನ್ನಡ ಭಾಷೆಯನ್ನು ಅಳಿಸಿ ಹಾಕಲು ಯತ್ನಿಸಿದ. ಈಗಲೂ ಕನ್ನಡ ಪದಗಳ ಬದಲು ಇವೇ ಪದಗಳು ಚಾಲ್ತಿಯಲ್ಲಿವೆ. ಎಷ್ಟೋ ಊರುಗಳ ಹಿಂದೂ ಹೆಸರುಗಳನ್ನು ತೆಗೆದು ಆ ಊರುಗಳಿಗೆ ಇಸ್ಲಾಂ ಹೆಸರುಗಳನ್ನು ಹೇರಿದ, ಬ್ರಹ್ಮಪುರಿಯನ್ನು ಸುಲ್ತಾನ್‌ಪೇಟ್, ಚಿತ್ರದುರ್ಗವನ್ನು ಫಾರ್ರುಕ್ ಯಬ್ ಹಿಸ್ಸಾರ್, ಕೊಡಗನ್ನು ಜಫರಬಾದ್, ದೇವಹಳ್ಳಿಯನ್ನು ಯೂಸುಫಬಾದ್, ದಿಂಡಿಗಲ್ ಅನ್ನು ಖಲೀಲ್‌ಬಾದ್ ಎಂದು ಬದಲಾಯಿಸಿದ. ಟಿಪ್ಪು ಮಾತ್ರವಲ್ಲ ಭಾರತವನ್ನು ಆಕ್ರಮಿಸಿ ಆಳಿದ ಹಲವಾರು ಇಸ್ಲಾಂ ದೊರೆಗಳು ಇದೇ ಕಾರ್ಯವನ್ನು ಮಾಡಿದ್ದರು. ಈಗಲೂ ಕೆಲವೊಂದು ಊರುಗಳ ಹೆಸರುಗಳನ್ನು ಅದೇ ಇಸ್ಲಾಂ ಹೆಸರಿನಿಂದ ಕರೆಯುತ್ತೇವೆ.

(ಗೋಲಂಡ ಹೈದರಾಬಾದ್‌ನ ಮೂಲ ಹೆಸರು)

ಟಿಪ್ಪು ಸುಲ್ತಾನನು ಶ್ರೀರಂಗಪಟ್ಟಣದ ದೇಗುಲ ಕೆಡವಿ ಅಲ್ಲಿ ಮಸೀದಿಯನ್ನು ಕಟ್ಟಿಸಿದ ಎಂಬ ಉಲ್ಲೇಖವು ಇದೆ. ಅವನು ತನ್ನ ಕನಸುಗಳ ಬಗ್ಗೆ ಸ್ವತಃ ಅವನೇ ಫಾರ್ಸಿ ಭಾಷೆಯಲ್ಲಿ ಬರೆದಿದ್ದಾನೆ. ಅವುಗಳು ಈಗಲೂ ಲಂಡನ್ನಿನ ಭಾರತೀಯ ಕಛೇರಿಯಲ್ಲಿವೆ. ಅವರ ಕನಸು ಮುಸ್ಲಿಮರಲ್ಲದ ಸಮಸ್ತರನ್ನು ಮುಸ್ಲಿಮರನ್ನಾಗಿ, ಮುಸ್ಲಿಮೇತರ ರಾಜ್ಯವನ್ನು ಮುಸ್ಲಿಂ ರಾಜ್ಯವನ್ನಾಗಿ ಪರಿವರ್ತಿಸಬೇಕೆಂಬುದಾಗಿತ್ತು. ಮಲಬಾರ್ ಮತ್ತು ಕೊಡಗುಗಳಲ್ಲಿ ಎಷ್ಟೋ ಜನ ಹಿಂದುಗಳನ್ನು ಬಲವಂತವಾಗಿ ಮತಾಂತರಿಸಿದ್ದಾರೆ. ಹಿಂದೂಗಳನ್ನು ಸೆರೆ ಹಿಡಿದು ಇಸ್ಲಾಮಿಗೆ ಮತಾಂತರಿಸುವಂತೆ ಟಿಪ್ಪು ತನ್ನ ಸೇನಾಧಿಕಾರಿಗಳಿಗೆ ಬರೆದ ಎಷ್ಟೋ ಪತ್ರಗಳು ದೊರಕಿವೆ. ಅಷ್ಟೇ ಅಲ್ಲದೆ ಅಫಘಾನ್ ದೊರೆ ಜಮಾನ್ ಶಾಹನಿಗೆ ಮತ್ತು ತುರ್ಕಿಯ ಖಲೀಫನಿಗೆ ಸ್ವತಃ ಟಿಪ್ಪುವೇ ಭಾರತದ ಮೇಲೆ ದಂಡೆತ್ತಿ ಬರುವಂತೆ ಮತ್ತು ಸಮಸ್ತ ಮುಸ್ಲಿಂ ರಾಜ್ಯವನ್ನು ಸ್ಥಾಪಿಸುವಂತೆ ಪತ್ರಗಳನ್ನು ಬರೆದಿದ್ದಾನೆ. ಮೈಸೂರಿನ ಅರಮನೆಯನ್ನು 1796ರಲ್ಲಿ ಲೂಟಿ ಮಾಡುವಾಗ ಅರಮನೆಯ ಗ್ರಂಥಾಲಯದಲ್ಲಿದ್ದ ಗ್ರಂಥಗಳನ್ನು, ತಾಳೋಲೆಯ ಹಸ್ತಪ್ರತಿಗಳಮನ್ನು, ಕಡತಗಳನ್ನು ಕುದುರೆಗಳಿಗೆ ಹುರುಳಿ ಬೇಯಿಸಲು ಇಂಧನವನ್ನಾಗಿ ಉಪಯೋಗಿಸುವಂತೆ ಆಜ್ಞೆ ಮಾಡಿದ್ದ. ಇಷ್ಟೆಲ್ಲಾ ಧರ್ಮಾಂಧನಾಗಿದ್ದ ಟಿಪ್ಪು ಬ್ರಿಟಿಷರ ವಿರುದ್ಧ ಸೋತು ತನ್ನ ಮಕ್ಕಳನ್ನು ಅವರಿಗೆ ಗುಲಾಮರನ್ನಾಗಿ ಒಪ್ಪಿಸಿಬಿಟ್ಟ. ಹಿಂದೂಗಳ ಮೇಲೆ ತಾನು ಮಾಡಿದ ಧೋರಣೆಗೆ ಅವರಲ್ಲಿ ತನ್ನ ಬಗ್ಗೆ ಇದ್ದ ಅಸಮಧಾನವನ್ನು ಶಮನಮಾಡಲು ಶೃಂಗೇರಿ ಮಠಕ್ಕೆ ಕಾಣಿಕೆಯನ್ನು ಕೊಟ್ಟನು.

ಬ್ರಿಟಿಷರ ವಿರುದ್ಧ ಹೋರಾಡಿದನೆಂಬ ಒಂದು ಕ್ಷುಲ್ಲಕ ನೆಪಕ್ಕೆ ಈತನನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನೆಂದು ಒಪ್ಪಲು ನನ್ನ ಮನಸ್ಸು ಎಳ್ಳಷ್ಟು ಒಪ್ಪುವುದಿಲ್ಲ. ಮರಾಠಿಗಳು ನಮಗೆ ಬಲಿಷ್ಟ ಶತ್ರುಪಕ್ಷಗಳಾಗಿದ್ದರು ಎಂದು ಸ್ವತಃ ಬ್ರಿಟಿಷರು ಹೇಳಿಕೊಂಡಿದ್ದರು. ಆದರೆ ಮರಾಠಿಗಳ ಬಗ್ಗೆ ಪುಟ ಪುಟದಗಲದಷ್ಟು ಯಾವ ಇತಿಹಾಸಕಾರರು ಹೊಗಳಲು ಯತ್ನಿಸಲಿಲ್ಲ. ಅಷ್ಟೇ ಅಲ್ಲ ಮುಸ್ಲಿಂ ದೊರೆಗಳು ಭಾರತದ 32 ಸಾವಿರ ದೇವಸ್ಥಾನಗಳನ್ನು ಒಡೆದು ಹಾಕಿದ್ದಾರೆ. ಸೀತಾರಾಮ್ ಗೋಯಲ್‌ರವರ ಹಿಂದೂ ಟೆಂಪಲ್ಸ್ ವಾಟ್ ಹ್ಯಾಪನ್ಡ್ ಟು ದೆಮ್ ಎಂಬ ಪುಸ್ತಕದಲ್ಲಿ ಯಾವ ದೇಗುಲವನ್ನು ಒಡೆಯಲಾಗಿದೆ ಎಂಬುದನ್ನು ಪಟ್ಟಿ ಮಾಡಿದ್ದಾರೆ. ಟಿಪ್ಪು ಸುಲ್ತಾನ್‌ನಿಗೆ ಜಯಂತಿ ಆಚರಣೆ ಬೇರೆ. ಎಲ್ಲಿಯವರೆಗೂ ಜನರು ಇತಿಹಾಸದ ಸತ್ಯತೆಯನ್ನು ಹುಡುಕಿ, ಸಂಶೋಧಿಸಿ, ಓದಲು ಯತ್ನಿಸುವುದಿಲ್ಲವೋ ಅಲ್ಲಿಯವರೆಗೆ ಇತುಹಾಸದ ಸತ್ಯಾತೆಗಳು ಪುಟಗಳ ಮೇಲೆಯೇ ಉಲಿಯುತ್ತವೆ

❋❋❋

# ಕವನಗಳು

✍ : ದೀಕ್ಷಾ
I B SEBA

ಗುರುವಿಗೆ ಬೇಕು ಶಿಷ್ಯನ ಪ್ರೀತಿ
ಮಗುವಿಗೆ ಬೇಕು ಜ್ಞಾನದ ಪ್ರೀತಿ
ದೇವರಿಗೆ ಬೇಕು ಭಕ್ತಿಯ ಪ್ರೀತಿ

ಕವಿಗೆ ಕಲ್ಪನೆ ಇಂಪು
ಕಲಾವಿದನಿಗೆ ಕೆತ್ತನೆ ಇಂಪು
ಹಾಡುಗಾರನಿಗೆ ಧ್ವನಿ ಇಂಪು
ನಮಗೆ ಶಾರದೆ ಕೃಪೆ ಇಂಪು

ಹೂವಿಗೆ ಬೇಕು ಬಳ್ಳಿಯ ಆಸರೆ
ತಾಯಿಗೆ ಬೇಕು ಮಗುವಿನ ಆಸರೆ
ಶಿವನಿಗೆ ಬೇಕು ಭಕ್ತರ ಆಸರೆ
ಭಕ್ತನಿಗೆ ಬೇಕು ಶಿವನ ಅನುಗ್ರಹದ ಆಸರೆ

ಬೀಸುವ ಗಾಳಿಗೆ ದಿಕ್ಕಿಲ್ಲ
ಹರಿಯುವ ನದಿಗೆ ದಿಕ್ಕಿಲ್ಲ
ಓಡುವ ಮೋಡಗಳಿಗೆ ದಿಕ್ಕಿಲ್ಲ
ಕೋಲು ಮಿಂಚಿಗೆ ಆಕಾರವಿಲ್ಲ
ಇದಕ್ಕೆಲ್ಲಾ ಆ ದೇವರ ಅಪ್ಪಣೆ ಸಾಕ್ಷಿಯಾಗಿದೆ

ಬಾಳ ದಾರಿ ಕತ್ತಲೆ ಆದಾಗ
ಅಸೂಯೆಗಳು ತಲೆದೋರಿದಾಗ
ಯಾವ ಕಾರ್ಯ ಪೂರ್ಣ ಆಗಲಾರದಾಗ
ಈಶ್ವರ ಸ್ಮರಣೆ ಒಂದೇ
ನಮಗೆ ಆಧಾರಸ್ತಂಭ ಮಾಡಿಕೊಳ್ಳಿ

ದೇಹಕ್ಕೆ ಆದ ಗಾಯ
ಬೇಗನೆ ವಾಸಿಯಾಗುತ್ತದೆ
ಮನಸ್ಸಿಗೆ ಆದ ಗಾಯ
ಯಾವತ್ತು ವಾಸಿಯಾಗುವುದಿಲ್ಲ.

ಸುಲಭದಾಯಕ ಸುಲಲಿತವಾದರೇ
ನಮ್ಮ ಜೀವನ ಸೊಗಸಾಗಿದ್ದರೇ
ಯಾರೂ ನಮ್ಮನ್ನು ಸುಮ್ಮನೆ ಬಿಡಲ್ಲ
ಜನರಿಗೆ ನಾವು ಚೆನ್ನಾಗಿ ಇರುವುದು ಇಷ್ಟವಿಲ್ಲ

ಉಸಿರು ಉತ್ತಮ ಹಸಿರು ಮಹತ್ತಮ
ಬದುಕು ಸರ್ವೋತ್ತಮ ಜೀವನ ಮಹತ್ತಮ
ಹೃದಯ ಸಂಗಮ ಮನಸ್ಸು ಮಹತ್ತಮ
ಪ್ರೇಮ ಅಂತೂ ಪ್ರೀತಿ ಮಹತ್ತಮ.

ಅರಿವು ಆಕಾಶದಂತೆ
ಯೋಚನೆ ಗಾಳಿಯಂತೆ
ಜ್ಞಾನ ಒಂದು ದೇವರಂತೆ
ತಿಳುವಳಿಕೆಯು ಒಂದು ವರದಾನದಂತೆ

ವಿದ್ಯೇ ವಿನಯಕ್ಕೇ ಸಮ
ಬುದ್ಧಿ ಆಲೋಚನೆಗೇ ಸಮ
ಅಜ್ಞಾನ ಆತಂಕಕ್ಕೆ ಸಮ
ಕಲಿಕೆ ಇವುಗಳೆಲ್ಲಾ ಮೀರಿಸುತ್ತದೆ

ಆಸರೆಯ ಬಾಳಿಗೆ ಆಸರೆಯು
ನಂಬಿಕೆಯ ಬದುಕಿಗೆ ಭರವಸೆಯು
ಪ್ರೀತಿಯ ಜೀವನಕ್ಕೆ ಸ್ಫೂರ್ತಿಯು

ಕಣ್ಣಿಗೆ ಕುರುಡು ಇಲ್ಲ
ಮನಸ್ಸಿಗೆ ಭೇದವಿಲ್ಲ
ಜ್ಞಾನಕ್ಕೆ ಅಂಜಿಕೆ ಇಲ್ಲ
ಪ್ರೀತಿಗೆ ಕೊನೆ ಇಲ್ಲ
ತಾಯಿ ಮುಂದೆ ಯಾವುದೂ ಇಲ್ಲ.

❋❋❋

# English Section

# Galaxies

✍ : **Sanvi S.Shetty,** I B2 BASCs

**G**alaxies are sprawling systems of dust, gas, dark matter and anywhere from a million to a trillion stars that are held together by gravity. Nearly all large galaxies are thought to also contain supermassive black holes at their center. Nature has provided an immensely varied array of galaxies, ranging from faint, diffuse dwarf objects to briliant spiral shaped giants. Virtually, all galaxies appear to have been formed soon after the universe began and they provide space, even into the depths of the farthest reaches penetrated by powerful modern telescopes. Galaxies usually exist in clusters, some of which inturn are grouped into larger clusters that measures hundreds of millions of light-years across. (A light year is the distance traversed by light in one yea, travelling at a velocity og 3,00,000Km/Sec or 650,000,000Miles/Hour). These so called Superclusters are seperated by nearly empty voids and this causes the gross structure of the universe to look somewhat like a network of sheets and chains of Galaxies.

Galaxies differ from one another in shape with varieties resulting from the way in which the systems were formed and subsequently evolved. Galaxies are extremely varied not only in structure but also in the amount of activity observed. Perhaps the most conspicuous activity in galaxies occurs in their nuceli, where evidence suggests that in many cases supermassive objects-probably black holes-lurk. These central black holes apparently formed several billion years ago; they are

now observed forming in galaxies at large distances (and, therefore, because of the time taken by light to travel to earth, at times in the far distance past) as brilliant objects called cruasars.

The existance of galaxies was not recognized until the early 20th century. Since then, however, galaxies have become one of the focal points of astronomical investigation. Before the 20th entury, we did'nt know that galaxies other than the milky way existed; Earlier astronomers had classified them as 'Nebulae,' since they looked like fluzzy clouds. But, in the 1920s, astronomer Edwin Hubble showed that the Andromeda 'Nebula' was a galaxy in its own right. Since it is so far from us, it takes light from Andromeda more than 2.5 million years to bridge the gap. Despite the immense distance, Andromeda is the closest large galaxy to our Milky way, and, it is visible to the naked eye in the Northern hemisphere. In 1936, Hubble debuted a way to classify galaxies, grouping them into four main types: Spiral Galaxies, Lenticular Galaxies, Elliptical Galaxies and Irregular Galaies.

The deeper we look into the cosmos, the more galaxies we see. One 2016 study estimated that the observable universe contains two trillions or two million galaxies. Some of those distant systems are similar to our own Milky way galaxy while others are quite different.

❊❊❊

# Neil Armstrong

✍ : **Priyanka Shetty,** I B2 BASCs

**N**eil Armstrong was born on August 5th, 1980 in Ohio.Armstrong developed an interest in flying at an early age. His love of airplanes grew when he went for his first plane ride in a Tin Goose, at the age of 6. From then on he was fascinated by aviation.

In 1947,Amrstrong entered Pardue University. He began studies in aeronautical Engineering. But in 1949, the United States Navy called him to active duty. Armstrong became a navy pilot and was sent to Korea in 1950, near the start of Korean war. In Korea, he flew 78 combat missions in Navy Panther jets. In 1952, Armstrong returned to Purdue. He earned a bachelor's degree in Aeronautical Engineering there in 1955.

Armstrong was a civilian test pilot assigned to test the X-15 rockt airplane before becoming an astronaut in 1962. He made his first space flight in 1966 on Gemini 8 with David R.Scott. On July 20th, 1969 Armstrong was the first person to set foot on the moon. Along with Buzz Aldrin, he landed the Apollo 11 Lunar Module Eagle on the moon. Upon taking his first steps he said, "That's one small step for a man, one giant leap for mankind." Armstrong is most famous for being the first person to walk on the moon.

Armstrong resigned from the United States Astronaut program in 1970. After his career as an astronaut, he became a professor of aerospace engineering at the University of Cincinati and served as Chairman of the board of Computing Technologies for Aviation, a Company that develops software for flight scheduling. Armstrong died on August 25th, 2012.

❊❊❊

# Journey to the .....

✍ : **Gayathri Upadhya B.R.,** I B2

**T**ravelling is the best medicine when there is a locked life. When we live in a small, isolated location-a cage would perhaps be the best to describe it. We have an area of business and we have an area where we eat the same food and meet the same people. Thirtahalli has become a cage for me. My desire was to go to a trip. I want to meet people who are different from me. I want to see new things and listen to new sounds. I want to travel the whole world. I want to go on a road trip and stop at random places and explore their beauty, run through the woods chasing a butterfly, talk to new people from a different culture and different lifestyle. I want to sit in a park on a bench under the sun. I would like to enjoy every sunrise and sunset, I want to spend hours beside a rushing river, feeling the wind in my hair. I want to cross my boundaries. It has been a long time dream of mine to travel to Ooty and I finally set out to do that. Ooty was a beautiful place. I was just amused to see greenery upto the end. Ooty has cold weather that seeped into my bones and I started shivering violently. I saw green trees with uniform shape. We halted in a restuarant and the in the morning when we decided to see the sunrise, I was just wishing that I could stay there my whole life. I tried to focus on my camera carefuly, hoping to capture the beauty of it. When we went to the tea plantation area we were dressed up according to their culture. After that, returning to the top, it was nearly sunset and the scenery took my breath away. It was as if a small child had found it mother's painting plate and mischievously splashed all the different colours across a canvas. I want to admire nature and wonder at the magic of creation. Then I realised life is not a cage, but it should be wonderous and to be explored and then I took a handful of mud from Ooty because its fragrance is just amazing. I collect a handful of mud from every place I visit. Everyone is a traveller. Some members express their experience and some warmth of heart.

❊❊❊

# Global Warming

✍: **Varsha S.Shetty,** I B2 BASCs

Global warming is a term almost everyone is familiar with. But, its meaning is still not clear to most of us. So, global warming refers to the gradual rise in the overall temperature or the atmosphere of the earth. There are various activities taking place which have been increasing the temperature gradually. Global warming is melting our ice glacier rapidly. This is extremely harmful to the earth as well as to humans. It is quite challenging to control global warming, however, it is not unmanageable. The first step in solving any problem is identifying the cause of the problem. Therefore, we need to understand the cause of global warming that will help us proceed further in solving it. In this essay on Global warming, we will see the causes and solution to global warming.

Global warming has become a grave problem which needs undivided attention. It is not happening because of a single cause but several causes. These causes are both natural causes as well as manmade. The natural causes include the release of greenhouse gases which are not able to escape from earth, causing the temperature to increase. Further, volcanic eruptions are also responsible for global warming. Similarly, methane is also one big issue responsible for global warming. Mining and cattle grazing are very harmful to the environment. One of the most common issues that are taking place rapidly is deforestation. Steps must be taken immediately to stop global warming and make the earth a better place again.

Global warming can be stopped when combined efforts are put in. For that, individuals and government, both have to take steps towards achieving it. We must begin with the reduction of greenhouse gases. They must monitor the consumption of gasoline. Switch to a hybrid car and reduce the release of carbon dioxide. moreover, citizens can choose public transport or carpool together. For instance, when you go shopping, carry your own clothes bag. On the government's part, they must regulate insdustrial waste and ban them for emitting harmful gases in the air. deforestation must be stopped immediately and planting of trees must be encouraged.

In short, all of us must realize the fact that our earth is not well. It needs treatment and we can help it heal. Therefore, every little step, no matter how small, carries a lot of weight and is quite significant in stopping global warming.

❊❊❊

||Aum Namah Shivaya||

# DEATH- An inside story

✍: **Sharan Sheshadri,** II PUC(H) PCMB

**D**eath is the most fundamental question. Yet, people can ignore it, avoid it and just live on in their ignorance simply because all kinds if idiotic stories have been spread in the world in the name of religion.

Many people wonder as to why a body turns cold or becomes heavy after death. These things are explained in detail in Yoga Shastra.

Accoding to Yoga Shastra, the body is made up of Pancha Pranas. They are also called as Pancha Vayu. They are Samana Vayu, Prana Vayu, Udana Vayu, Apana Vayu and Vyana Vayu.

After a person dies, i.e., after a person stops breathing, the Pancha Vayu begins withdrawing themselves from the body. Samana Vayu is incharge of the body. The first things that happens after death is that the body starts cooling down. Due to the difference between the atmospheric and body temperatures is significant, Samana Vayu exits the body first. Within twenty-one to twenty-four minutes after stopping of breath, Samana Vayu exits completely.

Once Samana Vayu starts exiting the body, simultaneously Prana Vayu also starts exiting the body. The respiratory action and thought process will begin to reduce along with the withdrawal of Prana Vayu. Prana Vayu exits the body completely within forty-eight to ninety minutes after the breath stops, depending on the nature of death.

Between six and twelve hours after the breath stops, Udana Vayu exits the body. Once Udana Vayu leaves the body completely, the buoyancy in the body also disappears. Hence the body becomes heavy. The weight does not increase, but you can feel the weight much more simply because Udana Vayu is gone. This is why people feel a big difference between carrying a live person and a carrying a dead person.

Somewhere between eight to eighteen hours after the breath has stopped, Apana Vayu exits the body. Once Apana Vayu starts receding in a major way, sensory aspect of the body is gone. Otherwise even after someone’s breath is gone and they are declared dead, they can still feel the sensations.

Vyana Vayu, which is the preservative nature of Praana, is the slowest to exit. It will continue to do so for upto eleven to fourteen days if the death is because of old age and life becomes feeble. If death occurs due to an accident, when life was still vibrant, unles the body is totally crushed, reverberations of their life will continue from somewhere between forty-eight to ninety days.

For that period, certain processes will continue and there will be some elements of life. During that time, there are things you can do to assist that life. This is the opprtunity that death rituals in the Indian culture attempt to make use of.

❋❋❋

# Origin of the Printing Press

✍ : **Satyashri,** I B2

Johannes Gutenberg was a German blacksmith, goldsmith, printer and publisher who introduced printing to Europe. His invention of mechanical moveble type printing started the printing revolution and is widely regarded as the most important event of modern period.

It played a key role in the development of the Renaissance, Reformation, the age of enlightenment and the scientific revolution and the laid the material basis for the modern knowledge based economy and the spread of learning to the masses.

Gutenberg was the first European to use movable type printing in around 1439. His many contributions to printing are the invention of a process for mass producing movable type; the use of oil based ink, and the use of a wooden printing press similar to the agricultural secure press of the period. His truly special invention was the combination of elements into a practical system which allowed the mass production of printed books and was economically viable for printers and readers alike. His method for making type is traditionally considered to have included a type metal alloy and a hand maid for casting type.

The use of movable type was marked imrovement in the handwritten manuscrip which was the existing method of book production in Europe and upon woodblock printing and revolutionised European book making. Gutenberg's printing technology spread rapidly throughout Europe and throughout the world.

His major work, the Gutenberg bible (also known as the 42 line Bible) has been acclaimed for its high aesthetic and technical quality.

❋❋❋

# Origin of Cell-phone

- Name class

A mobile phone, cellular phone, cell phone, hand phone or hand phone sometimes shortened tp simply mobile , cell or just phone is a portable telephone that can make and receive calls over a radio frequency link that establishes a connection to the switching system of mobile phone operator which provides access to the public switched telephone network. Modern mobile telephone service uses a cellular network architecture called cellular telephone or cell phone in North America. In addition to telephone, digital mobile phone (2G) supports a variety of other services such as text, messaging, MMS, email, Internet access, short range wireless communication, business application, video games and digital photography. Mobile phones offering only these capabilities are known as feature phones; mobile phone which offers greatly advanced computing capabilities are referred to as smart phones.

The development of metal-oxide semi-conductor (MOS), large scale integration (ISI) technology, information on theory and cellular networking led to the development of affordable mobile communication.

1. The first hand held mobile phone was demonstrated by John F. Mitchell and Martin Copper of Motorola in Newyork city in 1973 using a handset weighing kilograms.

2. In 1979, Nippons Telegraph and Telephone (NTT) launched the world's first cellular network in Japan.

3. In 1983 the DynaTAC8000x was the first commercially available handheld mobile phone. From 1983 ro 2014, worldwide phone subscription grew to over seven billion.

4. In the first quarter of 2016, the top smart phone developer worldwide were Samsung, Apple and Huawell.

5. For features phone (slang: dumbphone) as of 2016, the top selling brands were Samsung, Nokia and Alcadel.

Mobile phones are used for priority of purpose such as keeping in touch with family members, for conducting business and in order to have access to a telephone in the event of an emergency. Some people carry more than one mobile phone for different purposes such as for business and personal use. Multiple SIM cards may be used to take advantage of the benefits of different calling plans. Such phones are approved for use by essential workers such as health security and public security workers.

❊❊❊

# Statues in India

✍ : **Varsha S.Shetty,** I B2 BASCs

**Statue of Unity** in India is the world's tallest statue with a height of 182 metres (597 feet) of Vallabhai Patel which is located at Sadhu Bet, Sardar Sarovar Dam in Gujarat. This statue was inaugurated on 31st October, 2018.

**Statue of Equality** in India is the world's second tallest sitting statue with a height of 65.8 metres (216 feet) of Ramanuja which is located at Muchintal, Hyderabad, Telangana. This statue was inaugurated on 5th February 2022.

**Basaveshwara Statue** in India is the tallest statue of Basavanna with a height of 33.83 metres (111 feet) of Basavanna which is located at Gadag, Karnataka. This statue was inaugurated on 27th April 2015.

**Har ki Pauri Shiva Statue** is the statue of Shiva with a of 30.5 metres (100 feet) of Shiva which is located at Haridwar, Uttarakhand. This statue was inaugurated in 2012.

**Statue of Lord Hanuman** is the Chhindwara's tallest statue of Hanuman with a height of 30.8 metres (101 feet), which is located at Chhindwara, Chikli, Madhya Pradesh. This statue was inaugurated in 2018.

**Adinath Bawangaja** is one of the older tallest statues in India with a height of 26 metres (85 feet) of Adinath which is located at Barwani, Madhya Pradesh. This statue was inaugurated in 1100.

**Statue of Mahatma Gandhi** in India is the world's tallest statue of Mahatma Gandhi with a height of 22 metres (72 feet) which is located in Patna, Bihar. This statue was inaugurated in the year 2013.

**Statue of Padmasambhava** in India is the tallest statue of Guru Rinpoche with a height of 37.5 metres (123 feet) which is located in Rewalsar, Himachal Pradesh. This statue was inaugurated in the year 2012.

**Mindroling Monastery Buddha Statue** in India is a statue of Buddha with a height of 32.6 metres (107 feet) which is located at Dehradun, Uttarakhand. This statue was inaugurated in the year 1965.

***

# Wright Brothers

✍ : **Harshit N.,** I PUC

